# ಮಹಾಮಾಯಿ (ನಾಟಕ)

## ಒಂದು ಮಾತು

ಮಹಾಮಾಯಿ ಇದೀಗ ಅಂಕಿತದಿಂದ ಎರಡನೆಯ ಮುದ್ರಣವಾಗುತ್ತಿದೆ. ಕಂಬತ್ತಳ್ಳಿ ಪ್ರಕಾಶ್ ಅವರಿಗೆ ವಂದನೆಗಳನ್ನು ಹೇಳುತ್ತೇನೆ. ಇದು ಇಂಗ್ಲೀಷ್ ಹಾಗೂ ಭಾರತದ ಅನೇಕ ಭಾಷೆಗಳಲ್ಲಿ ಅನುವಾದವಾಗಿದ್ದು ವ್ಯಾಪಕವಾಗಿ ಚರ್ಚೆಗೊಳಗಾದ ನಾಟಕ. ಚರ್ಚಿಸಿದ ನಿರ್ದೇಶಕರು ಹಾಗೂ ಪಂಡಿತರಿಗೆ ವಂದನೆಗಳನ್ನು ಹೇಳುತ್ತೇನೆ. ಈ ನಾಟಕದ ಇಂಗ್ಲೀಷ್ ಅನುವಾದಕ್ಕೆ ದೇಶದ ಬಹು ದೊಡ್ಡ ವಿಮರ್ಶಕರಾದ ಸನ್ಮಾನ್ಯ ಶ್ರೀ ಜಿ.ಎಸ್.ಆಮೂರ ಅವರು ಮಹತ್ವದ ಮುನ್ನುಡಿಯೊಂದನ್ನು ಬರೆದುಕೊಟ್ಟಿದ್ದಾರೆ. ಮಿತ್ರ ಸಿ. ನಾಗಣ್ಣನವರು ಸೊಗಸಾಗಿ ಕನ್ನಡಿಸಿಕೊಟ್ಟಿದ್ದಾರೆ. ಅದನ್ನಿನಲ್ಲಿ ಉಪಯೋಗಿಸಿಕೊಂಡಿದ್ದೇನೆ. ಅವರಿಗೂ ನನ್ನ ನಾಟಕಗಳ ಬಗ್ಗೆ ಬರೆದ ದಿವಂಗತ ಮಿತ್ರ ಡಿ.ಆರ್. ನಾಗರಾಜ ಅವರಿಗೂ ನನ್ನ ವಂದನೆಗಳು.

**– ಚಂದ್ರಶೇಖರ ಕಂಬಾರ**

## ಪಾತ್ರಗಳು

| | |
|---|---|
| ಗಿರಿಮಲ್ಲಿಗೆ | ಸೇಡುಮಾರಿ ೧,೨ |
| ತಾಯಿ (ಶೆಟವಿ ತಾಯಿ) | ರಾಜ |
| ಶಿವ | ಮಾರ |
| ಸಂಜೀವಶಿವ | ಮಂತ್ರಿ |
| ರಾಜಕುಮಾರಿ | ಸೈನಿಕ |
| ಪುಷ್ಪಗಂಧಿ | ಸೇವಕ |
| ಮದನತಿಲಕ | ಸೇವಕಿ |
| ಮಂಜರಿ | ಪಕ್ಷಿ |
| ಮಂಜರಿಯ ಭೂತ | ಕೀರ್ತಿಶಿವನ ಭೂತ |
| ಮದರಂಗಿ | ಭೂತಗಳು |
| ಮುದುಕಿ | ಹೆಂಗಸು |

## ಇಂತಿದು ನಾಂದಿ

ಗಿರಿಮಲ್ಲಿಗೆ : ಓಂ ಪ್ರಥಮದಲ್ಲಿ ಸಾವಳಗಿ ಶಿವಲಿಂಗನಿಗೆ ವಂದಿಸಿ

**ನಾಟಕ ಸುರು ಮಾಡುತ್ತೇವೆ:**

**ಇದು ಶೆಟವಿ ತಾಯಿಯ ಕಥೆ.**

**ಶೆಟವಿ ಎಂಬುದು ಸಾವಿನ ದೇವತೆಯ ಹೆಸರು.**

**ನಾಟಕದ ನಾಂದಿಯಲ್ಲಿ ಅವಳ ಹೆಸರನ್ನೇ ಸ್ಮರಿಸಬೇಕಾಗಿತ್ತು.**
**ಆದರೆ ಅವಳಿಗೆ ನಾಂದಿಗಿಂತ ಭರತವಾಕ್ಯದ ಮೇಲೇ ಕಣ್ಣು.**
**ಭರತವಾಕ್ಯದಿಂದ ನಾಟಕ ಸುರುಮಾಡಲುಂಟೆ?**
**ಅವಳ ಪರಿಚಯದಿಂದ ಪ್ರಸಂಗವ ಸುರುಮಾಡಬೇಕೆಂದರೆ,**
**ಅಗೋ ಅವಳೇ ಬಂದಳು.**

*(ತಾಯಿಯ ಮೇಕಪ್ ಮಾಡಿಕೊಳ್ಳುತ್ತಿರುವ ನಟನ ಪ್ರವೇಶ)*

ತಾಯಿ : ತಾಯಿ ನಾನು.
ಎಲ್ಲ ಚರಾಚರದ, ಎಲ್ಲ ಬೆಳಕು, ಆಕಾರಗಳ
ಅಂತಿಮಗುರಿ.
ಎಲ್ಲಾ ಅರಿವಿನ ಎಲ್ಲಾ ಇರವಿನ ತಾಯಿ
ನಿಮ್ಮ ಕಣ್ಣೆದುರಿಗೆ ಒಬ್ಬ ಮುದುಕಿ.
ಪ್ರತಿಯೊಂದು ಜೀವಜೀವರಿಗೆ ಅವರವರ ಅಂತಿಮ ಕ್ಷಣಗಳಲ್ಲಿ
ಅವರವರ ಭಾವಕ್ಕೆ ತಕ್ಕ ರೂಪ ಆಕಾರಗಳಲ್ಲಿ ಪ್ರತ್ಯಕ್ಷಳಾಗಿ
ದರ್ಶನ ಕೊಡಬೇಕು.
ಆದ್ದರಿಂದ ಕ್ಷಣಕ್ಷಣವೂ ಮೇಕಪ್ ಬದಲಿಸಿ
ವೇಷ ಕಟ್ಟಬೆಕು.
ಶೆಟಿವಿ ತಾಯಿ ಎಂಬುದು ನನ್ನ ಸ್ಥಳೀಯ ಹೆಸರು.
ಕ್ಷಮಿಸಿ, ಗಿರಿಮಲ್ಲಿಗೆ,

ಗಿರಿಮಲ್ಲಿಗೆ : ತಾಯಿ,

ತಾಯಿ : ಮುಂದುವರಿಸು.

*(ಹೋಗುವನು)*

ಗಿರಿಮಲ್ಲಿಗೆ : ತಾಯಿಯ ಮಾತು ನಿಮಗೆ ತಿಳಿಯಲಿಲ್ಲ, ಅಲ್ಲವೆ?
ಶೆಟಿವಿ ತಾಯಿ ಅಂದರೆ ಸಾವಿನ ದೇವತೆ
ನಾವು ನೀವು ಅಷ್ಟೇ ಅಲ್ಲ, ದೇವರೂ ಹೆದರುವ,
ಆದರೂ ನಿವಾರಿಸಲಾಗದ ಅಂತಿಮಗುರಿ.
ಬೆಟ್ಟ ಬೆಟ್ಟಗಳಲ್ಲಿ ಗುಡಿ ತಾಯಿಗೆ
ನಮ್ಮ ಬೆಟ್ಟದ ಒಳಗೂ ಗುಡಿ ಶೆಟಿವಿಗೆ.
ದಿಕ್ಕು ದಿಕ್ಕಿಗೆ ಒಂದು ಹೆಸರವಳಿಗೆ
ನಮ್ಮ ದಿಕ್ಕಿನಲವಳು ಶೆಟಿವಿ ಮಾಯಿ.

ಅಗೋ ಅಲ್ಲಿದೆಯಲ್ಲ ಮಾಯೀಬೆಟ್ಟದಡಿಯ ಗವಿ,
ಅಲ್ಲಿಂದ ಪ್ರವೇಶ ಮೊದಲಾಗುವ ಅಧೋಲೋಕದ ಒಡತಿ ಅವಳು.
ನಾನು ಗಿರಿಮಲ್ಲಿಗೆ.
ಶೆಟಿವಿ ತಾಯಿಯ ಸೇವಕಿ ಮತ್ತು ದೃಢಭಕ್ತೆ.
ಸಂಜೀವಶಿವ ಶೆಟಿವಿ ತಾಯಿಯ ಸಾಕುಮಗ.
ಅವನ ತಂದೆ ತಾಯಿ ಲೋಕದಾಟವ ಪೂರೈಸಿ ಸಾಯಲಿದ್ದಾಗ
ದಿಕ್ಕುದೆಸೆ ಇಲ್ಲದ ಕೂಸನ್ನು ತಾಯಿಯ ಕೈಗಿತ್ತು
ಯೋಗಭಾಗ್ಯ ಆಯುಷ್ಯ ಭವಿಷ್ಯವ ಕೊಟ್ಟು
ಕಾಪಾಡು ತಾಯೀ ಎಂದು ಮೊರೆಯಿಟ್ಟರು. ಶೆಟಿವಿ ತಾಯಿ
ದಯಮಾಡಿ ಕಂದನಿಗೆ ಜಯ ಒದಗಿಸಿ ಕೀರ್ತಿವಂತ
ವೈದ್ಯನ ಮಾಡುವೆನೆಂದು ಅಭಯವಾಕ್ಯ ನುಡಿದಾಗ
ಇಬ್ಬರೂ ನಿರುಮ್ಮಳ ಉಸಿರುಬಿಟ್ಟರು. ಇಬ್ಬರ ಜೀವಂಗಳ
ಅನಾಯಾಸ ನುಂಗಿ ನೀರು ಕುಡಿದಳು ತಾಯಿ.

ತಾಯಿ, ಅವಳ ಕಣ್ಣು ತಪ್ಪಿದರೆ ನಾನು,
ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಳಜಿಯಿಂದ ಬೆಳೆಸಿದ್ದಕ್ಕೆ
ಇಪ್ಪತ್ತು ವರ್ಷಗಳ ಬೆಳೆವಿಗೆಯನ್ನು ಇಪ್ಪತ್ತು ತಿಂಗಳಲ್ಲಿ
ಇಪ್ಪತ್ತು ತಿಂಗಳ ಬೆಳೆವಿಗೆಯನ್ನು ಇಪ್ಪುತ್ತು ವಾರ ದಿನಗಳಲ್ಲಿ
ಬೆಳದು, ಪಡ್ಡೆ ಪ್ರಾಯದ ತರುಣನಾಗಿ
ಕಾಂಬವರ ಕಣ್ಣು ತುಂಬಿದ್ದಾನೆ ಮಗ.
ಇಷ್ಟು ವರ್ಷ ಹೇಳಿದ ಹಿತನುಡಿ ಕೇಳುತ್ತ, ವ್ರತಾಚರಣೆ
ಮಾಡಿ, ಕಾಡಿನ ಗಿಡಮೂಲಿಕೆ ನಾರುಬೇರಿನ ಗುಣಸ್ವಭಾವಂಗಳ
ವಶೀಕರಿಸಿಕೊಂಡು, ವೈದ್ಯವಿದ್ಯದಲ್ಲಿ ಪರಿಣತನಾಗಿ
ಚಿಕ್ಕಹರೆಯದಲ್ಲಿ ದೊಡ್ಡ ಸಾಧನೆಗಳ ಮಾಡಿ,
ನಾಲ್ಕೂ ದಿಕ್ಕುದೇಶಗಳಲ್ಲಿ ನಾಲ್ಕಾರು ಚಂದದ ವಿಶೇಷಣಗಳಿಂದ
ಕೀರ್ತಿವಂತನಾಗಿದ್ದಾನೆ.
ಎಂಥದೇ ಭಯಂಕರ ರೋಗಿಯಿರಲಿ, ಇವನೊಮ್ಮೆ
ನಾಡಿ ಮಿಡಿತವ ನೋಡಿ ಮದ್ದುಕೊಟ್ಟರಾಯ್ತು.
ಗುಣವಾಗದ ಒಬ್ಬ ರೋಗೀಯೂ ಇಡೀ ನರಲೋಕದಲ್ಲಿಲ್ಲ!
ಯಾಕೆ ಗೊತ್ತೆ? ತಾಯಿ ಮಗನಿಗಿತ್ತ ವರದ
ಗುಟ್ಟೊಂದನ್ನು ಹೇಳಿ ನಿಮ್ಮನ್ನು ಬೆರಗುಗೊಳಿಸುತ್ತೇನೆ:

ಸಂಜೀವಶಿವ ರೋಗಿಯ ನಾಡಿ ಮಿಡಿತವ
ನೋಡುವಾಗ

ರೋಗಿಯ ಎಡಕ್ಕೆ ಇಲ್ಲವೆ ಬಲಕ್ಕೆ ತಾಯಿ ಪ್ರತ್ಯಕ್ಷಳಾಗುತ್ತಾಳೆ.
ತಾಯಿ ಹೀಗಿ ಅನುಗ್ರಹಿಸುವಾಗ ಸಂಜೀವ ಮತ್ತು ನನ್ನ ವಿನಾ
ಇನ್ನೊಬ್ಬರಿಗೆ ಕಾಣುವುದಿಲ್ಲ.
ತಾಯಿ ಪ್ರತ್ಯಕ್ಷಗೊಂಡು ನಿಂತ ಬದಿಯಿಂದಲೇ
ಸಂಜೀವ ರೋಗಿಯನ್ನೊಪ್ಪುತ್ತಾನೆ, ಇಲ್ಲ ಬಿಡುತ್ತಾನೆ.
ರೋಗಿಯ ಬಲದಲ್ಲಿ ಪ್ರತ್ಯಕ್ಷವಾದರೆ ವೈದ್ಯ ಮಾಡುತ್ತಾನೆ.
ಎಡದಲ್ಲಿ ಪ್ರತ್ಯಕ್ಷವಾದರೆ
ದಮ್ಮಯ್ಯಾ ದಯವಾಗು ಶಿವನೇ ಎಂದರೂ ಸಂಜೀವ
ರೋಗಿಗೆ ವೈದ್ಯ ಮಾಡುವುದಿಲ್ಲ. ಇದು ತಾಯಿ ಮಗನಿಗೆ ಕೊಟ್ಟ ವರ.
ತಾಯಿಗೆ ಮಗನ ಅಭ್ಯುದಯ ವಿನಾ ಬೇರೇನು ಬೇಕು?
ಈಗೀಗ ರೋಗಗಳ ಸಂಖ್ಯೆ ಬೆಳೆದಂತೆ
ಸಸ್ಯಜಾತಿ ಬೆಳೆಯುತ್ತಿಲ್ಲವಲ್ಲಾ ಎಂದು ಕೊರಗುತ್ತಾನೆ.
ಅದಕ್ಕೆಂದೇ ಮೂಲಿಕೆ ಬಳಸದ ಹೊಸ ಹೊಸ ಚಿಕಿತ್ಸಾವಿಧಾನಗಳನ್ನು
ಕಂಡು ಹಿಡಿಯುತ್ತಿದ್ದಾನೆ. ಅರೆಗಳಿಗೆ ಸಮಯ ಸಿಕ್ಕರೂ
ಕಾಡಿಗೆ ಓಡಿ ಓಡಿ ಗಿಡಮೂಲಿಕೆಗಳ ಶೋಧನೆಯಲ್ಲಿ ತೊಡಗುತ್ತಾನೆ.
ಪಡ್ಡೆ ಪ್ರಾಯದಲ್ಲಿ ಗೆಣೆಕಾರರ ಕಾಡು ಹರಟೆಗಳಲ್ಲಿ
ತೊಡಗಿರಬೇಕಾದ ಹುಡುಗ, ಇಂತೀಪರಿ ಏಕಾಂಗಿಯಾಗಿ
ರೋಗಿರೋಗಂಗಳ ಚಿಂತನೆ ಮಾಡುತ್ತ, ಬೇಸರದ
ಗಳಿಗೆಗಲಲ್ಲಿ ಅದೊಂದು ಜಿಂಕೆ ನೇತ್ರಾವತಿಯೊಂದಿಗೆ
ಚೆಲ್ಲಾಟವಾಡುತ್ತ ಇರುವುದು ಅವನ ವಯಸ್ಸಿಗೆ ಅಸಹಜವೆ.
ಇದು ಅವನ ವೈದ್ಯಶಾಲೆ.
ಮೂರುಜನ ರೋಗಿಗಳಿದ್ದಾರೆ. ಅವಳು ಅನಾಥ ಹೆಂಗಸು,
ಇರುವ ಮಗನೊಬ್ಬನೇ ಅವಳಿಗೆ ಆಸರೆ, ದನ ಕಾಯುವ
ಆತನಿಂದಲೇ ಅವಳಿಗೆ ಬೈಗು ಬೆಳಗು.
ಇನ್ನೊಬ್ಬ ಗೋರಿ ಅಗಿವ ಮಾರ, ಸ್ಮಶಾನವಾಸಿ.
ಸತ್ತವರ ಜೊತೆ ಮಾತಾಡುವಾತ ಅಂತ ಕೀರ್ತಿವಂತ.
ಮಲೆಯಾಳ ಮಾಂತ್ರಿಕರಿಗೆ ಬಂಗಾಳದ ತಾಂತ್ರಿಕರಿಗೆ
ಬಾಣಂತಿಯ ಕೈ ತಲೆಬುರುಡೆಗಳ ಒದಗಿಸುವಾತ.
ಪಾಪಪುಣ್ಯ ಏನೊಂದಉೂ ತಗಲದ ಮುಗ್ಧ, ಭಯಸ್ಥ.
ಭಯದಲ್ಲಿ ಹಳವಂಡಗಳ ಕಂಡುಕನವರಿಸುವಾತ.
ಮನೆಯಲ್ಲಿ ಹೆಣ ಬಿದ್ದಾಗಲ್ಲದೆ ಯಾರೊಬ್ಬರೂ ಇವನನ್ನ
ಜ್ಞಾಪಿಸಿಕೊಳ್ಳುವುದಿಲ್ಲ. ಎದುರಿಗಿದ್ದರೂ ಗಮನಿಸುವುದಿಲ್ಲ.
ನೀವೂ ಅಷ್ಟೆ, ಅವನನ್ನು ಮರೆತು ಬಿಡಿ.

ಕೊನೆಯವ ನಟಭಯಂಕರ, ಆಸ್ಥಾನದ ವಿದೂಷಕ.
ಘಾಟಿ ಮುದುಕ. ಸಾವಿನ ಭಯದಲ್ಲಿ ಯಾವಾಗಲೂ ಯಾರ್ಯಾರದೋ
ವೇಷ ಮತ್ತು ಹೆಸರಿನಲ್ಲಿರೋದರಿಂದ ಸ್ವಂತ ಹೆಸರೆಂಬುದಿಲ್ಲ.
ಅಷ್ಟೇ ಅಲ್ಲ, ಯಾವಾಗ ಯಾರ ವೇಷದಲ್ಲಿದ್ದಾನೆಂದೂ
ತಿಳಿಯುವುದಿಲ್ಲ. ಅನುಕೂಲಕ್ಕಾಗಿ ಅವನಿಗೆ
ಮದನತಿಲಕ ಎಂದು ಕರೆಯೋಣ. ಈಗ ನೋಡಿ:

## ಬಿಜು ಮಾಡಿದಳು ತಾಯಿ

*(ಸಂಜೀವಶಿವನ ವೈದ್ಯಶಾಲೆ, ಜಿಂಕೆ ನೇತ್ರಾವತಿ ಎಲ್ಲೆಂದರಲ್ಲಿ ಅಡ್ಡಾಡುತ್ತಿದೆ. ಮದನತಿಲಕ ಎದೆ ಹಿಡಿದುಕೊಂಡು ನರಳುತ್ತ ಒಂದು ಕಡೆ ಗೋಡೆಗೊರಗಿದ್ದಾನೆ. ಇನ್ನೊಂದು ಕಡೆ ಹುಡುಗನೊಬ್ಬನನ್ನು ತೊಡೆ ಮೇಲೆ ಚೆಲ್ಲಿಕೊಂಡು ಚಿಂತೆಯಲ್ಲಿ ಒಬ್ಬ ಹೆಣ್ಣು ಮಗಳು ಕೂತಿದ್ದಾಳೆ. ಮುದಿಮಾರ ಹೊಟ್ಟೆ ಹಿಡಿದುಕೊಂಡು ಮಧ್ಯೆ ಕೂತಿದ್ದಾನೆ. ಮದನತಿಲಕನನ್ನು ನೋಡುತ್ತಿದ್ದಂತೆ ಗುರುತು ಸಿಕ್ಕ ತನ್ನ ನೋವನ್ನು ಮರೆತು ಅವನ ಬಳಿ ಬರುತ್ತಾನೆ.)*

ಮಾರ : *(ನಗುತ್ತ)* ನೀನು ಅರಮನೆ ಹಾಸ್ಯಗಾರ ನಕಲಿ ಶ್ಯಾಮ ಅಲ್ಲವ?

ಮದನ ತಿಲಕ : ಹೌದು. ಎದೆ ನೋವಿನಿಂದ ಸಾಯ್ತಾ ಇದ್ದೀನಿ. ನನ್ನ ನೋಡಿ ನಗುತ್ತೀಯಲ್ಲ ಮಾರಾಯಾ!

ಮಾರ : ನನಗೂ ಹೊಟ್ಟೆನೋವು ಹಾಸ್ಯಗಾರಪ್ಪ, ಆದರೂ ನಿನ್ನ ನೋಡಿ ನಗೆ ಬಂತು. ಆ ದಿನ ನೀನು ಶಿವರಾತ್ರಿ ಶಿವನ ವೇಷ ಕಟ್ಟಿ ಕುಣಿದೆ ನೋಡು; ನಾವೆಲ್ಲ ಶಿವನ ಬಿಟ್ಟು ನಿನ್ನ ಪಾದಾನೇ ಹಿಡೀಲಿಲ್ಲವೇ? ಸಾಮಾನ್ಯನ ನೀನು? ಅದು ನೆನಪಾದಾಗಲೆಲ್ಲಾ ನಗೆ ಬರುತ್ತದೆ!

ಮದನ ತಿಲಕ : ಅದಾಗಿ ಆಗಲೇ ಹತ್ತಾರು ವರ್ಷ ಆಯಿತಲ್ಲ ಮಾರಾಯಾ, ಆಗಿ ನಿಂದಲೂ ಹೀಗೇ ನಗುತ್ತಿದ್ದೀಯಾ?

ಮಾರ : ಓಹೋ! ಅದೆಲ್ಲ ನಿನ್ನೆ ನಡೆದಹಾಗಿದೆ; ಮರೆಯೋದಕ್ಕಾಗುತ್ತದ? ಶಿವನನ್ನೇ ನೋಡಿ ನಗೋಭಂ ನೀನು! ನಿನಗೂ ಎದೆನೋವೆಂದರೆ ನಂಬಬೌದ ಶಿವ? ಈಗೇನು ರೋಗಿಯ ವೇಷ ಕಟ್ಟಿದ್ದೀಯೊ? ಇಲ್ಲಾ ರೋಗ ಬಂದಿದೆಯೊ?

ಮದನ ತಿಲಕ : ಎದೆನೋವು ಮಾರಾಯಾ, ಎದೆನೋವು! ಎದೆ ಅಂಬೋದು ಡೊಳ್ಳಿನ ಹಾಗೆ ಬಡ್ಕೋತಿದೆ. ಏನು ಹೇಳಲಪ್ಪ ನಿನಗೆ!

ಮಾರ : ಅಗೋ ವೈದ್ಯ ಬಂದ, ಅವನ ಮುಂದಾದರೂ ನಿಜ ಹೇಳಪ್ಪ.

*(ಸಂಜೀವಶಿವ ಬರುವನು)*

ಮದನ ತಿಲಕ : ಸ್ವಾಮೀ ವೈದ್ಯ ಮಹಾಶಯಾ, ಎದೆಯೊಳಗೆ ಸಾವು ಬೊಬ್ಬೆ ಹೊಡೀತಿದೆ. ಒಂದು ಕ್ಷಣ ತಡ ಮಾಡಿದರೂ ಆಮೇಲೆ ನೀನೇ ಪಶ್ಚಾತ್ತಾಪ ಪಡ್ತೀಯ. ಬೇಗ ಬಾಪ್ಪಾ….

ಹೆಂಗಸು : ಇರೋ ಒಬ್ಬ ಮಗನನ್ನಾದರೂ ಬದುಕಿಸಿಕೊಡು ನನ್ನಪ್ಪಾ,….

ಸಂಜೀವಶಿವ : *(ಹುಡುಗನ ಬಳಿಗೆ ಹೋಗುತ್ತ)* ಯಾವಾಗಿನಿಂದ ಹೀಗೆ ಸೆಟೆದು ಕೊಂಡಿದ್ದಾನೆ?

ಹೆಂಗಸು : ಎರಡು ತಾಸಾಯಿತು. ಜೀವ ಇನ್ನೂ ಕುಟುಕುಟು ಅಂತಿದೆ. ನೀನೊಮ್ಮೆ ನಾಡಿ ಹಿಡಿದು ನೋಡಿದರೆ ಸಾಕು, ಬದುಕುತ್ತಾನೆ ಅಂತಾರೆ. ಬೇಗ ನಾಡಿ ಹಿಡಿ ನನ್ನಪ್ಪಾ.

ಮಾರ : ಬಿಸಿಲಲ್ಲಿ ಅಲೆದಾಡಿದನ?

ಹೆಂಗಸು : ಬೆಟ್ಟದ ಮಾಯೀ ಗವಿಯ ಕಡೆ ಹೋಗಿದ್ದವನು ಮನೆಗೆ ಬಂದದ್ದೇ ಮಲಗಿಬಿಟ್ಟ ನನ್ನಪ್ಪ.

ಮಾರ : ಅಲ್ಲಗ್ಯಾಕವ್ವ ಬಿಟ್ಟಿದ್ದೆ? ಗವಿಯೊಳಕ್ಕೆ ಹೊಕ್ಕವರು ಹೊರಗೆ ಬರೋದಿಲ್ಲಾ ಅಂತ ಗೊತ್ತಿಲ್ಲವ ನಿನಗೆ? ಅಗೊ ಬಂತು ಬಂತು!

*(ಒಮ್ಮೆಲೇ ಮಾರ ದೇವರನ್ನು ಕಂಡ ಹಾಗೆ ಭಯ ಭಕ್ತಿಯಿಂದ ಕಣ್ಣಗಲಿಸಿ ಎದುರು ನೋಡುತ್ತ)*

**ಅಗೋ ಬಂತು**
**ದಂಡಿ ಮಾರಮ್ಮನ ಸವಾರಿ ಬಂತು!**
**ಹಲ್ಲು ಕಿರಿವ ತಲೆಬುರಡೆ ಅಸ್ಥಿಪಂಜರ ವೇಷವಾಗಿ**
**ಬಿಜು ಮಾಡಿದಳು ತಾಯಿ ಉಘೆ ಉಘೇ!**

*(ಶೆಟವಿ ತಾಯಿ ಬರುವಳು. ಮಾರನಿಗೆ ತಾಯಿ ಕಾಣಿಸಿದ್ದು ಸಂಜೀವನಿಗೆ ಆಶ್ಚರ್ಯವಾಗಿದೆ. ಮಾರಾ ತಾಯಿಯನ್ನು ನೋಡಿ ಗಾಬರಿಗೊಳ್ಳುವನು. ತಾಯಿ ಸಂಜೀವಶಿವ ಮತ್ತು ಮಾರ ಇಬ್ಬರ ಹೊರತು ಬೇರೆಯವರಿಗೆ ಕಾಣಿಸುವುದಿಲ್ಲ. ಆದರೆ ಇವರಿಬ್ಬರ ಮುಖದಲ್ಲಾದ ಬದಲಾವಣೆಯನ್ನು ಮದನತಿಲಕ ಗಮನಿಸುವನು. ಶೆಟವಿತಾಯಿ ನಗುತ್ತ ಮಾರನಿದ್ದಲ್ಲಿಗೆ ಬಂದು ಅವನ ಬಲಕ್ಕೆ ನಿಲ್ಲುವಳು. ಸಂಜೀವ ಶಿವ ಓಡಿ ಬಂದು ಮಾರನ ನಾಡಿ ಮಿಡಿತ ನೋಡತೊಡಗುವನು. ತಾಯಿ ಅಲ್ಲಿ ನಿಂತಿರುವ ತನಕ ನೋಡಿ "ಮದ್ದು ಕೊಡುವಾ, ವಾಸಿಯಾಗುತ್ತದೆ" ಎಂದು ಹೇಳುವನು. ಆಮೇಲೆ ತಾಯಿ ಮದನ ತಿಲಕನಲ್ಲಿಗೆ ಹೋಗಿ ಅವನ ಬಲಕ್ಕೆ ನಿಲ್ಲುವಳು. ಸಂಜೀವ ಶಿವ ಅಲ್ಲಿಗೆ ಹೋಗಿ ಮದನತಿಲಕನ  ನಾಡಿ ನೋಡಿ 'ಮದ್ದು ಕೊಡುವಾ ಸರಿ ಹೋಗುತ್ತದೆ"-ಎನ್ನುವನು. ಈಗ ಸಂಜೀವಶಿವ ತಾಯಿಗೆ ಹುಡುಗನನ್ನು ತೋರಿಸುವನು. ತಾಯಿ ಹುಡುಗ ಬಿದ್ದಲ್ಲಿಗೆ ಹೋಗಿ ಅವನ ಎಡಗಡೆ ನಿಲ್ಲುವಳು. ಸಂಜೀವಶಿವ ಖಿನ್ನನಾಗುವನು.)*

ಸಂಜೀವಶಿವ : ಕಾಲ ಮೀರಿದೆ ತಾಯಿ.

ಮಾರ : ನನ್ನಂಥ ಮುದುಕರು  ಬದುಕಿದರೆ ಚಂದವೆ? ಈ ಕಂದ ಬದುಕಬೇಕು ನನ್ನಪ್ಪ! (ತಾಯಿ ಮಾಯವಾಗುವಳು) ಶಿವ ಶಿವಾ!

ಹೆಂಗಸು : ಇವನೊಬ್ಬನೇ ನನಗಿರೋ ಆಧಾರ ನನ್ನಪ್ಪಾ.

ಮಾರ : ನಮ್ಮಂಥ ಮುದಿಗೊಡ್ಡುಗಳಿಗೆ ಆದ ಹಾಗೆ ನಿನ್ನೆ ಮಗನಿಗೆ ತಾಯ ಕೃಪೆ ಒದಗಲಿಲ್ಲಮ್ಮ! ಹೊರಡು ಇನ್ನೇನೂ ಮಾಡಲಾಗುವುದಿಲ್ಲ.

ಮದನತಿಲಕ : ಹೌದಯ್ಯ ಇದನ್ನು ಹೇಳಬೇಕಾದವನು ವೈದ್ಯನಲ್ಲವೆ?

ಮಾರ : ಅವನಾದರೂ ಏನು ಹೇಳಿಯಾನು ಹಾಸ್ಯಗಾರಪ್ಪ? ಮಗುವನ್ನು ಬದುಕಿಸಬಲ್ಲನ? ನೀನೇ ಹೇಳು.

ಹೆಂಗಸು : ನನ್ನಪ್ಪಾ....

ಸಂಜೀವಶಿವ : ಆಗಲೇ ಹೇಳಿದೆನಲ್ಲಮ್ಮ ನಾನೇನೂ ಮಾಡಲಾರೆ. ತಗೊಂಡ್ಹೋಗು.

ಮಾರ : ನೀನು ಅಳೋವಷ್ಟು ಅತ್ತು ಎದೆ ಹಗುರು ಮಾಡಿಕೊ. ಅಷ್ಟರಲ್ಲಿ ನಾನೂ ಗೋರಿ ತೋಡಿರ್ತೀನಿ. (ಕಣ್ಣೀರು ಸುರಿಸುತ್ತ) ಮಕ್ಕಳಿಗಾಗಿ ಗೋರಿ ತೋಡು ವಂಥ ಹೀನ ಕೆಲಸ ಇನ್ನೊಂದಿಲ್ಲ. ನಡಿಯಮ್ಮ ಹೋಗೋಣ. ತಾಯಿ ಆ ಕಂದನ್ನ ಕಾಪಾಡಿದ್ದರೆ ಚೆನ್ನಾಗಿತ್ತಪ್ಪ (ಹೊರಡುವನು)

ಸಂಜೀವಶಿವ : *(ಮಾರನಿಗೆ)* ಮದ್ದು ತಗೊಂಡು ಹೋಗು.

ಮಾರ : ಮಗುವಿನ ಹೆಣಕ್ಕೆ ತಡವಾಗಬಾರದು. ತಾಯಿಯ ಅಪ್ಪಣೆ ಆಯ್ತಲ್ಲ, ನಾರೋ ಬೇರೋ ಕುದಿಸಿ ಕುಡೀತೀನಿ ಬಿಡಪ್ಪ.

*(ಹೋಗುವನು. ಜೊತೆಗೆ ಹೆಂಗಸೂ ರೋದಿಸುತ್ತಾ ಮಗುವನ್ನು ಎತ್ತಿಕೊಂಡು ಹೋಗುವಳು. ಸಂಜೀವಶಿವ ಅವಮಾನದಿಂದ ಖಿನ್ನನಾಗಿದ್ದಾ ನೆ. ಮದನ ತಿಲಕ ಇದನ್ನು ಗಮನಿಸಿದ್ದಾನೆ.)*

ಮದನ ತಿಲಕ : ಶಿವನಾಣೆ ಮಾರಾಯಾ, ನೀನು ನಾಡಿ ಹಿಡಿದದ್ದೇ ನನಗೆ ಗೊತ್ತಾಗಿ ಬಿಟ್ಟಿತು. ರೋಗ ವಾಸಿಯಾಯ್ತೆಂದು. ಇಕಾ ನೋಡು: ಹೃದಯ ಈಗ ಎಷ್ಟು ಹಗುರಾಗಿದೆಯೆಂದರೆ ನೀನು ಸಮ್ಮತಿಸಿದರೆ ಒಂದ ಪದ ಹಾಡೋಣ ಅಂತ ಇದ್ದೀನಿ.

ಸಂಜೀವಶಿವ : ದಯಮಾಡಿ ಬೇಡ ಅಜ್ಜ. ಮದ್ದರೆದು ಕೊಡೋತನಕ ಸುಮ್ಮನಿರು.

ಮದನ ತಿಲಕ : ನಾನು ಸುಳ್ಳು ಹೇಳಲಿಲ್ಲ. ವೈದ್ಯ ಮಹಾಶಯ. ನಿಜವಾಗಿ ನೀನು ಅವಕಾಶ ಕೊಡೋದಾದರೆ ನಾಲ್ಕು ಹೆಜ್ಜೆ ಕುಣಿದಾಡುವಷ್ಟು ಉಲ್ಲಾಸವಾಗಿದೆ ನನಗೆ. ಕುಣಿದಾಡಲ?

ಸಂಜೀವಶಿವ : *(ಮದ್ದರೆಯುತ್ತ)* ಎಲಾ ಮುದುಕ, ಏನಾಗಿದೆ ನಿನಗೆ?

ಮದನ ತಿಲಕ : ಹೇಳಿದೆನಲ್ಲಪ್ಪ, ಬದುಕಿದೆ ಅಂತ.

ಸಂಜೀವಶಿವ : ಭಲೇ ಮುದುಕ ನೀನು!

ಮದನ ತಿಲಕ : ಅದ್ಯಾಕಪ್ಪ ಮುದುಕ ಮುದುಕ ಅಂತೀ ನನಗೆ? ಅಷ್ಟೊಂದು ವಯಸ್ಸಾದವನ ಹಾಗಿದ್ದೀನ ನಾನು? ಏನೋ ಎದೆನೋವಿತ್ತು, ಸ್ವಲ್ಪ ಸೋತಿದ್ದೆ. ಈಗ ನೋಡು:

ಸಂಜೀವಶಿವ : ಎಷ್ಟು ವಯಸ್ಸು ನಿನಗೆ?

ಮದನ ತಿಲಕ : ವಯಸ್ಸು ಅಂದೆಯಾ ತಮ್ಮಾ? ಈ ದೇಹಕ್ಕೆ ಎಪ್ಪತ್ತೋ ಎಂಬತ್ತೋ ಆಗಿರಬಹುದು. ತನ್ನ ಭಾರ ತಾನೇ ಹೊತ್ತು ಅಡ್ಡಾಡ್ತದೆ. ದಿನಾ ಬೆಳಿಗ್ಗೆದ್ದರೆ ಹುಡುಗಿಯರ ಕನಸಿನಿಂದ ಭಾರವಾಗಿರ್ತದೆ. ಮೊನ್ನೆ ಮೊನ್ನೆ ಒಂದು ಹುಡುಗೀನ್ನೋಡಿ ಬಂದೆ. ಅವಳ ಬಗ್ಗೆ ಒಂದು ಪದ ಹಾಡಲಾ?

ಸಂಜೀವಶಿವ : ಎಲಾ ಇವನ! ಮದ್ದರೆದು ಕೊಡ್ತೀನಿರಪ್ಪ.

ಮದನ ತಿಲಕ : *(ಮೆಲ್ಲಗೆ ಕಿವಿಯಲ್ಲಿ)* ಹಾಗೆಯೇ ನನಗೆ ಯೌವನ ಎಡಪ್ರಾಯ ವೃದ್ಧಿಯಾಗುವ ಮದ್ದೇನಾದರೂ ಇದ್ದರೆ ಕೊಡಪ್ಪ; ಹೊಸ ಹುಡಿಗೀನ್ನ ಕಟ್ಟಿಕೊಂಡಿದ್ದೇನೆ.

ಸಂಜೀವಶಿವ : ಹಾಗೋ? ಅದನ್ನೂ ಕೊಡ್ತೀನಿರು.

ಮದನ ತಿಲಕ : ಹಾಗಿದ್ದರೆ, ಅಲ್ಲೀತನಕ ನೀನು ಕ್ಷಮಿಸೋದಾದರೆ-ಚಾಡಿ ಹೇಳಿ ಅಭ್ಯಾಸವಿದೆ ನನಗೆ, ಹೇಳಿದರೆ ನಿಂದೇನೂ ತಕರಾರಿಲ್ಲ ತಾನೆ?

ಸಂಜೀವಶಿವ : ನೀನು ಕ್ಷಮಿಸೋದಾದರೆ ಚಾಡಿ ಕೇಳಿ ಅಭ್ಯಾಸವಿಲ್ಲ ನನಗೆ. ಹೇಲಬೇಡ ಅಂದರೆ ನಿಂದೇನೂ ತಕರಾರಿಲ್ಲ ತಾನೆ?

ಮದನ ತಿಲಕ : ಛೇ! ಚಾಡಿ ಹೇಳಕೇಳುವ ಅಭ್ಯಾಸ ನಿನಗಿರಲೇಬೇಕು, ನನ್ನ ಹಾಗೆ. ಇಲ್ಲದಿದ್ದರೆ ನನ್ನ ಪ್ರಪಂಚ ಜ್ಞಾನವೇ ಹುಸಿ ಅಂದೇನು.

ಸಂಜೀವಶಿವ : ನಿನಗೇನೋ ಸರಿ.ನನಗೂ ಆ ಅಭ್ಯಾಸ ಇದೆ ಅಂತ ನಿನಗ್ಯಾಕನಿಸ್ತು?

ಮದನ ತಿಲಕ : ನಿನಗೂ ನನ್ನ ಹಾಗೆ ಕಿವಿ ಬಾಯಿ ದೊಡ್ಡವಾಗಿರೋದರಿಂದ.

ಸಂಜೀವಶಿವ : ಆಯ್ತು, ಏನೀವಾಗ?

ಮದನ ತಿಲಕ : ಯಾರ ಬಗ್ಗೆ ಸುರು ಮಾಡೋಣ?

ಸಂಜೀವಶಿವ : ಛೇ ಹೇಳಲಿಲ್ಲವೆ ನನಗೆ ಅಭ್ಯಾಸ ಇಲ್ಲ ಅಂತ.

ಮದನ ತಿಲಕ : ಆದರೆ ನಿಜ ಹೇಳ್ತೀನಣ್ಣಾ ಇದೊಂದು ಬಾರಿ ಚಾಡಿ ಕೇಳು. ಆಮೇಲೆ ನಿನಗೇ ಗೊತ್ತಾಗುತ್ತದೆ, ಅದು ನಿನ್ನ ಹುಟ್ಟುಗುಣ ಅಂತ. ಚಾಡಿಹೇಳ ಕೇಳೋರಿಬ್ಬರು ಒಂದು ಕಡೆ ಸೇರಿದರೆ ಎಷ್ಟೊಂದು ಸೃಜನಶೀಲರಾಗ ಬಹುದು ಗೊತ್ತೇನು?

ಸಂಜೀವಶಿವ : ನನಗೆ ನಿನ್ನ ಉಪದೇಶ ಬೇಕಿಲ್ಲ.

ಮದನ ತಿಲಕ : ನಾನೂ ಕೊಡೋದಿಲ್ಲಪ್ಪ; ಕೇಳಿಸಿಕೊಂಡರೆ ತಪ್ಪಿಲ್ಲ, ಅಷ್ಟೆ. ಬೇಕೆಂದರೆ ಕೇಳಿಸಿಕೊ, ಬ್ಯಾಡವಾದರೆ ಕಿವಿ ಮುಚ್ಚಿಕೊ-ಅಂದರೆ ನಾನು ಹೇಳಿದ ಚಾಡಿ ಮಾತು ನನಗೇ ವಾಪಸಾಗ್ತದೆ.

ಸಂಜೀವಶಿವ : ನೀನು ಚಾಡಿ ಹೇಳಲೇ ಬೇಕ?

ಮದನ ತಿಲಕ : ಹೇಳಿದೆನಲ್ಲಪ್ಪ, ಅದೊಂದು ಕೆಟ್ಟ ಚಾಳಿ ಇದೆ ಅಂತ. ಯಾರ ಬಗ್ಗೆ ಸುರು ಮಾಡೋಣ?

ಸಂಜೀವಶಿವ : ಆಯ್ತು, ಹಾಗಾದರೆ ದೇವರ ಬಗ್ಗೆ ಚಾಡಿ ಹೇಳು, ಕೇಳುವಾ.

ಮದನ ತಿಲಕ : ಒಳ್ಳೆ ಗಿರಾಕೀನ್ನೇ ಹಿಡಿದುಕೊಟ್ಟೆ ಬಿಡು. ನಮ್ಮ ನಾಡಿ ನೋಡೋವಾಗ ನೀನು ಮತ್ತು ಮಾರ ಯಾವುದೋ ಅದೃಶ್ಯ ದೇವತೆಯ ಜೊತೆ ಕಣ್ಣಲ್ಲೇ ಮಾತಾಡಿದ ಹಾಗಿತ್ತಲ್ಲ, ಯಾರದು?

ಸಂಜೀವಶಿವ : ಈ ಬಗ್ಗೆ ಮಾರನನ್ನೇ ಕೇಳಬೇಕು ನೀನು.

ಮದನ ತಿಲಕ : ಎಷ್ಟು ಮುಗ್ಧನಿದ್ದೀಯೋ ತಮ್ಮಾ; ನಿನ್ನ ಕಂಡರೆ ನನಗೆ ಹೊಟ್ಟೆ ತುಂಬ ಸಂತೋಷವಾಗುತ್ತಪ್ಪ. ನನಗೆ ನಿನ್ನ ತಂದೆ ಕೀರ್ತಿಶಿವನ ಪರಿಚಯ ಕೂಡ ಇತ್ತು.

ಸಂಜೀವಶಿವ : ಹೌದ? ನೀನ್ಯಾರು?

ಮದನ ತಿಲಕ : ಅರಮನೆಯ ವಿದೂಷಕ. ನಿನ್ನ ತಂದೆಯ ಮಿತ್ರ ನಾನು. ಇಬ್ಬರೂ ಜೊತೆಯಲ್ಲೇ ನಾಟಕವಾಡುತ್ತಿದ್ದಿವಿ. ಅವನು ಯಾವಾಗಲೂ ನಾಯಕ ವೇಷ ಕಟ್ಟುತ್ತಿದ್ದನಾದ್ದರಿಂದ ಸುಲಭವಾಗಿ ಸಾವಿಗೆ ಸಿಕ್ಕುಬಿದ್ದ. ನಾನು ದಿನಾ ಹೆಸರು ಬದಲಿಸಿ ಯಾವ್ಯಾವುದೋ ವೇಷ ಕಟ್ಟುವೆನಾದ್ದರಿಂದ ಸಾವಿಗಿನ್ನೂ ನನ್ನ ಗುರುತೇ ಸಿಕ್ಕಿಲ್ಲ. ಈಗೇನಾದರೂ ನಿನ್ನತಂದೆ ಜೀವಂತ ವಾಗಿದ್ದಿದ್ದರೆ ನನ್ನ ಹಾಗೇ ಇರ್ತಿದ್ದ ಅಥವಾ ಇನ್ನೂ ಚೆನ್ನಾಗಿರ್ತಿದ್ದ. ಯಾಕೆಂದರೆ ಅವನು ಕೊನೇತನಕ ಪ್ರೀತಿಸಿದ್ದು ನಿನ್ನ ತಾಯಿಯನ್ನು ಮಾತ್ರ. ನಾನು ಈತನಕ ವೇಷಕ್ಕೊಬ್ಬಳಂತೆ ಹೆಂಗಸನ್ನ ಕಟ್ಟಿಕೊಂಡದ್ದರಿಂದ ಹೀಗಿದ್ದೀನಿ. ಮದುವೆಯಾದ ಮಡದಿಯರೇ ನನಗೆ ಎಂಟು ಜನ. ಎಂಟೂ ಜನ ಸತ್ತು ಹೋದರು. ಒಂದಷ್ಟು ದಿನ ದುರ್ದೈವದ ಜೊತೆಗಿದ್ದೆ. ಈ ಎದೆ ನೋವಿನಿಂದಾಗಿ ಆಸಕ್ತಿ ಮೊಂಡಾಗಿ ತಂಗಳು ಹಾಸಿಗೆಯಲ್ಲಿ ಬಿದ್ದುಕೊಂಡು ಒದ್ದಾಡುವುದಕ್ಕಿಂತ ಎದ್ದು ಇನ್ನೊಂದು ಹೆಣ್ಣನ್ನಾದರೂ ನೋಡುವುದು ವಾಸಿಯೆಂದು ಎದ್ದೆ. ಸಿಕ್ಕೇ ಬಿಟ್ಟಳು ಒಬ್ಬ ಹುಡುಗಿ! ರೋಗ ವಾಸಿಯಾದ ಮೇಲೆ ಇರಲಿ ಅಂತ ಇನ್ನೂ ಮಡಗಿದ್ದೀನಿ. ಹೆಸರು ಮದರಂಗಿ. ನೀನು ದೊಡ್ಡ ಮನಸ್ಸು ಮಾಡಿ, ನಿನ್ನ ತಂದೆಯ ದೋಸ್ತಿ ಅಂತ ತಿಳಿದು ಯೌವನ ಜಾಸ್ತಿಯಾಗುವ ಮದ್ದು ಕೊಟ್ಟರೆ....

ಸಂಜೀವಶಿವ : ಕೊಡ್ತೀನಜ್ಜ. ನನ್ನ ತಂದೆ ತಾಯಿಗಳ ಬಗ್ಗೆ ಗೊತ್ತಿದೆಯಂದೆಯಲ್ಲ, ಮೊದಲು ಅದನ್ನ ಹೇಳು.

ಮದನ ತಿಲಕ : ನೀ ಕೊಡುವ ಎಡಪ್ರಾಯದ ಮದ್ದು ನನ್ನ ಮೇಲೆ ಪರಿಣಾಮ ಬೀರಿದ್ದು ಖಾತ್ರಿಯಾದರೆ ಎಲ್ಲವನ್ನೂ ವಿವರವಾಗಿ ಹೇಳ್ತೇನೆ, ಆಯ್ತ?

ಸಂಜೀವಶಿವ : ಬೆರಿಕಿ ಮುದುಕ ನೀನು. ಹೋಗಲಿ ನಿನ್ನ ಬಗ್ಗೆ ಆದರೂ ಇನ್ನಷ್ಟು ತಿಳಿಸು.

ಮದನ ತಿಲಕ : ನೀನು ಮಾತಿಗೊಮ್ಮೆ ಮುದುಕ ಅನ್ನೋದನ್ನ ಬಿಟ್ಟರೆ ಹೇಳ್ತೀನಿ. ನನ್ನಹುಡುಗಿ ಮದರಂಗಿ. ನನ್ನದು ಮದರಂಗಿ ಧರ್ಮ, ಮದರಂಗಿ ದೇಶ, ಮದರಂಗಿ ಕಾಲ. ಅವಳಿಗಾಗಿ ನಾನೊಂದು ವ್ಯಾಕರಣ ಬರೆದಿದ್ದು ಅದು ಆಸ್ಥಾನ ವೈಯಾಕರಣರ ಅಸೂಯೆಗೆ ಕಾರಣವಾಗಿದೆ. ಉದಾ ಹರಣೆಗೆ ವಿಭಕ್ತಿಪ್ರತ್ಯಯ ಪ್ರಕರಣ ಹೀಗಿದೆ: ನನ್ನ ಹುಡುಗಿಯ ಹೆಸರು ಮದರಂಗಿ-ಪ್ರಥಮಾ ವಿಭಕ್ತಿ. ನಾನು ಪ್ರೀತಿಸೋದು ಮದರಂಗಿಯನ್ನು-ದ್ವಿತೀಯಾ. ನಾನು ಬದುಕಿರೋದು ಮದರಂಗಿಯಿಂದ ತೃತೀಯಾ. ನನ್ನಪ್ರೀತಿ ಮದರಂಗಿಗೇ ಮೀಸಲು-ಚತುರ್ಥಿ. ನಾನೀಗ ಅಗಲಿರೋದು ಮದರಂಗಿಯಿಂದ-ಪಂದಮಿ. ನಾನು ಮದರಂಗಿಯ ಭಕ್ತ ಷಷ್ಠಿ. ನ್ನನ ಚಿತ್ತವೃತ್ತಿಯಿರೋದು ಮದರಂಗಿಯಲ್ಲಿ-ಸಪ್ತಮಿ. ಎಲೌ ಮದರಂಗಿಯೇ ನನ್ನನ್ನು ಕಾಪಾಡು-ಸಂಬೋಧನೆ. ಹ್ಯಾಗಿದೆ?

ಸಂಜೀವಶಿವ : ಭಲೆ! ಕಾಮ ತನ್ನ ಬಾಣಗಳನ್ನೆಲ್ಲ ನಿನ್ನ ಮೇಲೇ ಬಿಟ್ಟ ಹಾಗಾಡ್ತೀಯಲ್ಲ ಮುದುಕಾ.

ಮದನ ತಿಲಕ : ಮತ್ತೆ ಮುದುಕಾ ಅಂತೀಯಲ್ಲ ಮಾರಾಯಾ. ಮದರಂಗೀನೇ ನನಗೆ ಹುಡುಗಾ ಅಂತಾಳೆ.

ಸಂಜೀವಶಿವ : ಆ ಹೆಂಗಸು ನಿನ್ನನ್ನ ಏನಂತಾಳೆ?

ಮದನ ತಿಲಕ : ಹೆಂಗಸು ಅನ್ನಬ್ಯಾಡಯ್ಯಾ,-ಅಪ್ಸರೆ ಅಪ್ಸರೆ ಅವಳು. ಅವಳನ್ನ ನೋಡಿದ ಮೇಲೆ ನನ್ನ ಎಂಟೂ ಜನ ಹೆಂಡಂದಿರನ್ನ ಎಷ್ಟು ಕೀಳಾಗಿ, ಎಷ್ಟು ತಿರಸ್ಕಾರವಾಗಿ, ಎಷ್ಟು ಅಸಹ್ಯಕರವಾಗಿ ಕಾಣ್ತೀನಿ ಅಂದರೆ; ಅಯ್ಯೋ ಅಂಥಾ ಮುದಿಗೂಬೆಗಳ ಜೊತೆಗೆ ಇದ್ದೆನಲ್ಲಾ ಅಂತ ನನ್ನ ಮುಖದ ಮ್ಯಾಲೆ ನಾನೇ ಉಗಿದುಕೊಳ್ತೀನಿ ನೆನಪಾದಾಗಲೆಲ್ಲಾ, ಗೊತ್ತ?

ಸಂಜೀವಶಿವ : (ನಗುತ್ತ) ಹೆಂಡಂದಿರ ವಿಷಯವಾಗಿ ಇಷ್ಟೊಂದು ಕೀಳು ಭಾವನೆ.....

ಮದನ ತಿಲಕ : ವೈದ್ಯಮಹಾಶಯಾ, ಹೆಂಡಂದಿರ ವಿಷಯ ಇನ್ನೂ ಬ್ರಹ್ಮಚಾರಿಯಾಗಿರುವ ನಿನಗೇನು ಗೊತ್ತು? ಅವರ ಕಪಟ, ಅವರ ನಾಟಕ, ಅವರ ಮೋಸ, ಅವರ ಗೊಣಗಾಟ-ಒಂದೇ ಮಾತಿನಲ್ಲಿ ಅವರ ಬಗ್ಗೆ ಹೇಳಲಾ ಹುಡುಗ? ಒಟ್ಟಿನಲ್ಲಿ ಅವರ ದುಷ್ಟತನ, ಅವರ ನೀಚತನ, ಅವರ ಸ್ವಾರ್ಥ, ಅವರ ನಿರ್ದಯತನ, ಅವರ ಚಂಚಲತನ, ಅವರ ಸುಳ್ಳುತನ, ಅವರ ಕಣ್ಣೀರ್ತನ, ಅವರ ಸೊಗಲಾಡಿತನ, ಅವರ ವಾಚಾಳಿತನ, ಅವರ....

ಸಂಜೀವಶಿವ : ಇಷ್ಟೆಲ್ಲಾ ಮದರಂಗೀನೇ ಹೇಳಿಕೊಟ್ಟಳಾ ನಿನಗೆ?

ಮದನ ತಿಲಕ : ಛೇ ಛೇ ಅವಳ ವಿಷಯ ನಿನಗೆ ಗೊತ್ತಿಲ್ಲ ಮಗು. ಹೇಳಲೇನಯ್ಯ? ನಡೆದಾಡುವ ಒಂದು ಎಳೆ ಬಳ್ಳಿಯ ಕಲ್ಪಿಸಿಕೊಳ್ಳಯ್ಯ, ನಳನಳಿಸಿ ಬಳಲುತ್ತ ಸುಳಿದಾಡುವ ಕೋಮಲವಾದ ಒಂದು ಬಳ್ಳಿ! ಆ ಬಳ್ಳಿಯ ಮ್ಯಾಲೆ ಅರಳಿದೆಯಲ್ಲಯ್ಯ ಒಂದು ಕೆಂಪು ಕಮಲ! ಏನಯ್ಯಾ ಆ ಕೆಂಪು ಕಮಲದಲ್ಲಿ ಇನ್ನೆರಡು ನೀಲಿ ಕಮಲಗಳು ಅರಳಿವೆಯಲ್ಲಯ್ಯಾ!

ಸಂಜೀವಶಿವ : ಸ್ವಾಮೀ, ಒಂದನೇ ಸುಳ್ಳು, ಬಳ್ಳಿ ನಡೆದಾಡೋದಿಲ್ಲ. ಎರಡನೇದ್ದು ಅಂಥ ಬಳ್ಳೀಗೆ ಕಮಲ ಬಿಡೋದಿಲ್ಲ. ಬಿಟ್ಟರೂ ಅಂಥ ಕಮಲದಲ್ಲಿ ಇನ್ನೆರಡು ನೀಲಿ ಕಮಲ! ಛೇ ಛೇ....

ಮದನ ತಿಲಕ : ಕಲ್ಪಿಸಿಕೊಳ್ಳಯ್ಯಾ ಅಂದರೆ.....

ಸಂಜೀವಶಿವ : ನೀನು ಹೇಳಿದಂಥಾ ಹೆಂಗಸನ್ನ ಕಲ್ಪಿಸಿಕೊಂಡರೇ ಭಯವಾಗುತ್ತಲ್ಲ ಸ್ವಾಮೀ.

ಮದನ ತಿಲಕ : ಛೇ ವೈದ್ಯರು ಇಷ್ಟೊಂದು ಅರಸಿಕರೆ! ಹಾಗಲ್ಲ ಹುಡುಗಾ, ಸುಳಿದಾಡುವ ಬಳ್ಳಿ ಅಂದರೆ ಮದರಂಗಿಯ ದೇಹ ಬಳ್ಳಿ ಹಾಗಿದೆ ಅಂತ ಅರ್ಥ. ಕೆಂಪು ಕಮಲ ಅಂದರೆ ಅವಳಮುಖ ಅರಳಿದ ಕೆಂಪು ಕಮಲದ ಹಾಗಿದೆ ಅಂತ. ಅದರಲ್ಲೆರಡು ನೀಲಿ ಕಮಲ ಅಂದರೆ ಎರಡು ಕಣ್ಣು ಅಂತ ಅರ್ಥ. ಗೊತ್ತಾಯ್ತಾ ಮಾರಾಯಾ?

ಸಂಜೀವಶಿವ : ಆದರೂ ಭಯ ತಪ್ಪೋದಿಲ್ಲ ಸ್ವಾಮೀ. ಇಕಾ ನಿನ್ನ ಮದ್ದು ತಯಾರಾಯ್ತು. ದಿನಕ್ಕೆ ಮೂರು ಬಾರಿ ಒಂಬತ್ತು ದಿನ ಸೇವಿಸಿ ಆಮೇಲೆ ಮದರಂಗಿಯ ಬಳಿಗೆ ಹೋಗು.

ಮದನ ತಿಲಕ : ಅಂದರೆ ಯೌವನದ ಮದ್ದು....?

ಸಂಜೀವಶಿವ : ಅದರಲ್ಲೇ ಇದೆ. ಈಗಲಾದರೂ ನನ್ನ ತಂದೆ ಬಗ್ಗೆ ಹೇಳ್ತೀಯಾ?

ಮದನ ತಿಲಕ : ಆದರೆ ನನ್ನೊಂದು ಪ್ರಶ್ನೆಗೆ ನೀನು ಉತ್ತರ ಕೊಡಲೇ ಇಲ್ಲವಲ್ಲ?

ಸಂಜೀವಶಿವ : ಯಾವುದದು?

ಮದನ ತಿಲಕ : ನೀನೊಮ್ಮೆ ಮದ್ದು ಕೊಟ್ಟರಾಯ್ತು. ಗುಣವಾಗಲೇಬೇಕು-ಅಂತ ನಂಬಿಕೆ ಅಲ್ಲವೆ? ಆ ಮುದುಕ ಮಾರ ತಾಯ ಕೃಪೆ ಆಯ್ತು ಅಂತ ನಿನ್ನ ಮದ್ದನ್ನ ಬಿಟ್ಟೇ ಹೋದನಲ್ಲ, ಯಾಕೆ?

ಸಂಜೀವಶಿವ : (ಅವಮಾನಿತನಾಗಿ) ಈ ಪ್ರಶ್ನೆಗೆ ನೀನು ಮಾರನಿಂದಲೇ ಉತ್ತರ ಪಡೆಯಬೇಕು.

ಮದನ ತಿಲಕ : ಹೀಗಂತೀಯಾ? ಹಾಗಾದರೆ ಈ ಪ್ರಶ್ನೆಗಾದರೂ ಉತ್ತರ ಕೊಡು; ಅರಮನೆಯಿಂದ ನಾಲ್ಕು ಬಾರಿ ಹೇಳಿಕೆ ಬಂದರೂ ನೀನು ಬರಲಿಲ್ಲವಲ್ಲ, ಯಾಕೆ?

ಸಂಜೀವಶಿವ : ಅರಮನೆಯಿಂದ ನನಗೆ ಈತನಕ ಯಾವುದೇ ಹೇಳಿಕೆ ಬರಲಿಲ್ಲ. ನೀನು ಆಸ್ಥಾನ ವಿದೂಷಕನಾದ್ದರಿಂದ ನಿನಗೆ ಹೇಳಿಕೆ ಕಳಿಸಿರಬಹುದು. ಹಾಗಾದಲ್ಲಿ ಅಲ್ಲಿಗೆ ಹೋಗಬೇಕಾದವನು ನೀನು, ನಾನಲ್ಲ.

ಮದನ ತಿಲಕ : ಹಾಗಿದ್ದರೆ ಚಿಕ್ಕದೊಂದು ವಿನಂತಿಯಿದೆ, ಹೇಳಲೇ ಸ್ವಾಮಿ?

ಸಂಜೀವಶಿವ : ಹೇಳು.

ಮದನ ತಿಲಕ : ರಾಜಕುಮಾರಿ ನಾವರಿಯದ ರೋಗವೊಂದರಿಂದ ಸಾಯುತ್ತಿದ್ದಾಳೆ. ನೀನು ಬಂದು ಮದ್ದುಕೊಟ್ಟರೆ ಬದುಕುತ್ತಾಳೆ ಅಂತ ಇಡೀ ರಾಜ್ಯ ನಂಬಿದೆ. ದೊಡ್ಡಮನಸ್ಸು ಮಾಡಿ ಬರುತ್ತೀಯಾ ವೈದ್ಯ ಮಹಾಶಯಾ?

ಸಂಜೀವಶಿವ : ಹೌದೆ? ನನಗೆ ಮೊದಲೇ ಯಾಕೆ ಹೇಳಲಿಲ್ಲ? ಇಕೋ ಬಂದೆ.

*(ತನ್ನ ವೈದ್ಯಕೀಯ ಹಡಪ ತಗೊಂಡು ಹೊರಡುವಷ್ಟರಲ್ಲಿ ಗಿರಿಮಲ್ಲಿಗೆಯ ಪ್ರವೇಶ)*

ಗಿರಿಮಲ್ಲಿಗೆ : ಮಗಾ ಸಂಜೀವಾ, ನಿನ್ನಮ್ಮ ಕರೆಯುತ್ತಿದ್ದಾಳೆ.

ಸಂಜೀವಶಿವ : *(ಮದನತಿಲಕನಿಗೆ)* ಇರು ಇಷ್ಟರಲ್ಲೇ ಬರುತ್ತೇನೆ.

*(ಗಿರಿಮಲ್ಲಿಗೆ ಮತ್ತು ಸಂಜೀವ ಒಳಕ್ಕೆ ಹೋಗುವರು. ತುಸು ಹೊತ್ತಾದ ಬಳಿಕ ಗಿರಿಮಲ್ಲಿಗೆ ಹೊರಬರುವಳು)*

ಗಿರಿಮಲ್ಲಿಗೆ : ವೈದ್ಯ ಬರಲಾಗುವುದಿಲ್ಲ ಅಂತ ಹೇಳಿದ್ದಾನಪ್ಪ. ನೀನಿನ್ನು ಹೋಗಬಹುದು.

*(ಮದನತಿಲಕ ಹೊರಡುವನು)*

# ಸೇಡುಮಾರಿ

(ಅರಮನೆ. ಒಂದು ಕಡೆ ಅಸ್ವಸ್ಥ ರಾಜಕುಮಾರಿ. ಇನ್ನೊಂದು ಕಡೆ ರಾಜ, ಮಂತ್ರಿ ಚಿಂತೆಯಲ್ಲಿ. ಅಷ್ಟರಲ್ಲಿ ಸೇಡುಮಾರಿ ಬರುವಳು.)

ಸೇಡುಮಾರಿ : ಏನಿದು ಆಶ್ಚರ್ಯ!
ಹೊರಗೆ ಬೆಂಕಿ ಹಾಕಿಲ್ಲ. ಛಟ್ಟ ಕಟ್ಟಿಲ್ಲ! ಒಳಗಡೆ
ಯಾರೂ ಅಳುತ್ತಿಲ್ಲ! ರಾಜಕುಮಾರಿ ಇನ್ನೂ ಸತ್ತಿಲ್ಲವೆ?
ಆಗಲೇ ಇಲ್ಲಿ ಅಳುವ ಜನಸಂದಣಿ ಸೇರಿರಬಹುದು,
ಅಳುಬುರುಕ ಕವಿಗಳು ರಚಿಸಿದ ಚರಮಗೀತೆಗಳನ್ನು ಕಲಾವಿದ
ಹೆಂಗಸರು ಹಾಡುತ್ತಿರಬೇಕು ಅಂದುಕೊಂಡೆ. ಇಲ್ಲಿ ನೋಡಿದರೆ
ಏನೂ ಆಗಿಲ್ಲವೆ! ಕೇಳಿ ತಿಳಿಯೋಣವೆಂದರೆ ಆಸುಪಾಸು
ಭೂತಪಿಶಾಚಿಗಳೂ ಕಾಣುತ್ತಿಲ್ಲ! ಅಗೋ ಪುಷ್ಪಗಂಧಿ ಬಂದಳು, ಅವಳನ್ನೇ ಕೇಳುವಾ.
*(ರಾಜಕುಮಾರಿಯ ಸೇವಕಿ ಪುಷ್ಪಗಂಧಿ ಬರುವಳು)*
ಹೆಂಗಿದ್ದೀಯೇ ತಂಗಿ? ಹಂಗ್ಯಾಕ ನೋಡ್ತೀಯವ್ವಾ?
ನನ್ನ ಗುರುತು ಸಿಗಲಿಲ್ಲವೇ? ನಿನ್ನೆ ನಾ ನೀನು ಇಲ್ಲೇ ಭೇಟಿಯಾಗಲಿಲ್ಲವೆ?

ಪುಷ್ಪಗಂಧಿ : ನಾನು ನಿನ್ನನ್ನ ಎಲ್ಲಿಯೂ ಎಂದೂ ನೋಡಿಲ್ಲವಲ್ಲ!

ಸೇಡುಮಾರಿ : ಸತ್ತಳಲ್ಲ ಮಹಾರಾಣಿ, ಅವಳ ಗೆಳತಿ.
ರಾಜಕುಮಾರಿ ಇವತ್ತು ಸಾಯಬೇಕಿತ್ತಲ್ಲವೆ?

ಪುಷ್ಪಗಂಧಿ : ರಾಜಕುಮಾರಿಯ ಸಾವನ್ನ ಬಯಸುವ ಒಬ್ಬಳಾದರೂ ಸಿಕ್ಕೆಯಲ್ಲ! ನಿನಗೆ ನಮಸ್ಕಾರ. ತಾಯೀ ನೀನ್ಯಾರೋ ನಾನರಿಯೆ. ನಾವು ಏನನ್ನು ಕದ್ದು ನುಡಿಯೋದಕ್ಕೂ ಹೆದರುತ್ತೇವೋ ಅದನ್ನ ಎತ್ತರದ ದನಿಯಲ್ಲಿ ಸಾರಿ ಸಾರಿ ಹೇಳಿದೆಯಲ್ಲ, ನಿನ್ನ ಧೈರ್ಯ ಮೆಚ್ಚಬೇಕಾದ್ದೆ. ಆದರೆ ಅದರಿಂದ ನಿನಗೇನಾದರೂ ಆಗಬೇಕಾದ್ದಿದೆಯೇ ತಾಯಿ?

ಸೇಡುಮಾರಿ : ಇದೊಳ್ಳೇದಾಯ್ತೆ! ಸಾಯ್ತಾಳೆ ಅಂತ ಸಹಾನುಭೂತಿ ಹೇಳೋದಕ್ಕೆ ಬಂದರೆ ನನ್ನನ್ನೇ ಆಡಿಕೊಳ್ತಿಯಲ್ಲೆ!

ಪುಷ್ಪಗಂಧಿ : ನಿಜ. ಒಮ್ಮೆ ಸಾವು ಬಂದು ಜೀವವನ್ನ ಕೊಚ್ಚಿಕೊಂಡಾದರೂ ಹೋದರೆ ಸರಿ. ಬರೋದು ಖಾತ್ರಿಯಾದ ಸಾವನ್ನ ಕಾಯೋದಿದೆಯಲ್ಲ ಅದರಂಥ ನರಕ ಇನ್ನೊಂದಿಲ್ಲ. ರಾಜಕುಮಾರಿಗೆ ನಾವ್ಯಾರೂ ಅವಳ ಸಾವಿನ ಸುದ್ದಿ ಹೇಳಿಲ್ಲ. ಆದರೆ ಆಕೆ ನಮ್ಮಮಾತುಗಳನ್ನ ಕದ್ದಾಲಿಸಿ ವಿಷಯ ತಿಳಿದುಕೊಂಡಿದ್ದಾಳೆ. ವಿಷಯ ಗೊತ್ತಿದ್ದೂ ಗೊತ್ತಿಲ್ಲದಂತೆ ಅವಳು ಅಭಿನಯಿಸುವುದನ್ನ ನೋಡಿ ಕರುಳು ಹಿಂಡಿ ಬರುತ್ತದೆ

ಸೇಡುಮಾರಿ :
**ಅಕಾ ಅಕಾ, ಗೆಜ್ಜೆ ಸಪ್ಪಳ ಕೇಳಿಸ್ತ?**
**ಬಂದಳು ನೋಡು ಮದುವಣಗಿತ್ತಿ!**

**ಹೊಸಸೀರೆ ಉಟ್ಕೊಂಡು,**

**ಗೀರುಗಂಧ, ಕುಂಕುಮ ಹಚ್ಚಿಕೊಂಡು.....**

ಪುಷ್ಪಗಂಧಿ : ಇದ್ಯಾವುದೋ ಅನಿಷ್ಟ ಮುಂಡೇದು!
ಇಲ್ಲಿಂದ ಹೊರಬೀಳ್ತೀಯಾ? ಇಲ್ಲಾ ದಬ್ಬಬೇಕ? ಯಾರಪ್ಪಾ ಅಲ್ಲಿ?

ಸೇಡುಮಾರಿ : ಮದುವೆಗೆ ಜನ ಬ್ಯಾಡವೇನೆ?
ಆಮಂತ್ರಣ ಇಲ್ಲದೆ ಬಂದಿದೀನಿ. ನನ್ನನ್ನೇ ಹೋಗು ಅಂತೀಯಲ್ಲವೆ? (ಸೇವಕ ಬರುವನು.)

ಪುಷ್ಪಗಂಧಿ : ಕತ್ತಿಗೆ ಕೈಕೊಟ್ಟು ಹೊರಗಟ್ಟು ಇವಳನ್ನ!
(ಸೇವಕ ಹಾಗೆ ಮಾಡಲು ಹೊರಟಾಗ ಸೇಡುಮಾರಿ ಓಡುವಳು. ಸೇಡುಮಾರಿ ವರ್ಣನೆ ಮಾಡಿದ ಹಾಗೆ ಶೃಂಗಾರವಾಗಿ ರಾಜಕುಮಾರಿ ಬರುವಳು. ಮುಖ ಒಣಗಿ ಹೋದ ರೋಗಿಯವಳು.)

ಪುಷ್ಪಗಂಧಿ : ಜ್ವರಬಿಟ್ಟಿತೆ ರಾಜಕುಮಾರಿ?

ರಾಜಕುಮಾರಿ : ಅದು ಸಾಯೋತನಕ ಬಿಡೋದಿಲ್ಲವೆ!

ಪುಷ್ಪಗಂಧಿ : ಹೊಸ ಸೀರೆ……

ರಾಜಕುಮಾರಿ : ರಾತ್ರಿ ಭಯಾನಕ ಕನಸುಕಂಡೆ ಪುಷ್ಪಗಂಧಿ! ಹಳೇಸೀರೆ ಉಟ್ಕೊಂಡು ಮದುವೆಗಾಗಿ ಶೃಂಗಾರವಾಗಿದ್ದೆ! ಅರಮನೆ, ಗುರುಮನೆ-ಇಡೀ ಊರನ್ನ ತಳಿರು ತೋರಣಗಳಿಂದ ಅಲಂಕರಿಸಿದ್ದರು. ಹಿರಿಯರು ಕಿರಿಯರು ಅಪ್ಪ ಮತ್ತು ನೀನು ಕೂಡ ಹಳೇ ಬಟ್ಟೆಯಲ್ಲಿದ್ದಿರಿ. ವರ ಯಾರು ಅಂತ ನೋಡಿದರೆ, ಅವನೊಬ್ಬ ಚಿಂದಿ ಬಟ್ಟೆಯಲ್ಲಿದ್ದ ಭಿಕಾರಿ ಕಣೆ! ಅದಕ್ಕೇ ಕನಸಿನ ಸೇಡಿಗಾಗಿ ಹೊಸ ಸೀರೆ ಉಟ್ಟೆ.

ಪುಷ್ಪಗಂಧಿ : *(ಸಂತೋಷದಿಂದ)* ರಾಜಕುಮಾರಿ ಇದು ಶುಭದ ಕನಸು!

ರಾಜಕುಮಾರಿ : ಎಲ್ಲರೂ ಯಾಕೆ ಸುಳ್ಳು ಹೇಳುತ್ತೀರಿ? ಏನಾಗಿದೆ ನಿಮಗೆ? ಸಾಯೋ ದಿನವಾದರೂ ಸತ್ಯ ಹೇಳಬಾರದೆ? ಈ ದಿನ ನನ್ನ ಮದುವೆ ಮತ್ತು ಸಾವಿದೆಯೆಂದು ಜೋತಿಷಿಗಳು ಹೇಳಿದ್ದು ನಿಜ ತಾನೆ? ದಯವಿಟ್ಟು ಸುಳ್ಳು ಹೇಳಬೇಡ, ನನ್ನಾಣೆ.

ಪುಷ್ಪಗಂಧಿ : ನಿಜ.

ರಾಜಕುಮಾರಿ : ಹಾಗಿದ್ದರೆ ಕೊನೇದಿನ ನಾನು ನನ್ನ ತಾಯಿಯ ಚಿತ್ರದ ಮುಂದೆ ಕೂತು ಒಬ್ಬಳೇ ಪ್ರಾರ್ಥನೆ ಮಾಡೋದಕ್ಕೆ ಅವಕಾಶ ಮಾಡಿಕೊಡ್ತೀಯಾ, ಅಮ್ಮಾ?

ಪುಷ್ಪಗಂಧಿ : ಆದರೆ ಮಹಾರಾಜರು…

ರಾಜಕುಮಾರಿ : ಗೊತ್ತು ಮಾರಾಯಳೇ, ನನ್ನ ಬಿಟ್ಟು ಕದಲಕೂಡದು ಅಂತ ಮಹಾರಾಜರ ಅಪ್ಪಣೆಯಾಗಿದೆ. ಸರಿ ತಾನೆ? ಕೋಣೆಯ ಹೊರಗಿರು, ನಾನು ಕರೆಯೋತನಕ ಕಾಣಿಸಿಕೊಳ್ಳಬೇಡ.

*(ಪುಷ್ಪಗಂದಿ ಮರೆಯಾಗುವಳು. ಮತ್ತೊಂದುಕಡೆ ರಾಜಕುಮಾರಿ ಮರೆಯಾಗುವಳು. ಈಗ ರಂಗದ ಇನ್ನೊಂದು ಬದಿಯಲ್ಲಿ ಚಿಂತೆ ಮಾಡುವ ರಾಜ ಮತ್ತು ಮಂತ್ರಿ)*

ರಾಜ : ವೈದ್ಯ ಸಂಜೀವಶಿವ ಬರಲೇ ಇಲ್ಲವೆ ಮಂತ್ರಿಗಳೆ?

ಮಂತ್ರಿ : ರಾಜವೈದ್ಯರೆಲ್ಲ ಇಲ್ಲೇ ಇದ್ದು ಪ್ರತಿಕ್ಷಣವೂ ರಾಜಕುಮಾರಿಯನ್ನು ಕಾಯುತ್ತಿದ್ದಾರೆ ಪ್ರಭು.
ರಾಜಕುಮಾರಿಯ ಅನಿಷ್ಟ ನಿವಾರಣೆ ಮತ್ತು ಆಯುಷ್ಯ ವೃದ್ಧಿಗಾಗಿ
ರಾಜ್ಯದ ಎಲ್ಲ ದೇವಸ್ಥಾನಗಳಲ್ಲಿ
ನಿತ್ಯವೂ ಮೂರೂ ಹೊತ್ತು ಪೂಜೆ ಪುನಸ್ಕಾರ ನಡೆಯುತ್ತಿವೆ.
ಋಷಿ ಮುನಿಗಳು ತಂತಮ್ಮ ಆಶ್ರಮಗಳಲ್ಲಿ
ಮೃತ್ಯುಂಜಯ ಜಪ ಹೋಮ ಹವನಾದಿಗಳ ಮಾಡುತ್ತಿದ್ದಾರೆ.
ರಾಜಕುಮಾರಿಗಾಗಿ ಪ್ರಾರ್ಥಿಸುವ ಯಾರಿಗೇ ಯಾವುದೇ ಕೊರತೆ
ಕಾಣಿಸದಂತೆ ನೋಡಿಕೊಳ್ಳುತ್ತಿದ್ದೇವೆ ಪ್ರಭು.

ರಾಜ : ನಾನು ಕೇಳಿದ್ದು ವೈದ್ಯ ಸಂಜೀವಶಿವನ ಬಗ್ಗೆ.

ಮಂತ್ರಿ : ತಾವು ಕ್ಷಮಿಸುವುದಾದರೆ ಹೇಳುತ್ತೇನೆ:
ಅವನನ್ನು ಒತ್ತಾಯದಿಂದ ಹೊತ್ತು ತರಬೇಕೆಂದು ಹೋದವರೂ ಬರಿಗೈಯಲ್ಲಿ ವಾಪಸಾದರು ಪ್ರಭು.

ರಾಜ : ನಾವೇ ಅಲ್ಲಿಗೆ ಹೋಗಿ ಬರೋಣ.

ಮಂತ್ರಿ : ನಾಲ್ಕು ಬಾರಿ ಜನಗಳನ್ನ ಅಟ್ಟಿದ್ದೆ ಪ್ರಭು. ಹೋದಾಗ ಅವನಿಲ್ಲ.
ಹುಡುಕಿದರೆ ಸಿಕ್ಕೋದಿಲ್ಲ.
ಎಲ್ಲಿಗೆ ಹೋಗಿದ್ದಾನೆಂದರೆ ಕಾಡಿಗೆ ಎನ್ನುತ್ತಾರೆ.
ಹೋಗಿ ಬಂದವರು ಯಾವುದೋ ಮಾಯೆಗೊಳಗಾದವರಂತೆ
ಭೀತರಾಗಿ ನಮ್ಮ ಕಣ್ಣು ತಪ್ಪಿಸಿ ಅಲೆದಾಡುತ್ತಾರೆ.
ಎದುರು ಸಿಕ್ಕರೆ ಹುಚ್ಚರಂತೆ ಕೈ ಮತ್ತು ಕಣ್ಣು ಸನ್ನೆಗಳಲ್ಲಿ
ನಮಗೆ ತಿಳಿಯದ ಭಾಷೆ ಆಡುತ್ತಾರೆ.
ಇದ್ದುದರಲ್ಲಿ ಅವನೊಂದಿಗೆ ಮಾತಾಡಿ ಬಂದವನು
ನಮ್ಮ ವಿದೂಷಕ ಒಬ್ಬನೇ.
ತಮ್ಮ ದರ್ಶನಕ್ಕೆ ಕಾದಿದ್ದಾನೆ. ಕರೆಸಲೇ ಪ್ರಭು?

ರಾಜ : ಬೇಗ ಕರೆಸು.

*(ಮಂತ್ರಿ ಸೇವಕನಿಗೆ ಸನ್ನೆ ಮಾಡುವನು, ವಿದೂಷಕ ಬರುವನು.)*

ಮಂತ್ರಿ : ಹೇಳು ವಿದೂಷಕ, ವೈದ್ಯ ಸಂಜೀವಶಿವನಲ್ಲಿ ರಾಜಕುಮಾರಿಯ ಪ್ರಸ್ತಾಪ ಮಾಡಿದಾಗ ಏನು ಹೇಳಿದ?

ಮದನ ತಿಲಕ : ಅದೊಂದು ವಿಚಿತ್ರವಾದ ಅನುಭವ ಪ್ರಭು.
ಅವನ ತಾಯಿ ಸಾಕ್ಷಾತ್ ಶೆಟಿವೀದೇವಿ! ಸಾವಿನ ಅಧಿದೇವತೆ!

ರಾಜ : ಹೌದೆ?

ಮದನ ತಿಲಕ : ಇದರಲ್ಲಿ ಯಾವುದೇ ಸಂದೇಹವಿಲ್ಲ ಪ್ರಭು.
ಎಲ್ಲ ವಿಷಯ ತಿಳಿದುಕೊಂಡೇ ಬಂದೆ.
ತಾಯಿ ಇಲ್ಲದೆ ಅವನ ವೈದ್ಯವಿಲ್ಲ.
ನನ್ನ ಮತ್ತು ಮಾರನ ವಿಷಯದಲ್ಲಿ
ತಾಯಿ ಆಶೀರ್ವದಿಸಿದಳೆಂದು
ಮಾರ ಹೇಳಿದ. ಆದ್ದರಿಂದ ಮದ್ದರೆದು ಕೊಟ್ಟ.
ಬರುವಾಗ ತಮ್ಮ ನಿರೂಪ ಮತ್ತು ರಾಜಕುಮಾರಿಯ ರೋಗದ
ಬಗ್ಗೆ ಹೇಳಿದೆ. ಆಶ್ಚರ್ಯವೆಂದರೆ ಇದ್ಯಾವುದೂ ಆತನಿಗೆ
ಗೊತ್ತೇ ಇರಲಿಲ್ಲ.
ಮೊದಲೇ ಯಾಕೆ ಹೇಳಲಿಲ್ಲವೆಂದು ಸಿಟ್ಟು ಮಾಡಿದ.
ಜಾತಿವಂತ ವೈದ್ಯನ ಹಾಗೆ ತಕ್ಷಣವೇ ನನ್ನೊಂದಿಗೆ
ಹೊರಟು ಬರಲು ಸಿದ್ಧನಾದ.
ಅಷ್ಟರಲ್ಲಿ ಅವನ ತಾಯಿ ಕೂಗುತ್ತಿದ್ದಾಳೆಂದು ಊಳಿಗದಾಳು
ಬಂದು ತಿಳಿಸಿದಳು. ಬಂದೆ ಎಂದು ಹೇಳಿ ಒಳಕ್ಕೆ ಹೋದವನು
ಆಮೇಲೇ ಅದೇ ಆಳಿನಿಂದ
ಬರಲಾಗುವುದಿಲ್ಲ ಎಂದು ಹೇಳಿ ಕಳಿಸಿದ.
ಅವನ ತಾಯಿ ಎಲ್ಲಿದ್ದಳು? ಹೇಗಿದ್ದಳು?
ನನಗೆ ಗೋಚರಿಸಲಿಲ್ಲ ಪ್ರಭು. ಒಳಕ್ಕೆ ಹಣಕಿದರೆ ಕಗ್ಗತ್ತಲು.
ಯಾರೂ ಇರುವಂಥ ಸ್ಥಳ ಅದಾಗಿರಲಿಲ್ಲ.
ಆದರೆ ಬರುವಾಗ ಭಾರೀ ಗಾತ್ರದ ಭಯಾನಕ ಗರಡು ಪಕ್ಷಿಯೊಂದು
ಹಾರಿಬಂದು ತಮ್ಮ ಅರಮನೆಯ ಮೇಲೆ ಕೂತಿತು!
ಅದು ಬೇರೆ ಪಕ್ಷಿಗಳಂತಿರಲಿಲ್ಲ.
ನಾವ್ಯಾರೂ ಅಂಥ ಹಕ್ಕಿಯನ್ನ ಕಂಡೇ ಇಲ್ಲ ಪ್ರಭು.
ಅದರ ರೆಕ್ಕೆಗಳೇನು! ಕತ್ತು ಕೊಕ್ಕುಗಳೇನು! ಹೊಳೆವ ಕಣ್ಣುಗಳೇನು!
ಹಾರಿ ಬರುವಾಗ ಅದರ ರೆಕ್ಕೆ

ಎರಡೂ ಕ್ಷಿತಿಜಗಳಿಗೆ ತಾಗಿದ್ದ ಕಂಡೆ ಪ್ರಭು.
ಅಲ್ಲಿಂದ ಕಾಲುಕಿತ್ತೋಡಿ ಬಂದೆ. ತಾವು ಕ್ಷಮಿಸುವುದಾದರೆ
ಒಂದು ಮಾತ್ರ ಹೇಳುತ್ತೇನೆ ಪ್ರಭು....

ರಾಜ : ಹೇಳು.

ಮದನ ತಿಲಕ : ವೈದ್ಯನಿಗೆ ತಮ್ಮ ನಿರೂಪವನ್ನ ತಲುಪಿಸದಿದ್ದವಳು,
ಆತ ಇಲ್ಲಿಗೆ ಬಾರದ ಹಾಗೆ ತಡೆದವಳು ಆತನ ತಾಯಿ.
ಅಷ್ಟರಮಟ್ಟಿಗೆ ಅವನಾಸೆ ಬಿಡುವುದೊಳ್ಳೆಯದೆಂದು
ನನ್ನ ಅಭಿಮತ, ಆದರೂ ತಾವು ಹೇಳಿದರೆ.....

ರಾಜ : ಕೊನೆಯ ಪ್ರಯತ್ನ ಮಾಡಿಬಿಡೋಣ ಬನ್ನಿ.

ಪುಷ್ಪಗಂಧಿ : (ಓಡುತ್ತ ಬಂದು) ಪ್ರಭೂ ರಾಜಕುಮಾರಿ ಎಲ್ಲೂ ಕಾಣುತ್ತಿಲ್ಲ.
ಎಲ್ಲಿ ಹುಡುಕಿದರೂ ಸಿಗುತ್ತಿಲ್ಲ....

ರಾಜ : ಯಾರಲ್ಲಿ? ರಾಜಕುಮಾರಿಯನ್ನು ಹುಡುಕಿ, ಬೇಗ.

(ಎಲ್ಲರೂ ಅವಸರದಲ್ಲಿ ರಾಜಕುಮಾರಿಯನ್ನು ಹುಡುಕಲು ಹೋಗುವರು.)

## ಮಾಯೀ ಬೆಟ್ಟ

(ಬಂಡೆ. ಅದರಡಿಯ ಗವಿ. ಮೂಲಿಕೆ ಮತ್ತು ಪುಟ್ಟಜಿಂಕೆಯ ಮರಿಯೊಂದಿಗೆ ಸಂಜೀವಶಿವನ ಪ್ರವೇಶ. ಅವನು ಬಂಡೆಯನ್ನು ಆಶ್ಚರ್ಯದಿಂದ ನೋಡುತ್ತಿರುವಂತೆ ಮಾರ ಬರುವನು.)

ಮಾರ : ಸ್ವಾಮೀ ಶರಣು.

ಸಂಜೀವಶಿವ : ಶರಣು, ನೀನೊಮ್ಮೆ ನನ್ನ ವೈದ್ಯಶಾಲೆಗೆ ಬಂದಿದ್ದೆಯಲ್ಲವೆ?

ಮಾರ : ಹೌದು ಸ್ವಾಮೀ, ನಾನು ಮಾರ. ನಿಮ್ಮನ್ನು ನೋಡಿಯೇ ಬಂದೆ.

ಸಂಜೀವಶಿವ : ಅದೇ ಅಂದುಕೊಂಡೆ. ಹೆಂಗಿದ್ದೀ ಮಾರ?

ಮಾರ : ಹಿಂಗಿದ್ದೀನಿ ಸ್ವಾಮಿ!

ಸಂಜೀವಶಿವ : ಬೆಟ್ಟದಮಾಯೀಬಂಡೆ ಅಂತಾರಲ್ಲ, ಇದೇ ಏನು ಮಾರ?

ಮಾರ : ಹೌದು ಸ್ವಾಮೀ.

ಸಂಜೀವಶಿವ : ಭಯಂಕರ ಬಂಡೆ ಇದು! ಈ ಬಂಡೆ, ಇದರಡಿಯ ಗವಿ!
ದೂರದಿಂದ ಈ ಪ್ರದೇಶವನ್ನ ನುಂಗೋದಕ್ಕೆ ಬಾಯ್ದೆರೆದ
ದೊಡ್ಡ ಕಾಡುಪ್ರಾಣಿಯ ಹಾಗೆ ತೋರುತ್ತದೆ, ಮಾರಾಯಾ!
ಒಳಗಡೆ ಏನಿದೆ ಮಾರ?

ಮಾರ : ಅದನ್ನು ಮಾತ್ರ ಕೇಳಬೇಡಿ ಸ್ವಾಮಿ!
ಗವಿಯಲ್ಲಿ ಏನಿದೆಯೆಂದು ಯಾರಿಗೂ ತಿಳಿಯದು,
ಅದೊಂದು ಭಯಾನಕವಾದ ಕಪ್ಪುಕುಳಿ. ಒಳಗೆ ಹೊಕ್ಕವರಿಲ್ಲ.
ಹೊಕ್ಕವರು ಹೊರಗೆ ಬಂದದ್ದಿಲ್ಲ. ಜನ ದನ ಇರಲಿ,
ಅದರೊಳಗೆ ಹೊಕ್ಕ ಬೆಳಕು ಮತ್ತು ದನಿ ಕೂಡ
ಹೊರಕ್ಕೆ ಬರೋದಿಲ್ಲ. ಆದರೆ ಎಲ್ಲ ಪದಾರ್ಥ ಮತ್ತು ಪ್ರಾಣಿಗಳನ್ನು
ಕೊಳೆಹಾಕಿ ಸೂಸುವ ಒಂದು ದುರ್ನಾತ
ಅದರ ತುಂಬ ಇಡಗಿದ್ದು, ಅದರ ಸಮೀಪ ಸುಳಿದರೂ ಸಾಕು
ಮೂಗಿಗೆ ನೋವು ಮಾಡುವಷ್ಟು ಕಟುವಾಗಿ ಹೊಡೆಯುತ್ತದೆ.
ಅಮಾವಾಸ್ಯೆ ದಿನ ರಾತ್ರಿ ಗವಿಯ ಆರ್ಭಟ ಹೇಳತೀರದು!
ಆಕಾಶ ಕದಡಿ ಮರಗಳನ್ನು ಬೇರು ಸಮೇತ ಕಿತ್ತುರುಳಿಸುವ
ಭಯಂಕರ ಬಿರುಗಾಳಿ ಬೀಸುತ್ತದೆ! ಬೀಸಿತೇ-
ಇರುವೆ ಮೊದಲು ಆನೆ ಕಡೆಯಾಗಿ ಎಲ್ಲ ಜೀವರಾಶಿ
ಅಲ್ಲೋಲ ಕಲ್ಲೋಲ ಗೊಂಡು, ಗವಿಯ ಬಾಯ ಕುಳಿಯೊಳಕ್ಕೆ
ನುಗ್ಗುತ್ತಿರುವಂತೆ ಅನಿಸುತ್ತದೆ.
ಗೋರಿಗಳು ಬಾಯ್ದೆರೆದು ನೂರಾರು ಹಸಿ ಹೆಣಗಳು ಎದ್ದು
ಬೊಬ್ಬೆಹಾಕುತ್ತ ನೇರ ಗವಿಯೊಲಕ್ಕೇ ಓಡುತ್ತವೆ!
ಒಂದು ಬಾರಿಯಂತೂ ಜೀಬರ ಮಳೆ ಅಂದುಕೊಂಡು
ನೋಡಿದರೆ ಮೈತುಂಬ ನೆತ್ತರಿನ ತುಂತುರು ಸಿಡಿದಿದ್ದವು!

ಸಂಜೀವಶಿವ : ಇದೆಲ್ಲ ನಿನ್ನ ಅನುಭವವ? ಅಥವಾ ಕೇಳಿಸಿಕೊಂಡದ್ದ?

ಮಾರ : ಕಣ್ಣಾರೆ ಕಂಡದ್ದನ್ನ ಹೇಳಿದೆ ಸ್ವಾಮಿ.

ಸಂಜೀವಶಿವ : ಹಿಂದೆ ಎಂದಾದರೂ ತಾಯಿಯ ದರ್ಶನವಾಗಿತ್ತ ನಿನಗೆ?

ಮಾರ : ಹೌದು. ನಾನಾಗ ಇನ್ನೂ ಚಿಕ್ಕವನು.
ಗೋರಿ ಅಗಿಯೋದು ನನ್ನ ಕುಲಕಸಬು. ಆದರೆ ನನ್ನ ಹೆತ್ತಬ್ಬೆಗೆ

ಗೋರಿ ಅಗಿಯೋ ಕೆಲಸ ಅಂದರೆ ಭಯ. ಗೋರಸ್ಥಾನದ
ಕಡೆಗೆ ಬಿಡುತ್ತಿರಲಿಲ್ಲ ನನ್ನನ್ನ. ಕುಲಕಸುಬು ಅಂದಮೇಲೆ
ಯಾರಾದರೂ ಸತ್ತಾಗ ಸುಮ್ಮನಿರಲಾಗುತ್ತದೆಯೆ? ಅಬ್ಬೆಯ
ಕಣ್ಣು ತಪ್ಪಿಸಿ ಅಗಿಯುತ್ತಿದ್ದೆ. ಹೀಗೆ ಮದುವೆಯಾದೆ.
ಮಗಳಾದಳು. ಹೆಂಡತಿ ಸತ್ತಳಾದ್ದರಿಂದ ಮನೆ ಕಡೆ ಧ್ಯಾನ
ಕಡಮೆಯಾಯ್ತು.
ಒಂದು ದಿನ ಸಂಜೆ ಇಲ್ಲೇ ಗೋರೀಮೇಲೆ ದಣಿದು
ಒರಗಿದ್ದೆ. ಯಾವಾಗ ನಿದ್ದೆ ಹತ್ತಿತ್ತೊ! ಅಬ್ಬೆ ಬಂದು
'ಮಾರಾ' ಅಂದಳು. ಎಚ್ಚರಾಗಿ ನೋಡಿದರೆ ಆಗಲೇ ನಡುರಾತ್ರಿ
ಆಗಿಬಿಟ್ಟದೆ! ಮನೆಮಾರು ಮರೆತು ಹಿಂಗೆ ಮಾಡಿದರೆ
ಹೆಂಗೊ ಅಂದು ಸಿಟ್ಟು ಮಾಡಿದಳು. "ನಿದ್ದೆ ಹತ್ತಿದ್ದು ಗೊತ್ತೇ
ಆಗಲಿಲ್ಲ" ಅಂತ ಗೊಣಗುತ್ತ ಜೊತೆ ಹೋದೆ. ಅಬ್ಬೆ ಬಳಿಕ
ಅನ್ನಕ್ಕೆ ಬಾಡು ಬಡಿಸಿದಳು ನೋಡು ಅತ್ತಿತ್ತ ನೋಡದೆ
ಗಬಗಬ ಹೊಟ್ಟೆತುಂಬ ತಿಂದೆ. ಆಮೇಲೆ ನೋಡುತ್ತೇನೆ:
ಇಡೀ ಶಿವಾಪುರದ ಜನ ಹೆದರಿ ಗಡಗಡ ನಡುಗುವ
ಬೆಟ್ಟದ ಗವಿಯ ಒಳಗಡೆಯೇ ಇದ್ದೇನೆ! ಹೆದರಿಸುವಂಥಾದ್ದೇನೂ
ಅಲ್ಲಿರಲಿಲ್ಲ. "ಅಬ್ಬೆ ಅದ್ಯಾಕೆ ಊರವರು ಇಷ್ಟು ಹೆದರುತ್ತಾರೆ
ಈ ಗವಿಗೆ?" ಅಂದೆ. ಅಬ್ಬೆ ಮುಗುಳುನಕ್ಕಳಷ್ಟೆ.
"ಮಗಳು ಹೆಂಗಿದಾಳ್ಪ?" ಅಂದಳು.
"ಚೆನ್ನಾಗಿದ್ದಾಳಬ್ಬೆ" ಅಂದೆ.
"ನಾಳೆ ಕರಕೊಂಬಾ" ಅಂದಳು.
"ಆಯ್ತಮ್ಮ" ಅಂದೆ, ಬಂದೆ.
ಗವಿಯಿಂದ ಹೊರಗೆ ಬಂದಕೂಡಲೇ ನೆನಪಾಯಿತು ನೋಡು;
ನನ್ನ ಹೆತ್ತಬ್ಬೆ ಸತ್ತು ವರ್ಷಗಳಾದುವು ಅಂತ!
ಗುಡಿಸಲಿಗೆ ಓಡಿ ಬಂದು ಎಲ್ಲ ಜ್ಞಾಪಿಸಿಕೊಂಡೆ.
ಅಬ್ಬೆ ಸೀರೆ ಒಳಗೆ ಖಾಲಿಯಿದ್ದಳು! ಯಾರಿರಬಹುದು ಅಂದೆ!
ಅವಳು ನನ್ನ ಹೆತ್ತಬ್ಬೆ ಅಲ್ಲವೇ ಅಲ್ಲ!
ಗಾಬರಿಯಾಗಿ ಮೈ ಜಲಜಲ ಬೆವರಿ
ನಿಂತ ನೆಲ ಒದ್ದೆಯಾಯ್ತು!
ಬೆಳಿಗ್ಗೆದ್ದು ಮಗಳನ್ನು ಎಬ್ಬಿಸಿದೆ.
ಅವಳಾಗಲೇ ತಾಯೀ ಪಾದ ಸೇರಿದ್ದಳಪ್ಪ!
ಅಂದಿನಿಂದ ಕನಸಿನಲ್ಲ ಬಂದಾಕೆ ಯಾರು ಅಂತ
ಅನುಮಾನವಿದ್ದೇ ಇತ್ತು.

ನಿನ್ನೆ ನಿನ್ನ ವೈದ್ಯಶಾಲೆಯಲ್ಲಿ ಪ್ರತ್ಯಕ್ಷಳಾದಳಲ್ಲ,
ಆಹಾ ಇವಳೇ ಶೆಟಿವಿತಾಯಿ,
ಆ ದಿನ ಬಂದವಳು ಅಂತ ಖಾತ್ರಿಯಾಯ್ತು.

ಸಂಜೀವಶಿವ : ಈಗ ನೆನಪಾಯಿತು, ನಿನ್ನನ್ನ ಕೇಳಬೇಕಂತ ಇದ್ದೆ
ಮಾರ, ಆ ದಿನ ನೀನು ತಾಯಿಯ ಅಪ್ಪಣೆ ಆಯ್ತು,
ನಾರೋ ಬೇರೋ ಕುದಿಸಿ ಕುಡೀತೀನಿ ಬಿಡಪ್ಪ
ಅಂದು ಮದ್ದು ತಗೊಳ್ಳದೇ ಹೋದೆ. ಏನಿದರ ಅರ್ಥ?
ತಾಯ ಕೃಪೆ ಆದಮೇಲೆ ನನ್ನ ಮದ್ದಿನ
ಅಗತ್ಯ ಇಲ್ಲ ಅಂತಲಾ?

ಮಾರ : ಸ್ವಾಮೀ, ನೀವು ಮಹಾವೈದ್ಯರು. ಆ ಮಹಾತಾಯಿ
ವೈದ್ಯರ ಪರಮದೇವತೆ. ಆ ತಾಯಿಯ ಕೃಪೆ
ಅಗತ್ಯವಿದ್ದುದರಿಂದಲೇ ಅಲ್ಲವೆ ನೀವು ತಾಯ ಅಗಮನಕ್ಕಾಗಿ
ಕಾದದ್ದು? ಇದರಲ್ಲಿ ನಿಮ್ಮ ವೃತ್ತಿ ಮೇಲ್ಮೆಯನ್ನ
ಕಡಿಮೆ ಮಾಡಿದಂತಾಗಲಿಲ್ಲ! ಅಲ್ಲವೆ?
ಅಲ್ಲದೆ ಆ ದಿನ ತಾಯಿ ಆ ಮಗುವಿನ ಎಡಗಡೆ ನಿಂತು ಕೃಪೆ ಮಾಡಲಿಲ್ಲವಾಗಿ
ನನಗೆ ಬೇಸರವಾದದ್ದು ನಿಜ.

ಸಂಜೀವಶಿವ : ಅಂದರೆ ತಾಯಿಯ ಕೃಪೆಯಾಗಿ ನಾನು ಉಚಿತವಲ್ಲದ ಮದ್ದು
ಕೊಟ್ಟರೂ ರೋಗ ವಾಸಿಯಾಗುತ್ತದೆ ಎಂದ ಹಾಗಾಯಿತಲ್ಲವೆ?

ಮಾರ : ಆದರೆ ಅಂಥ ಮದ್ದನ್ನು ನೀವು ಕೊಡಲಾರಿರಿ.

ಸಂಜೀವಶಿವ : ಯಾಕೆ?

ಮಾರ : ಯಾಕೆಂದರೆ ನೀವು ಮಹಾತಾಯಿಯ ಮಗ.
ಅಗೋ, ಅರಮನೆಯ ಕಹಳೆಯ ದನಿ ಕೇಳಿಸಿದಂತಾಯಿತು.
ಬರುತ್ತೇನೆ ಸ್ವಾಮೀ.
(ಹೋಗುವನು. "ಸೋ ಎನ್ನಿ ಶುಭವೆನ್ನಿ! ಮಂಗಳ ಶುಭವೆನ್ನಿ ಅವ್ವಾ ಬಂಗಾರಿ! ರಾಜಕುಮಾರಿ! ಸಿಂಗಾರ ಸಿರಿಗೆ ಶುಭವೆನ್ನಿ||" ಎಂಬ ಹಾಡು ಕೇಳಿಸಿ ಸಂಜೀವಶಿವ ಆ ಕಡೆ ನೋಡುವನು. ಗವಿಯ ಕಡೆಯಿಂದ ಒಬ್ಬಳು ಮುದುಕಿ ಬರುವಳು.)

ಸಂಜೀವಶಿವ : ಅರೆ! ಗವಿಯ ಒಳಗಡೆಯಿಂದಲೇ ಮುದುಕಿ ಬರುತ್ತಿದ್ದಾಳೆ!
ಏ ಅಜ್ಜಿ ಗವಿಯ ಒಳಗಡೆಯಿಂದ ಬಂದೆಯಾ!

ಮುದುಕಿ : ಹೌದು. ಕಾಣಲಿಲ್ಲವೇ?

ಸಂಜೀವಶಿವ : ಈ ಗವಿಯೊಳಕ್ಕೆ ಹೋದವರು ಹೊಕ್ಕೆ ಬರೋದಿಲ್ಲ ಅಂತಾರೆ!

ಮುದುಕಿ : ಹೌದು.

ಸಂಜೀವಶಿವ : ಮತ್ತೆ ನೀನು ಬಂದೆಯಲ್ಲ!

ಮುದುಕಿ : ನಾ ಬಿಡು ಮುದುಕಿ. ನನ್ನನ್ನು ಸಾವು ಕೂಡ ಮುಟ್ಟೋದಿಲ್ಲ. ಆದರೆ
ನಿನ್ನಂಥವರು ಒಳಗೆ ಹೋಗಬಾರದಪ್ಪ.

ಸಂಜೀವಶಿವ : ಒಳಗಡೆ ಏನಿದೆ ಅಜ್ಜಿ?

ಮುದುಕಿ : ಅದನ್ನ ಕಂಡವರ್ಯಾರೂ ಇಲ್ಲವಪ್ಪ. ಹೀಗಿರಬಹುದು ಅಂತ
ಒಬ್ಬೊಬ್ಬರು ಒಂದೊಂದು ಥರ ಹೇಳುತ್ತಾರೆ. ಅದೊಂದು
ಒಡೆಯಲಾಗದ ಒಗಟು ಅಂತಾರೆ.
ಎಲ್ಲ ಬೆಳಕಿನ ಎಲ್ಲ ಕತ್ತಲೆಯ ಗುರಿ ಅಂತಾರೆ.
ನನಗದೆಲ್ಲ ಗೊತ್ತಾಗದಪ್ಪ. ನೀನು ಶಿವಾಪುರ ಹಟ್ಟಿಯ
ಶೆಟಿವಿ ತಾಯಿಯ ಮಗ ಅಲ್ಲವೆ?

ಸಂಜೀವಶಿವ : ಹೌದು.

ಮುದುಕಿ : ನೀನ್ಯಾಕೆ ಈ ಕಡೆ ಬಂದಿದ್ದೆ?

ಸಂಜೀವಶಿವ : ಗಿಡಮೂಲಿಕೆ ಹುಡುಕಿಕೊಂಡು ಬಂದಿದ್ದೆ, ನೀನ್ಯಾಕೆ ಒಳಗಡೆ ಹೋಗಿದ್ದೆ?

ಮುದುಕಿ : ನೀನೇನು ಕಳೆದುಕೊಳ್ತೀಯೋ ಅದನ್ನು ಹುಡುಕೋದಕ್ಕೆ.

ಸಂಜೀವಶಿವ : ನಾನಿನ್ನೂ ಏನನ್ನೂ ಕಳೆದುಕೊಂಡಿಲ್ಲವಲ್ಲ?

ಮುದುಕಿ : ಅದು ನಿಧಾನ ಗೊತ್ತಾಗೋದು. ನಿನಗೆ ತಿಳಿದಾಗ ಹುಡುಕಿದರೆ
ಸಿಕ್ಕದೇ ಇರೋದನ್ನು ಈಗಲೇ ಹುಡುಕುತ್ತಾ ಇದ್ದೆ.
ಅಗೋ ಮದುವಣಗಿತ್ತಿ ಬಂದಳು.
ನೀನು ನಿನ್ನ ಆಟಮಾತ್ರ ಆಡಪ್ಪ. ಅವಳ ಆಟವನ್ನೂ ನೀನೇ ಆಡಬೇಡ.
(ಹೋಗುವಳು. ಅವಳ ಮಾತು ಅರ್ಥವಾಗದೆ ದಿಗಿಲಿನಲ್ಲಿರುವಾಗ ರಾಜಕುಮಾರಿ ಅವಸರದಿಂದ, ಸೆಳೆಯಲ್ಪಟ್ಟವಳಂತೆ ಗವಿಗುರಿಯಾಗಿ
ಹೋಗುತ್ತಿರುವಳು. ಸಂಜೀವಶಿವ ಓಡಿಹೋಗಿ)

ಸಂಜೀವಶಿವ : ಏ ಏ ಹುಡುಗಿ, ನಿಲ್ಲು ಆ ಕಡೆ ಹೋಗಬೇಡ. ನಿಲ್ಲು ಅಂದೆ.
(ಅವಳು ಅವನ ಮಾತಿಗೆ ಗಮನ ಕೊಡದೆ ಮತ್ತೂ ಆ ಕಡೆಗೇ ಹೋಗುತ್ತಿರುವಳು. ಈಗ ಸಂಜೀವಶಿವ ಅಡ್ಡಗಟ್ಟುವನು.)
ಏನಾಗಿದೆ ನಿನಗೆ? ಆ ಕಡೆ ಹೋಗಬೇಡ ಅಂದರೆ ಕೇಳಿಸೋದಿಲ್ಲವೆ?

ರಾಜಕುಮಾರಿ : ಯಾಕೆ ಹೋಗಬಾರದು?

ಸಂಜೀವಶಿವ : ಅದು ಅಪಾಯದ ಜಾಗ. ಒಳಕ್ಕೆ ಹೋದವರ್ಯಾರೂ
ಹೊರಕ್ಕೆ ಬರೋದಿಲ್ಲಾಂತ ಈಗಷ್ಟೆ ಗೊತ್ತಾಯ್ತು. ನೀನು
ಒಳಕ್ಕೆಹೋಗೋದಕ್ಕೇ ಅವಸರ ಮಾಡ್ತೀಯಲ್ಲ!

ರಾಜಕುಮಾರಿ : ನಾನೂ ಒಳಕ್ಕೆ ಹೋಗ್ತಿರೋದು ಹೊರಕ್ಕೆ ಬರಬಾರದೂಂತ್ಲೇ.

ಸಂಜೀವಶಿವ : ಅಂದರೆ?

ರಾಜಕುಮಾರಿ : ಸಾಯೋದಕ್ಕೆ, ಅಂದರೆ ಪ್ರಾಣ ಕಳೆದುಕೊಳ್ಳೋದಕ್ಕೆ!

ಸಂಜೀವಶಿವ : ಅಂಥಾದ್ದೇನಾಗಿದೆ ನಿನಗೆ?

ರಾಜಕುಮಾರಿ : ಇನ್ನೇನಾಗಬೇಕು ಮಹಾಶಯಾ? ಕಣ್ಣಿಗೆ ಕಾಣಿಸೋದಿಲ್ಲವೆ?
ಮುಖ ಬಿಳಿಚಿದೆ. ತುಟಿ ಒಣಗಿವೆ. ಕಣ್ಣಲ್ಲಿ ಬೆಳಕಿಲ್ಲ.
ಮೂಳೆ ತುಂಬಿದ ಚೀಲದ ಹಾಗೆ ಕಾಣಿಸ್ತಿದ್ದೇನೆ, ಸಾಲದ?
ನೂರಾ ಎಂಟು ರೋಗಗಳಿವೆ ಸ್ವಾಮೀ, ಹದಿನೈದು ದಿನಗಳಿಂದ
ಬಂದ ಜ್ವರ ಇಳಿದಿಲ್ಲ. ಅದಕ್ಕೇ ಜೀವ ಬೇಸರವಾಗಿ
ಸಾಯೋದಕ್ಕೆ ಹೊರಟಿದ್ದೀನಿ.
ನಾನು ಸತ್ತರೆ ನಿನ್ನದೇನೂ ತಕರಾರಿಲ್ಲ ತಾನೆ?

(ಮತ್ತೆ ಹೊರಡುವಳು. ಸಂಜೀವಶಿವ ತಡೆಯಲು ಕೈಯೊಡ್ಡಿ ಸಿಕ್ಕ ಮುಂಗೈ ಹಿಡಿದೆಳೆಯುವನು. ಕೈಗೆ ತಕ್ಷಣ ಅವಳ ನಾಡಿ ಸಿಗುವುದು. ಪರೀಕ್ಷೆ ಮಾಡತೊಡಗುವನು. ಅವಳೂ ಸಹಕರಿಸುವಳು. ಮಾತು ಮುಂದುವರಿದಂತೆ, ರೋಗ ಪತ್ತೆ ಮಾಡುತ್ತಿರುವನಾದ್ದರಿಂದ ಅವಳ ಮಾತಿನ ಕಡೆಗೆ ಲಕ್ಷ್ಯ ಕಡಿಮೆ.)

ಸಂಜೀವಶಿವ : ವೈದ್ಯರ್ಯಾರೂ ಸಿಕ್ಕಲಿಲ್ಲವೆ?

ರಾಜಕುಮಾರಿ : ಅವನ್ಯಾರೋ ಸಂಜೀವಶಿವ ವೈದ್ಯನಂತೆ. ಎಷ್ಟು ಬಾರಿ
ಹೇಳಿ ಕಳಿಸಿದರೂ ಬರಲಿಲ್ಲ. ಬದುಕೋದು ನನ್ನ ಹಣೆಯಲ್ಲಿಲ್ಲ.
ದೊಡ್ಡ ವೈದ್ಯನೆಂಬ ಜಂಬ ಅವನಿಗೆ.
ಉಳಿದ ವೈದ್ಯರಿಗೆ ನನ್ನ ರೋಗ ಪತ್ತೆ ಮಾಡುವುದಾಗಲಿಲ್ಲ.

ಸಂಜೀವಶಿವ : ನೀನು ಈ ಕಡೆ ಬಂದಿರೋದು ಮನೆಯವರಿಗೆ ಗೊತ್ತಾ?

ರಾಜಕುಮಾರಿ : ಗೊತ್ತಾದರೆ ಯಾರಾದರೂ ಸಾಯೋದಕ್ಕೆ ಬಿಡ್ತಾರಾ?
ಅಮ್ಮ ಇದ್ದಿದ್ದರೆ ಆ ಮಾತು ಬೇರೆ. ಅಪ್ಪ, ಸೇವಕರು
ಅತ್ತೂ ಕರೆದೂ... ನನಗದೆಲ್ಲಾ ಬೇಕಿರಲಿಲ್ಲ.
ಸಾಯಬೇಕೆಂತ ನಿಶ್ಚಯ ಮಾಡಿದೆ, ಬಂದೆ.

ಸಂಜೀವಶಿವ : ಭಲೆ ಭಲೆ.

ರಾಜಕುಮಾರಿ : ನನಗ್ಗೊತ್ತಿತ್ತು ನೀನು ಮೆಚ್ಚಿಕೊಳ್ತಿ ಅಂತ,
ಆದರೆ ನೀನು ಮೆಚ್ಚಲಿ ಅಂತ ನಾನು ಸಾಯ್ತಿಲ್ಲ.

ಸಂಜೀವಶಿವ : ಮತ್ತೆ ಯಾಕೆ ಸಾಯ್ತೀಯಾ?

ರಾಜಕುಮಾರಿ : ಅಯ್ಯೋ ಎಷ್ಟು ಸಲ ಹೇಳೋದು? ಮೈತುಂಬ ನೋವು,
ಸಂಕಟ, ವೈದ್ಯರ ಮದ್ದು ನಾಟಲಿಲ್ಲ, ಅದಕ್ಕೇ.
ಜೀವನದಲ್ಲಿ ಜುಗುಪ್ಸೆ ಆದವರು ಬದುಕ್ತಾರಾ?

ಸಂಜೀವಶಿವ : ನಾನು ನಿನಗೆ ಸಹಾಯ ಮಾಡಬಹುದ?

ರಾಜಕುಮಾರಿ : ನನಗೆ ಯಾರ ಸಹಾಯವೂ ಬೇಕಿಲ್ಲ. ನಾನು ಕ್ಷತ್ರಿಯ
ರಾಜಕುಮಾರಿ. ನಾನೊಬ್ಬಳೇ ಸಾಯಬಲ್ಲೆ.

ಸಂಜೀವಶಿವ : ರಾಜಕುಮಾರಿ ನೀನೇನಾ?

ರಾಜಕುಮಾರಿ : ಹೌದು. ಈಗಲಾದರೂ ಸಾಯಲಿಕ್ಕೆ ಬಿಡ್ತೀಯಾ ಮಹಾಶಯಾ?

ಸಂಜೀವಶಿವ : ಒಬ್ಬಳೇ ಸಾಯೋದಕ್ಕೆ ಭಯವಾಗೋದಿಲ್ಲವೆ?
(ತಕ್ಷಣ ದೃಶ್ಯದ ಆರಂಬದಲ್ಲಿ ಕಂಡ ಮುದುಕಿ ಕಾಣಿಸಿಕೊಳ್ಳುತ್ತಾಳೆ.)

ಮುದುಕಿ : ಭಯ ಯಾಕೆ? ಅಗೋ ಎದುರಿಗಿದೆಯಲ್ಲ, ಆ ಗವಿಯಲ್ಲಿ
ಹೊಕ್ಕರಾಯ್ತು, ನಿನ್ನ ನೋವು, ಸಂಕಟ, ಭಯ ಒಂದೂ
ಇರೋದಿಲ್ಲ. ಎಲ್ಲದರಿಂದ ಮುಕ್ತಿ ಪಡೀತೀಯ.

ರಾಜಕುಮಾರಿ : ಅಲ್ಲೀತನಕ ನಡೀಲಿಕ್ಕಾಗೋದಿಲ್ಲವಲ್ಲಮ್ಮ, ನೋಡು;
ಚಪ್ಪಲಿ ಹರಿದು ಮುಳ್ಳು ಚುಚ್ಚಿ ರಕ್ತ ಹ್ಯಾಗೆ
ಸುರೀತಿದೆ ಕಾಲಿನಿಂದ!

ಮೈಯೊಳಗಿನ ರಕ್ತವೆಲ್ಲಾ ಸೋರಿ, ಮೈ ಖಾಲಿಯಾಗಿ
ಒಣಗಿ ಸತ್ತರೂ ಸರಿಯೆ, ನಾನು ಹೆದರೋದಿಲ್ಲ.

ಮುದುಕಿ : ಇದಪ್ಪ ಕ್ಷತ್ರಿಯ ಛಲ ಅಂದರೆ!

ರಾಜಕುಮಾರಿ : ಯಾಕಯ್ಯ ಹಾಗೆ ಕೈ ಹಿಸುಕುತ್ತಿ?

ಸಂಜೀವಶಿವ : ನಾಲಗೆ ತಗೀ ನೋಡೋಣ.

ರಾಜಕುಮಾರಿ : (ಬಾಯಿ ತೆಗೆದು ನಾಲಗೆ ತೋರಿಸುತ್ತ) ಆಽ.... ವೈದ್ಯನ ನೀನು?

ಸಂಜೀವಶಿವ : ಹೌದು, ಕಣ್ಣಗಲ ಮಾಡು.

ರಾಜಕುಮಾರಿ : ಇಕಾ, ಆಯ್ತು? ನಿನ್ನಂಥಾ ಸಾವಿರ ವೈದ್ಯರನ್ನ ಬಲ್ಲೆನಯ್ಯಾ
ನಾನು. ಗವಿಯತನಕ ನಡೀಲಿಕ್ಕಾಗೋದಿಲ್ಲ, ಇಲ್ಲೇ
ಸಾಯುವಂಥಾ ಮದ್ದೇನಾದರೂ ಇದ್ದರೆ ಕೊಡು.

ಸಂಜೀವಶಿವ : ನೇಣು ಹಾಕಿದರಾದೀತ?

ರಾಜಕುಮಾರಿ : ಯಾವುದೋ ಬೇಗನೇ ಕೊಡು ಮಹಾಶಯಾ.

(ಸಂಜೀವ ತನ್ನ ಹಡಪದಿಂದ ಮದ್ದಿನ ಬಳ್ಳಿ ತೆಗೆದು ಅವಳ ಕತ್ತಿಗೆ ಕಟ್ಟುವ ಸಮಯದಲ್ಲಿ ಮುದುಕಿ ಬಂದು ರಾಜಕುಮಾರಿಯ ಎಡಗಡೆ ನಿಲ್ಲುವಳು.)

ಮುದುಕಿ : ರಾಜಕುಮಾರೀ, ಅದನ್ನ ಕತ್ತಿಗೆ ಕಟ್ಟಿಕೋಬೇಡ, ಬೇಡ.

ಸಂಜೀವಶಿವ : (ಕಟ್ಟಿ) ರಾಜಕುಮಾರೀ ಈ ಬಳ್ಳಿಯೇ ನೇನು ಅಂತ ತಿಳಿದುಕೊಂಡು
ಕತ್ತಿಗೆ ಕಟ್ಟಿದ್ದೀನಿ. ಇದು ರಾಜಕುಮಾರನ ಹಾಗೆ
ಕತ್ತನ್ನ ತಬ್ಬಿಕೊಳ್ತದೆ. ಪ್ರೀತಿ ಮಾಡುವಾಗಿನಂತೆ ಕ್ಷಣಕ್ಷಣಕ್ಕೆ
ಜೋರಾಗಿ ಬಿಗೀತದೆ. ಉಸಿರುಗಟ್ಟೋತನಕ ಬಿಡೋದಿಲ್ಲ; ಆಯ್ತೆ?

ಮುದುಕಿ : ಲೇ ಸಂಜೀವಶಿವ, ನಿನ್ನ ತಾಯಿ ಕೋಪದಲ್ಲಿ ಕುದಿಯುತ್ತಿದ್ದಾಳೆ.
ಬೇಗ ಮನೆಗೆ ಬರಬೇಕಂತೆ.

ಸಂಜೀವಶಿವ : ಆಯ್ತಮ್ಮ ಬರ್ತೀನಿ.

ರಾಜಕುಮಾರಿ : (ಆನಂದದಿಂದ) ನೀನು ವೈದ್ಯ ಸಂಜೀವಶಿವನ?

ಸಂಜೀವಶಿವ : ಹೌದು.

ರಾಜಕುಮಾರಿ : ಮೊದಲೇ ಯಾಕೆ ಹೇಳಲಿಲ್ಲ?

ಸಂಜೀವಶಿವ : ನೀನು ಕೇಳಲಿಲ್ಲ.

ಮುದುಕಿ : ಲೋ ಮಗ, ಹ್ಯಾಗೆ ಹೇಳಲೋ ನಿನಗೆ? ಇದಕ್ಕಾಗಿ ನೀನು ದಂಡ
ತೆರಬೇಕಾಗುತ್ತದೆ. ನೆನಪಿರಲಿ.

ರಾಜಕುಮಾರಿ : (ಸಂತೋಷಾತಿಶಯದಿಂದ) ನನ್ನ್ನು ಬದುಕಿಸೋವಷ್ಟು ನಿನ್ನ ಆಯುರ್ವೇದ
ಬೆಳೆದಿದೆಯ ವೈದ್ಯ ಮಹಾಶಯಾ?

ಸಂಜೀವಶಿವ : ಅಷ್ಟಂತೂ ಬೆಳೆದಿದೆ.

ರಾಜಕುಮಾರಿ : ನಾನು ನಿಜವಾಗಿಯೂ ಬದುಕುತ್ತೀನ ವೈದ್ಯಮಹಾಶಯಾ?

ಸಂಜೀವಶಿವ : ಹೌದು ನನ್ನ ಮಾತು ಕೇಳಿದರೆ,

ರಾಜಕುಮಾರಿ : ನಾನು ಬದುಕ್ತೀನಿ ಅಂತ ಯಾಕನಿಸ್ತು ನಿನಗೆ?

ಸಂಜೀವಶಿವ : ಯಾಕೆಂದರೆ ನಾನು ವೈದ್ಯ.

ರಾಜಕುಮಾರಿ : ನಾನು ಬದುಕೋದಿಲ್ಲ ಅಂತ ನನಗೆ ಯಾಕನ್ನಿಸ್ತು?

ಸಂಜೀವಶಿವ : ಯಾಕೆಂದರೆ ನೀನು ಧಡ್ಡ ರೋಗಿ.

ರಾಜಕುಮಾರಿ : (ರೇಗಿ) ಇನ್ನೊಂದು ಸಲ ಧಡ್ಡಿ ಅಂದರೆ ಏನು ಮಾಡ್ತೀನಿ ಗೊತ್ತ?

ಸಂಜೀವಶಿವ : ಇನ್ನೊಂದು ಸಲ ನೀನು ಧಡ್ಡಿ.

ರಾಜಕುಮಾರಿ : ನಿನ್ನನ್ನ ಕಂಡರೆ ಸಂತೋಷವಾಗುತ್ತೆ.

ಸಂಜೀವಶಿವ : ವೈದ್ಯನನ್ನ ಕಂಡರೆ ಯಮನನ್ನು ಕಂಡ ಹಾಗಾಡ್ತಾರೆ ಜನ!

ರಾಜಕುಮಾರಿ : ಬೇರೆ ವೈದ್ಯರನ್ನ ಕಂಡರೆ ನನಗೂ ಅಷ್ಟೆ.

ಸಂಜೀವಶಿವ : ಈಗ ಈ ಬೇರನ್ನ ಜಗಿದು ನುಂಗು. ಈ ಎಲೆಯನ್ನ ಅಂಗೈಯಲ್ಲಿ ತಿಕ್ಕಿಕೊಂಡು ಕೆನ್ನೆ, ಕತ್ತು ಮತ್ತು ಎರಡೂ ಕೈಗಳಿಗೆ
ಸವರಿಕೊಳ್ತೀಯಾ?

ರಾಜಕುಮಾರಿ : ಓಹೊ.

(ಹಾಗೆ ಮಾಡುವಳು)

ಸಂಜೀವಶಿವ : ನೀನು ಕ್ಷಮಿಸೋದಾದರೆ ಒಂದು ಅಧಿಕ ಪ್ರಸಂಗತನದ ಮಾತು ಹೇಳಲೇ ರಾಜಕುಮಾರಿ?

ರಾಜಕುಮಾರಿ : ಹೇಳು. ನಿನ್ನಮಾತು ಕೇಳಿದರೂ ಆನಂದವಾಗುತ್ತದೆ.

ಸಂಜೀವಶಿವ : ನೀನು ತುಂಬಾ ಚೆಲುವೆ. ನಿನ್ನಂಥ ಚೆಲುವೆಯನ್ನ ನಾನು ಈವರೆಗೆ ಕಂಡಿಲ್ಲ.

ಮುದುಕಿ : ಸಂಜೀವ ಇಕಾ ನಾನು ಹೊರಟೆ. ಇನ್ನು ನೀನುಂಟು ನಿನ್ನ ದುರ್ದೈವವುಂಟು.

(ಹೋಗುವಳು.)

ರಾಜಕುಮಾರಿ : ಈ ರೋಗ ಏನಲ್ಲಾ ಬದಲಾವಣೆ ಮಾಡಿದೆ ಕಾಣಬಾರದೆ ವೈದ್ಯ ಮಹಾಶಯಾ? ಹೊಳೆಯುತ್ತಿದ್ದ ಕೆನ್ನೆಗಳ ಮ್ಯಾಲೆ ಸುಕ್ಕು ಮೂಡಿ ಕಣ್ಣೀರ ಕಾಲುವೆಗಳಾಗಿವೆ. ಹುಬ್ಬುಗಳು ಅಕಾಲ ಮುಪ್ಪಡರಿ ಮುದಿಕೋತಿಯ ರೂಪ ಕೊಟ್ಟಿವೆ. ಆದರೂ ನನ್ನನ್ನ ಸುಂದರಿ ಅಂತೀಯಲ್ಲಾ, ಚೇಷ್ಟೆಗಾಗಿ ಅಲ್ಲ ತಾನೆ? ನೀನು ಪಕ್ಕದಲ್ಲಿದ್ದರೆ ಗುಣವಾಗುತ್ತೆ ಅನಿಸುತ್ತದೆ. ಆದರೆ ನೀನು ಹೊರಟು ಹೋದರೆ ಅಂತ ಭಯ.

ಸಂಜೀವಶಿವ : ಗುಣವಾಗೋತನಕ ನಾನುನಿನ್ನನ್ನ ಬಿಟ್ಟು ಹೋಗೋದಿಲ್ಲ.
(ಆಕೆಯ ಬೆವರು ಒರೆಸುತ್ತ) ಇಗೊ ನಿನ್ನ ಮುಖ  ತಿಳಿಯಾಗಿ ಕಳೆದೋರುತ್ತಿದೆ; ಜ್ವರ ಬಿಟ್ಟಿತೇ ನೋಡಿಕೊ.

ರಾಜಕುಮಾರಿ : (ನೋಡಿಕೊಂಡು ಆನಂದದಿಂದ) ಹೌದು! ನಿಜವಾಗ್ಲೂ ನನಗೆ
ಜ್ವರ ಇಲ್ಲ ಈವಾಗ! ನೀವು ನಿಜವಾಗಿ ಮನುಷ್ಯರೇನ್ರಿ?

ಸಂಜೀವಶಿವ : ಯಾಕೆ, ರಾಕ್ಷಸನ ಹಾಗಿದ್ದೀನ?

ರಾಜಕುಮಾರಿ : ಅಲ್ಲ, ನೀವು ಯಾವುದಾದರೂ ದೇವರೇ ಆಗಿರಬಹುದ ಅಂತ!

ಸಂಜೀವಶಿವ : ದೇವರಲ್ಲ ಮನುಷ್ಯನೇ. ಆದ್ದರಿಂದ ನನ್ನನ್ನು ಏಕವಚನದಲ್ಲೇ
ಮಾತಾಡಿಸು. ಮನುಷ್ಯನಾದ್ದರಿಂದಲೇ ಅಮ್ಮ ಹೇಳಿದ್ದು; ಅನುಭವಿಸ್ತೀಯಾ
ಅಂತ.

ರಾಜಕುಮಾರಿ : ಅನುಭವಿಸಿದರೇನಾಗ್ತದೆ?

ಸಂಜೀವಶಿವ : ಲೋಕದ ಗಂಡು ಹೆಣ್ಣಿಗೆ ಆಗೋದೆಲ್ಲ ಆಗ್ತದೆ.
ಸುಖ-ದುಃಖ ನಾಚಿಕೆ ಬೇಸರ ಪಶ್ಚಾತ್ತಾಪ…ಎಲ್ಲಾ.

ರಾಜಕುಮಾರಿ : ಅದೆಲ್ಲಾ ಆದರೆ ಎಷ್ಟು ಚೆನ್ನಾಗಿರ್‍ತದೆ ಅಲ್ಲವಾ! ನೋಡು:
ಕಣ್ಣು ಮುಚ್ಚಿ ತೆರೆಯೋದರೊಳಗೆ ಈ ಜಗತ್ತು ಎಷ್ಟು ಸುಂದರವಾಗಿದೆ! ನನಗೆಷ್ಟು ಸಂತೋಷವಾಗಿದೆಯೆಂದರೆ
ಕುಣಿಯೋಣ ಅನ್ನಿಸ್ತಿದೆ!…….

(ಕುಣಿಯತೊಡಗುವಳು. ರಾಜ, ಮಂತ್ರಿ, ಮದನತಿಲಕ, ಮಾರ ಮತ್ತು ಸೈನಿಕರು ಬರುವರು)

ಸೈನಿಕ : ಮಹಾಪ್ರಭು, ಅಗೋ ರಾಜಕುಮಾರಿ ಇಲ್ಲಿದ್ದಾರೆ! ಇವನೇ ಅವರನ್ನು
ಅಪಹರಿಸಿಕೊಂಡು ಬಂದವನು. ಬಂಧಿಸಿರಿ ಅವನನ್ನು.

ಮಾರ : ಪ್ರಭು ಇವನೇ ವೈದ್ಯ ಸಂಜೀವಶಿವ.
(ರಾಜಕುಮಾರಿ ಓಡಿಹೋಗಿ ರಕ್ಷಿಸುವಂತೆ ಸಂಜೀವಶಿವನನ್ನು ಹಿಂದೆ ಹಾಕಿ
ನಿಲ್ಲುವಳು.)

ರಾಜಕುಮಾರಿ : ಅಪ್ಪಾ ಇವನೇ ಸಂಜೀವಶಿವ ವೈದ್ಯ! ನನಗಾಗಲೇ
ಮದ್ದುಕೊಟ್ಟ! ಇಗೋ ನನ್ನ ಜ್ವರ ಇಳಿದಿದೆ!

ರಾಜ : (ಮಗಳ ಜ್ವರ ಪರೀಕ್ಷಿಸಿ) ನಂಬಲಾಗುತ್ತಿಲ್ಲ! ಆದರೆ ಪವಾಡ ನಡೆದು ಹೋಗಿದೆ! ಎರಡು ವಾರಗಳಿಂದ ಇಳಿಯದ ಜ್ವರ ಇಳಿದು ರಾಜಕುಮಾರಿ ಪುನಾರ್ಜತಳಾಗಿದ್ದಾಳೆ! ಧನ್ಯನಾದೆ ವೈದ್ಯ ಮಹಾಶಯಾ! ನಿನ್ನ ಬಳಿಗೆ ಎಷ್ಟು ಸಲ ಹೇಳಿ ಕಳಿಸಿದರೂ ಬಾರದವನು, ಈಗ ನೀನಾಗಿ ರಾಜಕುಮಾರಿಗೆ ಸಿಕ್ಕು, ಅವಳಿಗೆ ಮದ್ದು ಕೊಟ್ಟದ್ದು ನನ್ನ ವಂಶದ ಭಾಗ್ಯ ವಿಶೇಷ. ನಿನ್ನ ಕೀರ್ತಿಯನ್ನು ಕಿವಿಯಾರೆ ಕೇಳಿದ್ದೆವು. ಈಗ ಕಣ್ಣಾರೆ ಕಾಣುವಂತಾಯ್ತು.

ಸಂಜೀವಶಿವ : ನನ್ನ ಕರ್ತವ್ಯ ನಾನು ಮಾಡಿದ್ದೇನೆ ಪ್ರಭು. ನಾಳೆ ನಾನೇ ಬಂದು ರಾಜಕುಮಾರಿಯನ್ನ ನೋಡುತ್ತೇನೆ.

ರಾಜ : ಆಯ್ತು ಮಹಾಶಯ ರಾಜಕುಮಾರಿಯ ಜೊತೆಗೆ ನಮಗೆಲ್ಲ ಆಯುರಾರೋಗ್ಯ ಭಾಗ್ಯ ಕೊಟ್ಟಿದ್ದೀಯಪ್ಪ, ನಿನ್ನ ಉಪಕಾರವನ್ನು ಎಂದಿಗೂ ಮರೆಯಲಾರೆವು.

ರಾಜಕುಮಾರಿ : ವೈದ್ಯ ಮಹಾಶಯ, ಆ ಮುದುಕಿ ಅರಮನೆಗೆ ಬಂದರೇನು ಮಾಡಲಿ?

ಸಂಜೀವಶಿವ : ಏನೂ ಮಾಡಬೇಡ, ಈ ಬೇರು ಅಗಿಯುತ್ತ ಆಟ ಆಡಿಕೊಂಡಿರು.
(ಕೊಡುವನು. ಎಲ್ಲರೂ ಹೊರಡುವರು)

# ತಾಯಿ ವಿನಾ ಮಗ

(ರಾತ್ರಿ, ತಾಯಿ ಒಬ್ಬಳೇ ವೈದ್ಯಶಾಲೆಯಲ್ಲಿ ಕೂತಿದ್ದಾಳೆ. ಜಿಂಕೆಮರಿ ನೇತ್ರಾವತಿಯ ಹೆಣ ಒಂದು ಕಡೆ ಬಿದ್ದಿದೆ. ನಿದ್ರೆ ಬಾರದ ಸಂಜೀವಶಿವ ಅಲ್ಲಿಗೆ ಬರುತ್ತಾನೆ.)

ಸಂಜೀವಶಿವ : ಇಷ್ಟು ರಾತ್ರಿಯಲ್ಲಿ ಯಾರೂ ಎಚ್ಚರಿಲ್ಲ. ನೀನೂ ಮಲಗಿರಬೇಕು ಅಂದುಕೊಂಡೆ ತಾಯೀ.

ತಾಯಿ : ಮಲಗುವಂಥ ನಿರುಮ್ಮಳ ಸ್ಥಿತಿ ನನಗಿಲ್ಲ ಮಗು. ನನ್ನ ನೆಮ್ಮದಿ ಹಾಳಾಗಿದೆ. ನಿನಗೂ ನಿದ್ದೆ ಬರಲಿಲ್ಲವೆ?

ಸಂಜೀವಶಿವ : ಮುದ್ದುಮರಿ ನೇತ್ರಾವತಿ ಹೆಣವಾಗಿ ಬಿದ್ದ ಪರಿಯ ಹ್ಯಾಗೆ ಮರೆಯಲಿ ತಾಯಿ?
ನುಣ್ಣಾದ ಮೈತುಂಬ ಚಿನ್ನದ ಚುಕ್ಕೆ
ಆಕಾಶ ಗುರಿಯಾಗಿತ್ತು ಹರಿಣಾಕ್ಷಿಯ ತೆರೆದ ನೋಟಕ್ಕೆ.
ಹೊಟ್ಟೆಗೆ ಹೊಕ್ಕ ಬಾಣಕ್ಕೆ
ಹೊಕ್ಕಳು ಸಿಡಿದು ನೆತ್ತರಾಡಿ ನೆಲ ಒದ್ದೆಯಾಗಿತ್ತು.
ಬೇಟೆಗಾರನ ಕ್ರೌರ್ಯ ಅಕ್ಷಮ್ಯ ತಾಯಿ!

ತಾಯಿ : ನನಗೂ ಖೇದವಾಯಿತು ಮಗನೆ.

ಸಂಜೀವಶಿವ : ರಾಜಕುಮಾರಿಯ ಗವಿ ಪ್ರವೇಶ ನಿಷೇಧಿಸಿದ್ದಕ್ಕೂ
ನೇತ್ರಾವತಿಯ ಸಾವಿಗೂ ಸಂಬಂಧವುಂಟೆ ತಾಯಿ?

ತಾಯಿ : ಇದ್ದರೆ ಸಾವವರಿಗೆ ಜೀವಕೊಡುವ
ಇಲ್ಲವೆ ಜೀವರ ಜೀವ ತೆಗೆವ ಪ್ರಬುದ್ಧ ವೈದ್ಯ
ನಿನಗೆ ಗೊತ್ತಪ್ಪ.

ಸಂಜೀವಶಿವ : ನಿನ್ನ ಮಾರ್ಗದರ್ಶನ ಪಡೆಯದೆ
ರಾಜಕುಮಾರಿಗೆ ಮದ್ದು ಕೊಟ್ಟುದ್ದಕ್ಕೆ ಕೋಪವೆ ತಾಯಿ?

ತಾಯಿ : ಹಿಂದೆ ಸಣ್ಣವನಿದ್ದಾಗ
ಹೇಳಿದ ಹಿತನುಡಿಗಳ ಪಾಲಿಸುತ್ತಿದ್ದೆ.
ಇಗ ದೊಡ್ಡವನಾಗಿದ್ದೀಯಪ್ಪ, ತಾಯಿಯ ಕೀಳೆನಿಸಿ
ಅವಳ ಕಟ್ಟಳೆಗಳ ಕಡೆಗಣಿಸಿ ಸಂಭ್ರಮಿಸಬಲ್ಲೆ,
ಯಶಸ್ಸಿನ ಅಹಂಕಾರಗಳನ್ನು ಮೈತುಂಬ ಸುತ್ತಿಕೊಂಡ
ನಿನಗೆ ಮುದಿ ತಾಯಿಯ ಅಗತ್ಯವೇನಿದೆ?

ಸಂಜೀವಶಿವ : ನೋವಾಗುತ್ತದೆ ಎದೆಗೆ ನಿನ್ನಮಾತಿನಿಂದ,
ಮಾತಿನ ವ್ಯಂಗ್ಯದಿಂದ.
ನಿನ್ನ ಬಿಟ್ಟು ಮತ್ತಿನ್ನು ಹಿತವರುಂಟೆ ನನಗೆ?
ಸೆಳೆಯಲ್ಪಟ್ಟವಳಂತೆ ಗವಿಯೊಳಕ್ಕೆ ಓಡುತ್ತಿದ್ದ ರಾಜಕುಮಾರಿಯನ್ನ
ನಿಲ್ಲಿಸಲು ಅಡ್ಡಗಟ್ಟಿ ಕೈ ಚಾಚಿದಾಗ
ನಾಡೀ ಸಮೇತ ಅವಳ ಕೈ ಸಿಕ್ಕಿತು ತಾಯಿ.
ಕ್ಷಣಾರ್ಧದಲ್ಲಿ ಕವಿಗೆ ಕಾವ್ಯ ಹೊಳೆವಂತೆ
ಅವಳ ಇಡೀ ರೋಗದ ಗುಟ್ಟು ಹೊಳೆಯಿತು.
ಆ ಸಂದರ್ಭದಲ್ಲಿ
ಒಂದು ಬಗೆಯ ಉಲ್ಲಾಸ ಮತ್ತು ಅಹಂಕಾರ
ನನ್ನಲ್ಲಿ ಮೂಡಿದ್ದು ನಿಜ ತಾಯಿ,
ಆ ನಾಡಿ
ಬೇಸಿಗೆಯಲ್ಲಿ ತಾಸೆ ಬಾರಿಸಿದಂತೆ ಹೊಡೆಯುತ್ತಿತ್ತು.
ನಿನ್ನ ಆಶೀರ್ವಾದ ದೊಡ್ಡದು.
ಬಹಳ ದಿನಗಳಿಂದ ಚಿಕಿತ್ಸಾ ವಿಧಾನವೊಂದರ ಪ್ರಯೋಗಕ್ಕಾಗಿ
ಹಾತೋರೆಯುತ್ತಿದ್ದೆ.
ರೋಗಿಯನ್ನು ಪ್ರಸನ್ನಗೊಳಿಸಿ ತನ್ನದೇಹದ ಮೇಲೆ
ತಾನೇ ನಿಯಂತ್ರಣ ಸಾಧಿಸುವ ಹಾಗೆ ಮಾಡುವುದೇ
ಆ ವಿಧಾನ.
ಅದರಲ್ಲಾಕೆ ಎಷ್ಟು ಯಶಸ್ವಿಯಾದಳೆಂದರೆ
ನಾನು ನಾಡಿ ನೋಡುತ್ತಿರುವಂತೆಯೇ ಅವಳ ಜ್ವರ
ಹತೋಟಿಗೆ ಬಂದವು ತಾಯಿ!

ತಾಯಿ : ಸತ್ಯದಲ್ಲಿ ಸುಳ್ಳು ಬೆರೆಸಿ ಮಾತಾಡುತ್ತೀ ಮಗನೇ.
ಮರವೆಯ ಮಾತಾಡುತ್ತೀ,
ಮುದುಕಿ ಬಂದು ನನ್ನ ನೆನಪು ಕೊಡಲಿಲ್ಲವೇ?
ಜವಾಬು ಕೊಡು.

ಸಂಜೀವಶಿವ : ಹಾಗೆಲ್ಲ ಕೋಪ ಮಾಡಿಕೋಬೇಡ ತಾಯೀ,
ನೀನು ಕೋಪಗೊಂಡಾಗೆಲ್ಲ ನಾನು ಚಿಕ್ಕ ಬಾಲಕನಾಗಿ
ಆಜ್ಞಾಧಾರಕನಾಗಿರಬೇಕಂತ ಅನಿಸುತ್ತದೆ.
ನಿನ್ನನ್ನು ಆನಂದಗೊಳಿಸುವುದಕ್ಕೆ
ಏನೆಲ್ಲ ಆಟಗಳನ್ನ ಆಡೋಣವೆನಿಸುತ್ತದೆ.

ದಯವಿಟ್ಟು ಇವತ್ತಿನಿಂದ ನೀನು ಶೆಟಿವಿ ತಾಯಾಗೇ ಇರು.
ಒಮ್ಮೆ ದೊಡ್ಡವನಾದ ಮೇಲೆ ಮತ್ತೆ ಚಿಕ್ಕವನಾಗಲು ನನಗಿಷ್ಟವಿಲ್ಲ.

ತಾಯಿ : ನನ್ನ ಪ್ರಶ್ನೆಗಿದು ಉತ್ತರವಲ್ಲ ಮಗನೇ.
ಸುತ್ತಿಕೊಂಡ ಸುಳ್ಳುಗಳ ಬಿಚ್ಚಿ, ನಿಜದಲ್ಲಿ ನಿಂತುಕೊಂಡು
ಅದೇನಿದೆಯೋ ಒಪ್ಪಿಕೊ:
ರೋಗಿ ಬದುಕೋದು ತಾಯ ಮಾರ್ಗದರ್ಶನದಿಂದಲೋ
ನಿನ್ನ ಮದ್ದಿನಿಂದಲೋ? -ಎಂಬುದನ್ನ
ಒರೆಗೆ ಹಚ್ಚುವ ತವಕ ನಿನ್ನಲ್ಲಿರಲಿಲ್ಲವೆ?
ತಾಯಿಯ ನೆಪದ ಮಾರ್ಗದರ್ಶನಕ್ಕಿಂತ,
ನಿನ್ ಮದ್ದೇ ಮೇಲೆಂಬ ಒಳ ಅಹಂಕಾರ ನಿನ್ನಲ್ಲಿರಲಿಲ್ಲವೆ?

ಸಂಜೀವಶಿವ : ನನ್ನ ಹೃದಯದ ರಹಸ್ಯಗಳೆಲ್ಲ ನಿನಗಾಗಲೇ
ತಿಳಿದಿವೆ ತಾಯಿ, ನಿನ್ನಿಂದ ಮರೆಮಾಚುವುದೇನಿದೆ?
ಎರಡು ತಲೆಗಳ ಗಂಡಭೇರಡುಂಡನಾಗಿದ್ದೇನೆ; ಕ್ಷಮಿಸು ತಾಯಿ.
ಎರಡೂ ಮುಖಗಳನ್ನ ಮ್ಯಾಲೆತ್ತಿ
ಪರಸ್ಪರ ವಿರುದ್ಧ ದಿಕ್ಕಿನಲ್ಲಿ ನೋಡುತ್ತ ನಿನ್ನನ್ನು
ಸಮಾಧಾನ ಪಡಿಸಲು ಇಲ್ಲವೆ ಗೆಲ್ಲಲು
ಹೊಂಚು ಹಾಕುತ್ತಿದ್ದೇನೆ.
ಒಂದು ಮುಖ ನಿನ್ನನ್ನು ವೈರಿ ಅನ್ನುತ್ತದೆ.
ಒಂದನ್ನ ಕಡಿದುಹಾಕಿ ಇನ್ನೊಂದನ್ನ ಇಟ್ಟುಕೊಳ್ಳಬೇಕೆಂಬುದು
ನಿನ್ನಾಸೆ. ನನ್ನ ದುರ್ದೈವವೆಂದರೆ
ಯಾವುದನ್ನ ಕಡಿದು ಹಾಕಿದರೂ ಇನ್ನೊಂದು ನಂಜೇರುತ್ತದೆ.
ಏನು ಮಾಡಲಿ ಹೇಳು ತಾಯಿ.

ತಾಯಿ : ತಾಯಿ ಮತ್ತು ವೈರಿಗಳಲ್ಲಿ ಆಯ್ಕೆ ಮಾಡಿಕೊಳ್ಳಬೇಕಾದವನು
ನೀನು ಮಗನೆ, ನಾನಲ್ಲ.
ನಿನ್ನ ಮದ್ದಿನ ಬಗ್ಗೆ ಒಂದು ವಿಷಯ ಹೇಳಬೇಕೆಂದಿದ್ದೆ;
ಜೀವರಿಗೆ ಮದ್ದು ನೆರವಾಗುತ್ತದೆ ನಿಜ.
ಆದರೆ ಅಂತಿಮ ತೀರ್ಮಾನ ಮದ್ದಿನದಲ್ಲ ಮಗನೇ.
ಮಾನವ ಅಹಂಕಾರದ ಮೇಲೆ ಸವಾರಿ ಮಾಡುತ್ತಿರುವುದರಿಂದ
ನಿನಗೆ ನಿಜ ಕಾಣಿಸುತ್ತಿಲ್ಲ.

ಸಂಜೀವಶಿವ : ಇಷ್ಟು ಆಳವಾಗಿ ನಾನು ಖಂಡಿತ ಯೋಚಿಸಲಿಲ್ಲ ತಾಯಿ.
ಅಕಾಲದಲ್ಲಿ ಒಬ್ಬರ ಜೀವ ಹೋಗಬಾರದೆಂಬುದೇ

ನನ್ನಕಾಳಜಿ, ಅದೇ ಪ್ರೇರಣೆಯಾಗಿ ನಿನ್ನ ಅಪ್ಪಣೆಯಿಲ್ಲದೆ
ರಾಜಕುಮಾರಿಗೆ ಮದ್ದು ಕೊಟ್ಟೆ.

ತಾಯಿ : ಒಬ್ಬರ ಕಾಲ ಅಕಾಲಗಳನ್ನು ನಿರ್ಧರಿಸುವಾತ ನೀನು ಯಾರು?
ನಿನ್ನ ಮದ್ದಿನಿಂದ ಅವಳ ದೈವ ನಿರ್ಣಯ ಮಾಡಬಲ್ಲೆಯಾ?

ಸಂಜೀವಶಿವ : ಹಾಗಾದರೆ ನನ್ನ ಮದ್ದಿಗೆ,
ಮಾನವ ಪ್ರಯತ್ನಗಳಿಗೆ ಬೆಲೆಯೇ ಇಲ್ಲವೆ ತಾಯಿ?

ತಾಯಿ : ಸತ್ಯ ತುಂಬ ಆಳದಲ್ಲಿರುವಂಥಾದ್ದು.
ಅಲ್ಲಿಯತನಕ ಮುಳುಗೇಳವಷ್ಟು ತಾಕತ್ತು
ನಿನ್ನ ತಿಳುವಳಿಕೆಗಿಲ್ಲ ಮಗನೇ.
ದುಃಖಕ್ಕಾಗಿ ದುಃಕಿಸುವುದು ದುರ್ಬಲ ಮನಸ್ಸಿನ ಲಕ್ಷಣ.
ಹಸಿರು ಹಸಿರಿನಂತೆ ಯಾಕಿದೆ?
ಮುದಕರು ಮುದುಕರಂತೆ ಯಾಕಿದ್ದಾರೆ?
ಮರಣ ಮರಣದಂತೆ, ಜನನ ಜನನದಂತೆ ಯಾಕಿದೆ
ಎಂದು ತರ್ಕ ಮಾಡಿದರೆ ಏನು ಫಲ ಸಿಕ್ಕೀತು?
ಜನ ದನ ಸಾಯವುದಿಲ್ಲವೆ?
ನಿನ್ನ ತಂದೆ ತಾಯಿ ಸಾಯಲಿಲ್ಲವೆ?
ರಾಜಕುಮಾರಿಯ ಸಾವಿನಲ್ಲಿ ವಿಶೇಷವೇನಿದೆ?
ಸಾವು ಜಗತ್ತಿನ ಸಾಮಾನ್ಯ ನಿಯಮ.
ಮನುಷ್ಯನೇ ಸಾಯುವುದುಂಟಂತೆ, ಇನ್ನು ಪ್ರೀತಿಯದೇನು?
ದೇಹ ಬೆಳೆದಂತೆ ಅದೂ ಹುಟ್ಟಿ ಸಾಯುತ್ತದೆ.
ಪಡ್ಡೆ ಹುಡುಗಿಯ ಹುಡುಗಾಟಿಕೆ ಮಾತಿಗೆ ಒಪ್ಪಿಕೊಂಡರೆ
ನಿನ್ನ ನೀನು ಕಡಿಮೆ  ಬೆಲೆಗೆ ಮಾರಿಕೊಂಡಂತೆ.

ಸಂಜೀವಶಿವ : ನಮ್ಮಿಬ್ಬರ ಘರ್ಷಣೆಯಲ್ಲಿ ರಾಜಕುಮಾರಿ ಸಾಯಬಾರದು.
ಇದೊಂದು ಬಾರಿ ನನ್ನ ಮದ್ದಿಗೆ ಮನ್ನಣೆ ಕೊಡು ತಾಯಿ.
ರಾಜಕುಮಾರಿ ಏನು ಮಾಡಿದ್ದರೂ ಆ ತಪ್ಪಿನ ಫಲ
ನನಗೆ ವರ್ಗಾವಣೆಯಾಗಲಿ.

ತಾಯಿ : ಅಗಾಧವಾದ ಶಕ್ತಿ ಕೊಟ್ಟಿದ್ದಾಲೆ ಅವಳು. ಮೊದಲಾದರೆ
ಒಂದು ಸಣ್ಣ ರೋಗದ ಜೊತೆ ಜಗಳವಾಡಲೂ ನಿನಗೆ
ನಿನ್ನ ತಾಯಿಯ ಸಹಾಯ ಬೇಕಿತ್ತು. ಈಗ ಅವಳನ್ನು
ನೋಡಿದ ಮೇಲೆ ನನ್ನ ಜೊತೆಗೇ ಜಗಳವಾಡುವ

ಶಕ್ತಿ ಬಂದಿದೆ!
ನಿನ್ನ ರೋಗಿ ರಾಜ್ಯದ ರಾಜಕುಮಾರಿ!
ನಿನಗವಳು ಬಂಗಾರ ಬಳ್ಳಿ, ವೈಭವದ ಪಲ್ಲಕ್ಕಿಯಲ್ಲಿ ಕೂರಿಸಿ
ಸಾವಿರ ಬಿರುದಾವಳಿ ಹೊಗಳಿಸಿ,
ಬಿಳಿಕುದುರೆ ಬಿಳಿಸತ್ತಿಗೆಯ ಬಹುಮಾನ ಕೊಡಬಲ್ಲಳು.
ನಾನೇನು ಕೊಡಬಲ್ಲೆ ನಿನಗೆ?
ಆದರೆ ನಿನಗವಳು ಆಯುಷ್ಯ ಭವಿಷ್ಯವ ಕೊಡಲಾರಳು ಮಗನೆ.

ಸಂಜೀವಶಿವ : ನನಗೇನು ಕಮ್ಮಿಯಾಗಿದೆ ತಾಯಿ?
ಗಾಳಿ ಇದೆ, ಬೆಳಕಿದೆ, ಮಳೆ ಇದೆ, ಹಸಿರಿದೆ.
ಇನ್ನೂ ಬೇಕಿದ್ದರೆ ಬೇಡಿದ್ದನ್ನು ಕೊಡುವ ತಾಯಿ ನೀನಿದ್ದೀ.

ತಾಯಿ : ನನ್ನ ಅಹಂಕಾರ ತೃಪ್ತಿಗೆಂದು ಶ್ರೋತೃಸುಖ ನುಡಿಯುತ್ತಿರುವಿ
ನನಗೆ ಅಹಂಕಾರಗಳಿಲ್ಲ ಮಗನೇ,
ನಿನ್ನ ಕವಿತ್ವವನ್ನು ವ್ಯರ್ಥ ವೆಚ್ಚ ಮಾಡಬೇಡ.
ನನ್ನ ಅಪ್ಪಣೆ ಇಲ್ಲದೆ ರಾಜಕುಮಾರಿಗೆ ಮದ್ದು ಕೊಟ್ಟು
ದೈವ ಸಂಕಲ್ಪಕ್ಕೆ ಸವಾಲು ಹಾಕಿರುವೆ;
ಮೊದಲದನ್ನ ಹಿಂತೆಗೆದುಕೊ.

ಸಂಜೀವಶಿವ : ರಾಜಕುಮಾರಿಯ ಜೀವ ನಿನ್ನ ಕೈಲಿದೆ.
ನನ್ನ ಭವಿಷ್ಯ ಅವಳ ಕೈಲಿದೆ! ವಿಚಿತ್ರವಲ್ಲವೆ?
ಅವಳ ಕಣ್ಣ ಬೆಳಕನ್ನ ನಂದಿಸಬೇಡ ತಾಯೀ.

ತಾಯಿ : ನಿನ್ನ ತುಟಿಗಳ ಮೂಲಕ
ಅವಳೇ ಮಾತಾಡುತ್ತಿರುವಂತಿದೆ.
ಇವೆಲ್ಲ ಪ್ರೇಮದಿಂದ ಸುರುವಾಗಿ ಹಾಸಿಗೆಯಲ್ಲಿ ಮುಗಿವ
ಕಥೆಗಳು ಮಗನೆ. ಕಾಮವೆಂಬುದು ಬೆಂಕಿ, ಬೆಳಕಲ್ಲ,
ಸುಡುತ್ತದೆ, ಬೆಳಕು ಕೊಡೋದಿಲ್ಲ.

ಸಂಜೀವಶಿವ : ನಾನಿನ್ನೂ ನನ್ನ ಕಥೆಯನ್ನೇ ಸುರು ಮಾಡಿಲ್ಲ.
ಆಗಲೇ ವಿಮರ್ಶೆ ಸುರು ಮಾಡಿಬಿಟ್ಟೆಯಲ್ಲ ತಾಯೀ!

ತಾಯಿ : ಪರಸ್ಪರ ವಂಚನೆ ಮಾಡಿಕೊಳ್ಳೋದು ಬೇಡ.
ನೋಡು ಮಗೂ,
ನಿನ್ನನ್ನ ಈತನಕ ರಕ್ಷಣೆ ಮಾಡಿದ ತಾಯಿ,

ಇವತ್ತು ನೀನು ನೋಡಿದ ಆ ಹುಡುಗಿಗಿಂತ
ಕಡಿಮೆಯೆಂದು ಒಮ್ಮೆ ಹೇಳಿಬಿಡು, ತೀರ್ಮಾನವಾಗಿ ಬಿಡಲಿ,
ಚೌಕಾಶಿ ಬೇಡ.

ಸಂಜೀವಶಿವ : ಏನು ಮಾತು ತಾಯಿ! ತಾಯಿ ವಿನಾ ಮಗನುಂಟೆ?
ಇಷ್ಟು ವರ್ಷಗಳ ತರುವಾಯ ಪ್ರಥಮ ಬಾರಿಗೆ
ತಾಯಿಯನ್ನು ನೋಡುತ್ತಿದ್ದೇನೆಂದು ಅನಿಸುತ್ತದೆ!

ತಾಯಿ : ಅಂದರೆ ಇಷ್ಟು ವರ್ಷ ತಬ್ಬಲಿಯಾಗಿದ್ದೆಯಾ ಮೂರ್ಖಾ?

ಸಂಜೀವಶಿವ : *(ಉಕ್ಕಿ ಬಂದ ದುಃಖದಿಂದ)* ನನಗೊಬ್ಬ ತಾಯಿ ಇದ್ದಳು, ಪ್ರೀತಿಸುತ್ತಿದ್ದಳು
ಅಕ್ಕರೆ ಮಾಡುತ್ತಿದ್ದಳು. ಗಿಡ ಮರ ಹಕ್ಕಿಗಳ ಕೊರಳಿನಿಂದ
ಜೋಗುಳ ಹಾಡುತ್ತಿದ್ದಳು.
ಆಕಾಶದಲ್ಲಿ ಬಣ್ಣಗಳ ಎರಚಿ ಚಿತ್ರ ಬಿಡಿಸುತ್ತಿದ್ದಳು.
ಈಗ ಅವಳೆಲ್ಲಿದ್ದಾಳೆ?

ತಾಯಿ : ನಿನ್ನ ತಾಯಿ ಕರುಳಿಲ್ಲದ ಕೊರಡು ಅಂತ ತಿಳಿಯೋದಕ್ಕೆ
ಇಷ್ಟೊಂದು ಶ್ರಮ ಪಡಬೇಕಾಯಿತೇ ನೀನು?
ಕೇಳಿದ್ದರೆ ನಾನೇ ಹೇಳುತ್ತಿದ್ದೆ.
ಅಷ್ಟೂ ಹೇಳದವಳು ತಾಯಿ ಹ್ಯಾಗಾದಾಳು?
ಕರುಳಿಲ್ಲದ ಬರೀ ಮೂಳೆ ಕಣಪ್ಪ ನಾನು!

ಸಂಜೀವಶಿವ : ನನ್ನ ಸಂತೋಷಗಳೆಲ್ಲ ಖಾಲಿ ಆದವು ತಾಯಿ.

ತಾಯಿ : ಅವಿನ್ನೂ ನಿನ್ನ ಮುಷ್ಟಿಯಲ್ಲೇ ಇವೆ. ಮುಷ್ಟಿ ಬಿಚ್ಚಿ
ನೀನವನ್ನು ನೋಡಬೇಕಷ್ಟೆ. ಹೊಸ ಯೌವನ ಇದೆ.
ಲೋಕದಲ್ಲಿ ಸಾವಿರಾರು ಚೆಲುವೆಯರಿದ್ದಾರೆ.
ಮೊದಲು ಹೋಗು.
ಮಾಡಿದ ತಪ್ಪನ್ನು ಸರಿಪಡಿಸಿಕೊಂಡು ಬಾ.

ಸಂಜೀವಶಿವ : ಅಂದರೆ?

ತಾಯಿ : ನಾಡಿದ್ದು ಅಮವಾಸ್ಯೆಯ ಅಸ್ತಮಾನ ಆಗೋದರೊಳಗೆ
ರಾಜಕುಮಾರಿಯ ಕತ್ತಿನಲ್ಲಿ ನೀನು ಕಟ್ಟಿರುವ
ಮದ್ದಿನ ಬಳ್ಳಿಯನ್ನು ಕಿತ್ತುಕೊಂಡು ಬಾ.

ಸಂಜೀವಶಿವ : ತಪ್ಪಿದರೆ?

ತಾಯಿ : *(ಕೋಪದಿಂದ)* ಧಡ್ಡತನದ ಬಗ್ಗೆ ಛಲ ಹಿಡಿದವರುಂಟೆ? ತಪ್ಪಿದರೆ
ಅವಳು ಏಕ ಕಾಲಕ್ಕೆ ಇಬ್ಬರನ್ನು ಮದುವೆಯಾಗುತ್ತಾಳೆ;
ಒಂದು ನಿನ್ನನ್ನು, ಇನ್ನೊಂದು ನಿನ್ನ ಜೊತೆ ಸಾವನ್ನು.
ಮದುವೆ ಮಂಗಲ ಮತ್ತು ಅವಳ ಸಾವಿನ
ನಯನ ಮನೋಹರ ದೃಶ್ಯವನ್ನ
ನೀನು ನೋಡದಿರಲಿ ಎಂಬುದಷ್ಟೇ ನನ್ನ ಆಸೆ.
ಗಿರಿಮಲ್ಲಿಗೆ-

ಗಿರಿಮಲ್ಲಿಗೆ : ತಾಯಿ.

ತಾಯಿ : ಸತ್ತ ನೇತ್ರಾವತಿಯ ಹೊರಕ್ಕೆಸೆದು ಬರಬಾರದೆ? (ತಾಯಿ ಒಳಕ್ಕೆ ಹೋಗುವಳು. ಸಂಜೀವಶಿವ ತಬ್ಬಿಬ್ಬಾಗಿ ನಿಂತಿದ್ದಾಗ ಜಿಂಕೆಯ ಶವವನ್ನು ಗಿರಿಮಲ್ಲಿಗೆ ಹೊರಕ್ಕೆಸೆಯಲು ಎಳೆದುಕೊಂಡು ಹೊರಡುವಳು.)

## ಗರಿಗೆದರಿದ ನವಿಲು

*(ಅರಮನೆ, ರಾಜಕುಮಾರಿ, ಪುಷ್ಪಗಂಧಿ)*

ರಾಜಕುಮಾರಿ : ಪುಷ್ಪಗಂಧಿ-

ಪುಷ್ಪಗಂಧಿ : ರಾಜಕುಮಾರಿ

ರಾಜಕುಮಾರಿ : ವೈದ್ಯ ಮಹಾಶಯ ಇನ್ನೂ ಬರಲಿಲ್ಲವಲ್ಲೆ?

ಪುಷ್ಪಗಂಧಿ : ಇನ್ನೇನು ಬಂದಾರು.
ನೀವು ಈ ದಿನ ಬಹಳ ಬೇಗ ಎದ್ದಿದ್ದೀರಿ. ಆಗಲೇ
ಉದ್ಯಾನದಲ್ಲಿ ಅಡ್ಡಾಡಿ ಬಂದಿದ್ದೀರಿ.

ರಾಜಕುಮಾರಿ : ಹಗಲುಗನಸುಗಳಿಂದ ಭಾರವಾಗಿದ್ದ ಕಣ್ಣಿಗೆ ನಿದ್ದೆಯೇ
ಬರಲಿಲ್ಲ ಮಹಾರಾಯಳೇ. ಅದಕ್ಕೇ ಬೆಳಗಾಗುವ ಹೊತ್ತಿಗೆ
ಉದ್ಯಾನಕ್ಕೆ ಹೋಗಿದ್ದೆ. ಸಸ್ಯಜಾತಿ ಸುಮ್ಮಾನ ಸಪನಿದ್ದೆಯಲ್ಲಿ
ಮಲಗಿ ಉದ್ಯಾನ ಪ್ರಶಾಂತವಾಗಿತ್ತು.
ನಾನು ಸಂಚರಿಸುತ್ತಿದ್ದದ್ದು ಯಾರ ಅರಿವಿಗೂ ಬಂದಿರಲಿಲ್ಲ,
ನಾನು ಬಂದಿರೋದನ್ನ ತಿಳಿಸೋಣ ಅಂತ
ಮೆಲ್ಲಗೆ ಒಂದು ಹಾಡು ಗುನುಗಿದೆ. ಯಾರಿಗೂ ಕೇಳಿಸಲಿಲ್ಲ.

ಆಮೇಲೆ ಮೂಡುಮಲೆಯಿಂದ ಹೊಸ ಸೂರ್ಯೋದಯದ
ಕಲ್ಯಾಣ ಬೆಳಕಾಯಿತು ನೋಡು:
ಹಸರಿನಲ್ಲಿ ಹಸೆಯಿಟ್ಟಂತೆ ಬಿಸಿಲು ಬಂದು,
ಹುಲ್ಲಿನ ದಳಗಳಲ್ಲಿ ವಜ್ರದ ಹರಳಿಬ್ಬನಿ ಹೊಳೆದು
ಉದ್ಯಾನದಲ್ಲಿ ಕೈಲಾಸ ಕಳಚಿ ಬಿದ್ಧಂಗಾಯ್ತೆ!
ಅವ್ವಯ್ಯ! ಹೂವಿಲ್ಲದೆ ಪರಿಮಳ ಬೀರುವುದಿದ್ಯಾವ ಮರವೇ!
ಅಂತ ತಿರುಗಿ ನೋಡಿದರೆ-
ಪಕ್ಕದಲ್ಲೇ ಇದೆ ಸುಖದ ಸನ್ನಿಧಿ! ಎಳೆಯ ಸಂಪಿಗೆಯ ಮರ!
ಹಸಿರು ಹೃದಯವ ಮ್ಯಾಲೆ ಒಂಟು ಹೂವರಳಿ
ಹೊಳೆವುತಾ ಇದೆ ತುಪ್ಪದ ದೀಪದ ಹಾಗೆ!
ಮೆಲ್ಲಗೆ ಮರವ ಕುಲುಕಿದರೆ
ಹೆಸರು ಗೊತ್ತಿಲ್ಲದ ಹಸಿರು ದೇವರೊಬ್ಬ
ಬಲಹೂ ಕೊಟ್ಟಂತೆ ತೊಟ್ಟು ಕಳಚಿ ಕೈಗೇ ಬಿತ್ತು ಹೂ!
ಹೂವಿನ ಸ್ಪರ್ಶವಾದದ್ದೇ-
ಒಣಗಿದ ಮಡುವಿಗೆ ಹೊಸನೀರು ನುಗ್ಗಿದಂತಾಗಿ
ಒಂದು ಸಲ ಮೈಮುರಿದಾಕಳಿಸಿ ಕೊಡವಿಕೊಂಡೆದ್ದೆ ನೋಡು;
ಹೊಸದಿನದ ಎಲ್ಲಾ ಶಕ್ತಿಗಳು ನನ್ನ ವಶಕ್ಕೆ ಬಂದವು.
ಆಗಲೇ ತೀರ್ಮಾನಿಸಿ ಬಿಟ್ಟೆ; ಬದುಕೋಣ ಅಂತ.

ಪುಷ್ಪಗಂಧಿ : ಎಷ್ಟು ದಿನಗಳಾಗಿತ್ತು ಹಿತಕರವಾದ ಇಂಥ ಮಾತು ಕೇಳಿ!
ಗಿಣಿಯ ಹಾಗೆ ನೀವು ಹೀಗೇ ನುಡಿದಾಡುತ್ತಿದ್ದರೆ
ಹಾಗೇ ಕೇಳಿಕೊಂಡಿರೋಣ ಅನ್ನಿಸುತ್ತದೆ.

ರಾಜಕುಮಾರಿ : ವೈದ್ಯ ಮಹಾಶಯನ ವಿಷಯ ನಿನಗಿನ್ನೂ ಹೇಳಲಿಲ್ಲವಲ್ಲೇ.

ಪುಷ್ಪಗಂಧಿ : ನಿನ್ನೆಯಿಂದ ಹತ್ತು ಸಲ ಕೇಳಿದ್ದಾಯ್ತು. ಇನ್ನೊಮ್ಮೆ ಕೇಳುತ್ತೇನೆ ಹೇಳಿ.

ರಾಜಕುಮಾರಿ : ಆತನ ಬಗ್ಗೆ ಹೇಳೋದಕ್ಕೆ ಚಂದ ಮಾತುಗಳೇ ಸಿಗುತ್ತಿಲ್ಲ ಕಣೆ.
ದುಂಡು ಮುಖದ ಗುಂಗುರು ಕೂದಲಿನ ಚೆನ್ನಿಗ.
ಹೆಣ್ಣುಗಳು ಮಾರುಹೋಗಲು ಬೇಕಾದ ಸಮಸ್ತ
ಲಕ್ಷಣಗಳ ಸರಕು ಅವನಲ್ಲಿ ಯಥೇಚ್ಛ.
ಯಾವುದೇ ಗಿಲೀಟಿಲ್ಲದೆ ನೇರವಾಗಿ ತನ್ನ ಅಭಿಪ್ರಾಯ
ನುಡಿಯಬಲ್ಲಾತ.
ನನಗೇ ಎರಡು ಬಾರಿ ಧಡ್ಡಿ ಅಂದನೆ!

ಪುಷ್ಪಗಂಧಿ : ಏನಂದಿರಿ ರಾಜಕುಮಾರಿ? ಧಡ್ಡಿ ಅಂದನೆ?

ರಾಜಕುಮಾರಿ : ನಾಡಿನೋಡುವ ನೆಪದಲ್ಲಿ ಕೈ ಹಿಡಿದ ಹಾಗೇ
ಕದ್ದು ನೋಡುತ್ತ ನಿಂತುಕೊಂಡ. ಆಗ ಯಾರೋ ಮರೆಯಿಂದ ಬಂದರು.

ಪುಷ್ಪಗಂಧಿ : ಯಾರೋ ಯಾರು? ಅವನೇ ಕಾಮ.
ಮರೆಯಲ್ಲಿ ನಿಂತುಕೊಂಡು ಇಬ್ಬರ ಮ್ಯಾಲೂ
ಹೂಬಾಣ ಬಿಡುತ್ತಿದ್ದ.

ರಾಜಕುಮಾರಿ : ಪ್ರೀತಿ ಅಂದರೆ ಏನಂತ ಹೇಳೇ ಸಖಿ.

ಪುಷ್ಪಗಂಧಿ : ಪ್ರೀತಿ ಅಂದರೆ: ಅದೊಂದು ಸಹಿಸಲಾಗದ ನೋವು ಕೊಡುವ ಗಾಳಿ
ಅಂತ ತಿಳಿದವರು ಹೇಳುತ್ತಾರೆ.

ರಾಜಕುಮಾರಿ : ಹೌದು  ಹೌದು! ಅವನು ನಾಡಿ ನೋಡುವಾಗ
ನಾನು ಸುಮ್ಮನೇ ನಿಂತಿದ್ದೆ, ಕಾಡಿನಿಂದ ಒಂದು ಸೂಸುಗಾಳಿ
ತಂತಾನೇ ಬೀಸಿ ಬಂದು,
ಮೈತುಂಬ ತೀಡಿ ಮಾಯವಾಯ್ತು. ಆಮೇಲ ನೋಡಿದರೆ
ನನ್ನ ಹೃದಯದಲ್ಲಿ ಗಾಯವಾಗಿತ್ತು! ಈಗ
ಅನ್ನಾಹಾರ ರುಚಿಸೋದಿಲ್ಲ, ನಿದ್ರೆ ನೀರು ಬೇಕಾಗಿಲ್ಲ.
ಯಾವುದರಲ್ಲೂ ಆಸಕ್ತಿ ಇಲ್ಲ
ಬರೀ ನಿಟ್ಟುಸಿರು ಬರ್ತಾವೆ.

ಪುಷ್ಪಗಂಧಿ : ಅಯ್ಯೋ ಪಾಪ!

ರಾಜಕುಮಾರಿ : ಅವನನ್ನ ಕಂಡಾಗಿನಿಂದ ದರೋಡೆಗೊಳಗಾಗಿದ್ದೇನೆಯೇ!
ನನ್ನೊಳಗೆ ಆತ್ಮ ಇಲ್ಲ. ಮನಸಿಲ್ಲ, ಹೃದಯ ಇಲ್ಲ.
ಎಲ್ಲಾ ಅವನೇ ದೋಚಿಕೊಂಡು ಹೋಗಿದ್ದಾನೆ.
ಉಳಿದಿರೋದು ಇದೊಂದು ಜೀವ, ಇದನ್ನೂ
ತೆಗೆದುಕೊಂಡು ಹೋಗು ಅಂತ ಹೇಳೇ.

ಪುಷ್ಪಗಂಧಿ : ಬಿಟ್ತು ಅನ್ನಿ. ಯಾಕಮ್ಮ ಹೀಗೆಲ್ಲ ಮಾತಾಡ್ತೀರಿ?

ರಾಜಕುಮಾರಿ : ರಾಜಕುಮಾರೀ ನೀನು ಪರಮ ಸುಂದರಿ ಅಂದ,
ನಿನ್ನಂಥ ಚೆಲುವೆಯನ್ನ ನಾನೀವರೆಗೆ ಕಂಡೇ ಇಲ್ಲ ಅಂದ!

ಪುಷ್ಪಗಂಧಿ : ಸರಿಯಾಗೇ ಹೇಳಿದ್ದಾನಲ್ಲಾ.

ರಾಜಕುಮಾರಿ : ರಾತ್ರಿಯೆಲ್ಲಾ ಕನಸಿನಲ್ಲಿ ಲೆಕ್ಕವಿಲ್ಲದಷ್ಟು ಸಲ
ಅವನ ತುಟಿ ನನ್ನ ಕಣ್ಣು, ತುಟಿ, ಕೆನ್ನೆಗಳ ಮೇಲೆ
ಹರಿದಾಡಿದುವು ಕಣೆ. ಏನೆನ್ನಿಸುವುದೇ ನಿನಗೆ
ಇದನ್ನೆಲ್ಲ ಕೇಳಿದರೆ?

ಪುಷ್ಪಗಂಧಿ : ಅನ್ನಿಸೋದೇನು, ನೀವು ವೈದ್ಯ ಮಹಾಶಯನನ್ನ
ಪ್ರೀತಿಸುತ್ತಿದ್ದೀರಿ ಅನ್ನೋದು ನಿಜ.
ಇದನ್ನ ಅವನೇ ಮೊದಲು ಹೇಳಿದ್ದರೆ ಚೆನ್ನಾಗಿತ್ತನ್ನೋದು
ಅದಕ್ಕಿಂತ ಹೆಚ್ಚು ನಿಜ.
ಆದರೆ ಅವನ ಮನಸ್ಸಿನಲ್ಲಿರೋದನ್ನ ತಿಳಿಯೋದು
ನಮ್ಮಿಂದಾಗೋದಿಲ್ಲ ಅನ್ನೋದು ಕೇವಲ ನಿಜ.
ಇಷ್ಟೆಲ್ಲಾ ನಿಜಗಳನ್ನ ಕೂಡಿಸಿ ಕಳೆಯಲಾಗಿ ನಾನೇ ಅವನ ಮುಂದೆ
ನಿಮ್ಮೆಚ್ಚೆಯ ಬಿಚ್ಚಿ ಹೇಳುವುದು ಉಚಿತವಾದ ನಿಜ.
ಸರಿಯೇ ರಾಜಕುಮಾರಿ?

ರಾಜಕುಮಾರಿ : ಅಷ್ಟೆ ಕಣಮ್ಮ ಆದರೆ ಅವನೂ ನನ್ನಲ್ಲಿ ಪ್ರೀತಿ ಇದೆ ಅಂದರೆ
ತೊಂದರೆ ಇಲ್ಲ. ಇಲ್ಲ ಅಂದರೆ?

ಪುಷ್ಪಗಂಧಿ : ಆವಾಗೇನು ಮಾಡಲಿ?

ರಾಜಕುಮಾರಿ : "ಅಯ್ಯಾ ವೈದ್ಯ ಮಹಾಶಯಾ, ನೀನು ಅವಳ ಪ್ರೀತಿಯನ್ನು
ತಿರಸ್ಕರಿಸಿದ್ದೇ ಆದರೆ, ರಾಜಕುಮಾರಿಗೆ ನಿರಾಸೆಯಾಗಿ,
ನಿರಾಸೆಯಿಂದ ಬುದ್ಧಿಭ್ರಮಣೆಯಾಗಿ,
ಬುದ್ಧಿಭ್ರಮಣೆಯಿಂದ ಊಟ ನಿದ್ದೆ ಬಿಟ್ಟು
ಸಾಯುತ್ತಾಳೆ"-ಅಂತ ಹೇಳಿಬಿಡು.

ಪುಷ್ಪಗಂಧಿ : ಅದ್ಯಾಕಮ್ಮಾ ಮಾತಿಗೊಮ್ಮೆ ಸಾಯ್ತೀನಿ ಅಂತೀರಿ?
ಅವನು ಒಪ್ಪುತ್ತಾನೆ, ಸುಮ್ಮನಿರಿ.

ಆಳು : (ಪ್ರವೇಶಿಸಿ) ಪುಷ್ಪಗಂಧಿ, ಮಹಾರಾಜರೊಂದಿಗೆ ವೈದ್ಯ ಸಂಜೀವಶಿವ
ಬರುತ್ತಿದ್ದಾನೆ.

ರಾಜಕುಮಾರಿ : (ಆನಂದದಿಂದ) ಪುಷ್ಪಗಂಧಿ ನಾನು ಮಲಗಿರುತ್ತೇನೆ.
ರಾಜಕುಮಾರಿ ಎಲ್ಲಿ ಅಂದರೆ ನೀನು ನನ್ನ ಕಡೆ ತೋರಿಸು.

ಅವನು ಬಂದು ನನ್ನ ಕೈ ಹಿಡಿದು ನಾಡೀ ನೋಡುತ್ತಾನೆ.
ಬೆವರು ಒರೆಸುತ್ತಾನೆ. ನಿನ್ನೇ ಅವನೇ ಬೆವರೊರಿಸಿದ್ದು! (ಮಗಳುವಳು)

ಪುಷ್ಪಗಂಧಿ : ರಾಜಕುಮಾರೀ, ನಿನ್ನೆಲ್ಲ ಯೌವನ, ಬುದ್ಧಿವಂತಿಕೆ, ಪ್ರೀತಿಯ
ಆಯುಧಗಳನ್ನ ಕಣ್ಣಲ್ಲಿಟ್ಟುಕೊಂಡು
ನೇರ ಅವನ ಹೃದಯಕ್ಕೆ ಗುರಿಹಿಡಿದು ಹೊಡಿ.
ಹೊಸಬಳಾದ್ದರಿಂದ ಗುರಿ ತಪ್ಪಬಹುದು, ಹಾಗಾದಲ್ಲಿ
ಮತ್ತೆ ಮತ್ತೆ ಹೊಡೆಯುವುದನ್ನ ಮರೆಯಬೇಡ.
(ರಾಜ ಮತ್ತು ಸಂಜೀವಶಿವ ಬರುವರು)

ಪುಷ್ಪಗಂಧಿ : (ಇಬ್ಬರಿಗೂ ವಂದಿಸಿ) ರಾಜಕುಮಾರಿ ಈಗ ತುಂಬ ಹುಷಾರಾಗಿದ್ದಾರೆ.
ಬೇಡವೆಂದರೂ ಬೆಳಿಗ್ಗೆ ಉದ್ಯಾನದಲ್ಲಿ ಅಡ್ಡಾಡಿ ಬಂದರು.
ಬಂದ ಮೇಲಂತೂ ತುಂಬ ಚುರುಕಾಗಿ ಮಾತಾಡಿದರು. ಈಗ
ವಿಶ್ರಾಂತಿ ತಗೋತಿದ್ದಾರೆ.
(ಸಂಜೀವಶಿವ ರಾಜಕುಮಾರಿ ಮಲಗಿದ್ದಲ್ಲಿಗೆ ಹೋಗಿ ನಾಡಿ ಹಿಡಿದು ನೋಡುವನು. ಹಣೆ ಮುಟ್ಟಿ ನೋಡಿ ಬೆವರೊರೆಸುವನು.
ರಾಜಕುಮಾರಿಗೆ ಸಂತೋಷವಾದರೆ ಸಂಜೀವಶಿವ ಸಂಕಟಪಡುತ್ತಿದ್ದಾನೆ.)

ಸೇವಕ : (ಪ್ರವೇಶಿಸಿ) ಪ್ರಭು ಆ ಹಕ್ಕಿ ಬಂದಿದೆ. ತಾವು ಬರಬೇಕೆಂದು
ವಿದೂಷಕ ವಿನಂತಿಸಿಕೊಂಡಿದ್ದಾನೆ.

ರಾಜ : ಇಗೋ ಬಂದೆ. ವೈದ್ಯ ಮಹಾಶಯಾ,
ಬೇಗ ವಾಪಸಾಗುತ್ತೇನೆ. ನೀನು ರಾಜಕುಮಾರಿಯ ದೇಹಸ್ಥಿತಿ
ನೋಡುತ್ತಿರು. ಪುಷ್ಪಗಂಧೀ,

ಪುಷ್ಪಗಂಧಿ : ಪ್ರಭು,

ರಾಜ : ಸಹಕರಿಸು. (ಹೋಗುವನು)

ಸಂಜೀವಶಿವ : ಈಗ ಕತ್ತಿನಲ್ಲಿಯ ಈ ಬಳ್ಳಿಯ ಅಗತ್ಯವಿಲ್ಲ; ತೆಗೆಯೋಣ.
(ತಕ್ಷಣ ರಾಜಕುಮಾರಿ ಎದ್ದುಕೂತು ಪುಷ್ಪಗಂಧಿಯ ಕಡೆಗೆ ನೋಡುವಳು.)

ಪುಷ್ಪಗಂಧಿ : ಬೇಡ ಬೇಡ. ಅದು ಹಾಗೇ ಇರಲಿ. ರಾಜಕುಮಾರಿಗ್ಯಾಕೋ
ಆ ಬಳ್ಳಿಯ ಬಗ್ಗೆ ತುಂಬ ವಿಶ್ವಾಸ ಬಂದುಬಿಟ್ಟಿದೆ.

ಸಂಜೀವಶಿವ : (ಆಘಾತದಿಂದ) ಆದರೆ……

ಪುಷ್ಪಗಂಧಿ : ಅಪಾಯವೇನೂ ಇಲ್ಲವೆಂದಾದರೆ ತೃಪ್ತಿಯಾಗೋತನಕ
ಅದು ಅವರ ಕತ್ತಿನಲ್ಲಿಯೇ ಇರಲಿ ಬಿಡಿ.

ಸಂಜೀವಶಿವ : (ಸ್ವಗತ) ಅಪಾಯ ನನಗಿದೆ.

ರಾಜಕುಮಾರಿ : ವೈದ್ಯ ಮಹಾಶಯಾ, ನಿನ್ನೆ ನಿನ್ನ ತಾಯಿಯ ಬಗ್ಗೆ
ಪದೇ ಪದೇ ಹೇಳುತ್ತಿದ್ದ ಹೆಂಗಸು
ನಿನ್ನೊಂದಿಗೆ ಬಂದಿಲ್ಲ, ಅಲ್ಲವೆ?

ಸಂಜೀವಶಿವ : ಇಲ್ಲ ಇಲ್ಲ.

ರಾಜಕುಮಾರಿ : ಹಾಗಾದರೆ ಅನಂತ ಕರುಣಾಮಯಿ ನಿನ್ನ ತಾಯಿ.

ಸಂಜೀವಶಿವ : ಆದರೆ ಈ ಬಳ್ಳಿಯನ್ನು ಬಿಚ್ಚಿ ತೆಗೆಯಬೇಕಾಗದ್ದು ಅನಿವಾರ್ಯ.

ರಾಜಕುಮಾರಿ : ಖಂಡಿತ ನಾನಿದನ್ನ ಕತ್ತಿನಿಂದ ಹೊರಕ್ಕೆ ತೆಗೆಯುವುದಿಲ್ಲ.
ಪುಷ್ಪಗಂಧಿ ನೀನಾದರೂ ಹೇಳಬಾರದೆ?

ಪುಷ್ಪಗಂಧಿ : ವೈದ್ಯ ಮಹಾಶಯಾ, ದೊಡ್ಡ ಮನಸ್ಸು ಮಾಡಿ
ರಾಜಕುಮಾರಿಯ ಮನಸ್ಸನ್ನು ಅರ್ಥ ಮಾಡಿಕೊಳ್ಳಿ.
ತಾಯಿ ಇಲ್ಲದ ಮಗಳೆಂಬ ಪ್ರೇಮಾತಿಶಯದಲ್ಲಿ
ಮಹಾರಾಜರು ರಾಜಕುಮಾರಿಯ ಯಾವ ಸಣ್ಣ ಆಸೆಯನ್ನೂ
ನಿರಾಕರಿಸಿಲ್ಲ.

ಮುದುಕಿ : (ಕಾಣಿಸಿಕೊಂಡು) ಮಗಾ ಸಂಜೀವಶಿವಾ
ನಿನ್ನ ತಾಯಿ ನಿನಗದೇನನ್ನೋ ಜ್ಞಾಪಿಸಲು ಹೇಳಿದಳಪ್ಪ,
ನೆನಪಿದೆ ತಾನೆ?

ರಾಜಕುಮಾರಿ : (ಗಾಬರಿಯಿಂದ ಓಡಿಬಂದು ಸಂಜೀವಶಿವನನ್ನು ತಬ್ಬಿಕೊಂಡು) ಅಗೋ
ನಿನ್ನೆಯ ಹೆಂಗಸು ಮತ್ತೆ ಕಾಣಿಸಿಕೊಂಡಳು!
ಬರೀ ಸುತ್ತಿಕೊಂಡ ಸೀರೆ ಮಾತ್ರ ಕಾಣಿಸುತ್ತಿದೆ.
ಒಳಗೆಲ್ಲ ಖಾಲಿಯಿದ್ದಾಳೆ!

ಪುಷ್ಪಗಂಧಿ : ಎಲ್ಲಿ, ಯಾರೂ ಕಾಣುವುದಿಲ್ಲವಲ್ಲ, ರಾಜಕುಮಾರೀ.

ಸಂಜೀವಶಿವ : ಅದಕ್ಕೇ ಹೇಳುತ್ತೇನೆ ರಾಜಕುಮಾರೀ,
ದಯಮಾಡಿ ಆ ಮದ್ದಿನ ಬಳ್ಳಿಯನ್ನು ಜಾಗ್ರತೆ ಕಿತ್ತುಕೊಡು.

ರಾಜಕುಮಾರಿ : ನಾನು ಸಾಯಬೇಕೆಂದಿದ್ದರೆ ಈ ಬಳ್ಳಿಯನ್ನು ಕಿತ್ತುಕೊ.

ಪುಷ್ಪಗಂಧಿ : ವೈದ್ಯ ಮಹಾಶಯಾ,
ನಿಮಗೆ ನಿವೇದಿಸಲೇಬೇಕಾದ ಸಂಗತಿಗಳಿವೆ. ದಯವಿಟ್ಟು ಕೇಳಿ:
ರಾಜಕುಮಾರಿ ಜೀವದಾಸೆ ಬಿಟ್ಟಿದಾಗ ನೀವು ಅವಳಿಗೆ
ಜೀವದಾನ ಮಾಡಿದ್ದೀರಿ. ರಾಜಕುಮಾರಿ ಕೃತಜ್ಞತೆಯಿಂದಲೋ
ಅಥವಾ ಇನ್ಯಾವುದರಿಂದಲೋ ತೀರ್ಮಾನ ತಗೊಂಡು ಬಿಟ್ಟಿದ್ದಾಳೆ-
ನಿಮ್ಮನ್ನು ಮದುವೆಯಾಗಬೇಕೆಂದು. ಅದನ್ನು ನನ್ನೆದುರು ಸಾರಿ ಸಾರಿ
ಹೇಳಿಯೂ ಬಿಟ್ಟಿದ್ದಾಳೆ.
ಅಲ್ಲದೆ ನೀವು ಕಟ್ಟಿದ ಮದ್ದಿನ ಬಳ್ಳಿಯನ್ನು
ಅದು ತಾಳಿಯೆಂದೇ ಬಗೆದು ಬೆಳಿಗ್ಗೆ ಅದನ್ನು ಮುಟ್ಟಿ ನೋಡಿ
ಕಣ್ಣಿಗೊತ್ತಿಕೊಂಡಳು.
ಸಂದರ್ಭ ಇಂತಿರುವಲ್ಲಿ ಅದನ್ನು ಕಿತ್ತು ತೆಗೆದರೆ,
ಅವಳ ಜೀವದ ಗತಿಯೇನು? ವಿಚಾರ ಮಾಡಿ.

ಸಂಜೀವಶಿವ : ಇದು ಮಹಾರಾಜರಿಗೂ ಗೊತ್ತೆ?

ಪುಷ್ಪಗಂಧಿ : ಖಂಡಿತ ಗೊತ್ತು. ಅವಳ ಬದುಕಿನಲ್ಲಿ ಅವಳೊಪ್ಪುವ
ಯಾರೇ ಬಂದು ಹಾರ ಹಾಕಲಿ, ದಾರ ಕಟ್ಟಲಿ,
ಅದೇ ಮದುವೆಯೆಂದೂ ಅಂದಿನಿಂದಲೇ ಅವಳ
ಆಯುಷ್ಯ ವೃದ್ಧಿಯೆಂದೂ ಜೋತಿಷಿಗಳು ಶಿವನ ಹೆಸರು ಸ್ಮರಿಸಿ ಹೇಳಿದ್ದು
ನಮಗೆಲ್ಲರಿಗೂ ನೆನಪಿದೆ, ರಾಜರಿಗೆ ಕೂಡ.
ಆದ್ದರಿಂದ ಮಹಾರಾಜರು ನಿನ್ನೆಯಿಂದಲೇ, ರಾಜಕುಮಾರಿಯ
ಅರಳಿದ ಮುಖದರ್ಶನದಿಂದ ಸಂತೋಷಭರಿತರಾಗಿದ್ದಾರೆ.
ಆಕೆ ನಿಮ್ಮ ರೂಪ ವರ್ಣನೆ ಮಾಡಿದಾಗಿನಿಂದಂತೂ
ಮಹಾರಾಜರ ಆನಂದಕ್ಕೆ ಮಿತಿಯೇ ಇಲ್ಲವಾಗಿದೆ.
ಇಷ್ಟರಲ್ಲಿ ಈ ಕುರಿತು ನಿಮ್ಮೊಂದಿಗೆ ಮಾತಾಡಲಿದ್ದಾರೆ.
ವಿಷಯ ಹಿಂಗಿರುವಲ್ಲಿ ಉರಿವ ಗಾಯದಲ್ಲಿ ಉಗುರಾಡಿಸುವಂಥ
ನಿಮ್ಮ ಮಾತು ಶೋಭಿಸುವುದಿಲ್ಲ.

ಸಂಜೀವಶಿವ : ಜೋತಿಷಿಗಳು ಆಯುಷ್ಯ ವೃದ್ಧಿಯೆಂದು ಹೇಳಿದರೆ?

ಮುದುಕಿ : ಮೂಢನಂಬಿಕೆ (ಹೋಗುವಳು.)

ಪುಷ್ಪಗಂಧಿ : ಹೌದು, ಈಗ ರಾಜಕುಮಾರಿಯನ್ನು ನಿಮ್ಮ ಕೈಗಿಡುತ್ತಿದ್ದೇನೆ. ಅಂದರೆ
ಸರಿಯಾಗಿ ವಿಚಾರ ಮಾಡೋದಕ್ಕೆ ಸ್ವಲ್ಪ ಸಮಯ ಕೊಡ್ತೀನಿ
ಅಂತ ಅರ್ಥ, ಸಮಯ ಸಿಕ್ಕರೆ ಕಾಯಿ ಹಣ್ಣಾಗುವ ಹಾಗೆ
ನಿಮಗೂ ಸರಿಯಾದ, ಪಕ್ವವಾದ ಬುದ್ಧಿ ಬರಲಿ
ಎಂಬುದು ಉದ್ದೇಶ.
ಜೀವಮಾನದಲ್ಲಿ ಒಂದು ಜೀವ ಉಳಿಸುವುದು ಸಣ್ಣ
ಮಾತಲ್ಲಪ್ಪ, ಅದೂ ಪುಣ್ಯ ವಿಶೇಷ. ರಾಜಕುಮಾರಿಯ
ಜೊತೆಗೆ ಅವಳ ಸಂತೋಷವನ್ನೇ ಅವಲಂಬಿಸಿದ
ರಾಜರಿಗೂ ಅವರ ಪರಿವಾರ ನಮಗೂ ಜೀವದಾನ ಮಾಡಿದ
ಧರ್ಮನಾಮರು ನೀವು! ರಾಜಕುಮಾರಿ ಆತ್ಮಹತ್ಯೆ ಮಾಡಿಕೊಳ್ಳಲು
ಓಡಿಹೋಗುವುದೆಂದರೇನು?- ನೀವಲ್ಲಿ ಸಿಕ್ಕು ಅವಳಿಗೆ
ಮದ್ದು ಕೊಡುವುದೆಂದರೇನು? ಇವೆಲ್ಲ ಶಿವನ ಪ್ರೇರಣೆ ವಿನಾ
ಮಾನ ಪ್ರಯತ್ನಗಳಿಂದ ಆಗುವುದುಂಟೆ?
ಶಿವನ ಕೃಪೆ ಅಂದರೆ ಇದೇ ಮಹಾಶಯರೇ.
ನಾ ನೀವು ನಿಮಿತ್ತ ಮಾತ್ರ. ಒಂದು ಮಾತು ಅತಿಯೆನಿಸಿದರೂ
ಈಗಲೇ ಹೇಳುತ್ತೇನೆ: ಸುಮುಹೂರ್ತ ಯಾವಾಗಲಾದರೂ
ಕೂಡಿಬರಲಿ ರಾಜಕುಮಾರಿಗಂತೂ ನೀವು ಕತ್ತಿನಲ್ಲಿ
ಕಟ್ಟಿದ ಬಳ್ಳಿ ಮದುವೆ ಮಂಗಲಕಾರ್ಯದ ತಾಳಿಗಿಂತ
ಯಾವ ವಿಧದಲ್ಲೂ ಕಮ್ಮಿಯಲ್ಲ! ಶುಭವಾಗಲಿ, ಇಬ್ಬರೂ ಮಾತಾಡಿಕೊಳ್ಳಿ.

(ದಂಗು ಬಡಿದು ಸಂಜೀವಶಿವ, ಗೊಂದಲದಲ್ಲಿ ರಾಜಕುಮಾರಿ ಕೂತಿದ್ದಾರೆ.)

ಸಂಜೀವಶಿವ : ಇಂಥ ಅಂತ್ಯಕ್ಕಾಗಿ ಈ ಆಟ ಸುರುವಾಯ್ತೆ!

ರಾಜಕುಮಾರಿ : ನಿನ್ನ ಕತ್ತಿಗೆ ನನ್ನನ್ನು ಒತ್ತಾಯದಿಂದ ಕಟ್ಟಿದೆನೆಂದು ಅನಿಸುತ್ತಿದೆಯೆ?
ನೀನು ನಂಬುತ್ತೀಯೋ ಇಲ್ಲವೋ,-
ನಿನ್ನೆ ನಾನು ನಿಜವಾಗಿ ಆತ್ಮಹತ್ಯೆ ಮಾಡಿಕೊಳ್ಳೋಣ ಅಂತ್ಲೇ
ಹೋದದ್ದು. ನೀನು ಸಿಕ್ಕದ್ದು ಮಾತ್ರ ಅನಿರೀಕ್ಷಿತ.
ನೀನು ನನ್ನನ್ನ ಹೊಗಳಿದಾಗ ನಿಜವಾಗಿ ಸಂತೋಷವಾಯಿತು.
ಯಾಕಂತ ಗೊತ್ತಿಲ್ಲ. ನನಗೆ ಗೊತ್ತಾಗೋ ಮೊದಲೇ ನಿನಗೆ
ನನ್ನ ಆತ್ಮ ಕೊಟ್ಟು ಬಿಟ್ಟಿದ್ದೆ.
ಆಮೇಲೆ ನೀನು ಈ ಬಳ್ಳಿಯನ್ನು ಕತ್ತಿಗೆ ಕಟ್ಟಿದಾಗ
ಮಂಗಲಸೂತ್ರವೆಂದೇ ನನ್ನ ಭಾವನೆಯಾಯ್ತು.
ಈಗಲೂ ನಿನಗೆ ನಾನು ನಿನ್ನ ಮೇಲೆ ಹೇರಿದ ಭಾರವೆಂದು

ಅನಿಸಿದರೆ ಹಾಗೇ ಹೇಳಿ ಹೋಗಬಹುದು.
ನನ್ನ ದೈವ ನಾನು ಎದುರಿಸುತ್ತೇನೆ.

ಸಂಜೀವಶಿವ : ರಾಜಕುಮಾರೀ, ಇಬ್ಬರಲ್ಲಿ ಹೆಚ್ಚು ಲಾಭವಾದದ್ದು ನನಗೆ.
ಸಂತೋಷ ಪಡಬೇಕಾದವನು ನಾನು.
ಶಿವನ ಸಾಕ್ಷಿಯಾಗಿ ಹೇಳುತ್ತೇನೆ:
ನಿನ್ನನ್ನ ಹೃತ್ಪೂರ್ವಕ ಪ್ರೀತಿಸುತ್ತೇನೆ. ಬಿರುಕಿಲ್ಲ ನನ್ನ ಪ್ರೀತಿ
ಮತ್ತು ಮಾತಿನಲ್ಲಿ. ನಿನ್ನೆ ನಿನ್ನನ್ನ ನೋಡಿದಾಗ
ಚಿಕ್ಕಂದಿನಿಂದಲೇ ನೀನು ನನಗೆ ಗೊತ್ತು ಅನಿಸಿತು.
ನಿನ್ನೆ ನನ್ನ ತಾಯಿ ನನ್ನಲ್ಲಿ ಪ್ರೀತಿ ಉದ್ಭವಿಸಿದ್ದನ್ನ ಪ್ರಥಮ ಬಾರಿ
ಗುರುತಿಸಿದಾಗ ನನಗೆ ಒಪ್ಪುವ ವಿಶ್ವಾಸವಾಗಲಿಲ್ಲ.
ಈಗ ಧೈರ್ಯವಾಗಿ ಹೇಳುತ್ತೇನೆ: ನಿನ್ನೆ ನಿನ್ನನ್ನ
ಮೊದಲ ಬಾರಿ ನೋಡಿದಾಗಲೇ ನೀನು ನನ್ನ ಪ್ರೇಮದೇವತೆ
ಎಂದು ಒಪ್ಪಿಕೊಂಡೆ-ಒಳಗೊಳಗೇ. ಈಗ ಮಾತ್ರ
ನಿನ್ನೊಂದಿಗೆ ಆಡಲೇಬೇಕಾದ ಮಾತುಗಳಿವೆ.
ಅವುಗಳಿಗೆ ಇಬ್ಬರೂ ಹುಚ್ಚುತನ ಬೆರೆಸೋಣ.

ರಾಜಕುಮಾರಿ : ಹುಚ್ಚುತನ ಯಾಕೆ?

ಸಂಜೀವಶಿವ : ನಂಬಿಕೆ ಬರೋದಕ್ಕೆ, ಕನಸುಗಳನ್ನ ನಂಬಬೇಕು.
ನಂಬಬೇಕಾದರೆ ಹುಚ್ಚುತನ ಬೆರೆಸಬೇಕು.

ರಾಜಕುಮಾರಿ : ಸರಿ ಮುಂದೆ ಹೇಳು.

ಸಂಜೀವಶಿವ : ಮನುಷ್ಯ ತೀರ್ಮಾನ ತೆಗೆದುಕೊಳ್ಳಲೇಬೇಕಾದ ಗಳಿಗೆಗಳು
ಬಂದೇ ಬರುತ್ತಾವೆಂದು ನನಗೆ ಗೊತ್ತಿತ್ತು. ಆದರೆ ತಾಯಿಯನ್ನು
ವಿರೋಧಿಸುವ ತೀರ್ಮಾನ ತಕ್ಕೊಳ್ಳಬೇಕಾಗಬಹುದೆಂದು
ಅಂದುಕೊಂಡಿರಲಿಲ್ಲ.
ನಿನ್ನನ್ನು ಮದುವೆಯಾಗಬೇಕಾದರೆ ನನಗೆ ನನ್ನ ಸ್ವಾತಂತ್ರ್ಯ
ದಕ್ಕಬೇಕು. ಸ್ವಾತಂತ್ರ್ಯದ ಬೆಲೆ ಮತ್ತು ಅನಿವಾರ್ಯತೆಗಳನ್ನ
ತಿಳಿಸಿಕೊಟ್ಟದ್ದಕ್ಕಾಗಿ ನಿನಗೆ ಕೃತಜ್ಞನಾಗಿದ್ದೇನೆ ರಾಜಕುಮಾರಿ.
ತನ್ನ ಸ್ವಾತಂತ್ರ್ಯವನ್ನು ಗುರುತಿಸಿಕೊಳ್ಳದೆ ಮನುಷ್ಯ
ತನ್ನ ಸುತ್ತ ಭಯಂಕರ ನರಕ ಸೃಷ್ಟಿ ಮಾಡಿಕೊಂಡಿದ್ದಾನೆಂದು
ಅನಿಸುತ್ತದೆ. ಸ್ವಾತಂತ್ರ್ಯ ವೆಂದರೆ ಮನುಷ್ಯ ಮನುಷ್ಯನಾಗೋದೆ.
ಅದಾಗದ ಹಾಗೆ ತಾಯಿ ನಮ್ಮ ಸುತ್ತ ಸಾವಿನ ಬಲೆ

ಹೆಣೆದಿದ್ದಾಳೆ. ರಾಜಕುಮಾರೀ, ನನ್ನ ದಾರಿ ನನಗೀಗ
ನಿಚ್ಚಳವಾಗಿ ಕಾಣುತ್ತಿದೆ: ಕೇಳು:
ನಾನು ಗಂಡ, ನೀನು ಹೆಂಡತಿ. ನಾವಿರೋದು ನಮ್ಮ ಗುಡಿಸಲಲ್ಲಿ.
ನೀನು ರಾಜಕುಮಾರಿ ಆಗಿರಬಹುದು. ನಾನು ರಾಜನಾಗಲು
ಸಿದ್ಧನಿಲ್ಲ. ನೀನಿದನ್ನು ಒಪ್ಪಿಕೋಬೇಕು.

ರಾಜಕುಮಾರಿ : ಆಯ್ತು: ನಾನೇ ಅರಮನೆ ಬಿಟ್ಟು ಬಂದು ನಿಮ್ಮ ಗುಡಿಸಲಲ್ಲಿ
ಇರ್ತೀನಾಯ್ತು? ವೈದ್ಯನ ಹೆಂಡತಿ ಅಂದಮೇಲೆ
ಮದ್ದು ತಾನೇ ಅರೆಯಬೇಕಾದ್ದು? ಖಂಡಿತ ಅರೆಯುತ್ತೇನೆ.
ಯಾವತ್ತೂ ಮದ್ದು ಅರೆಯುತ್ತಿದ್ದರೆ
ಸಾವಿನ ಭಯವೇ ಇರುವುದಿಲ್ಲ, ಅಲ್ಲವೆ?
ಅದಕ್ಕೇ ನೀನು ನನಗೆ ಯಾವತ್ತೂ ಮದ್ದರೆಯೋ ಕೆಲಸ
ಕೊಡಬೇಕು.

ಸಂಜೀವಶಿವ : (ನಗುತ್ತ) ಈ ಸಣಕಲು ದೇಹದಿಂದ ಮದ್ದರೆಯೋ ಕೆಲಸವೆ?

ರಾಜಕುಮಾರಿ : ಇನ್ನು ಮೇಲೆ ದಪ್ಪ ಆಗೋದಕ್ಕೆ ಪ್ರಯತ್ನ ಮಾಡುತ್ತೇನೆ.

ಸಂಜೀವಶಿವ : ಗುಡಿಸಲಲ್ಲಿರಲಿಕ್ಕೆ ಒಪ್ಪಿಕೊಂಡರೆ ಸಾಕು, ಉಳಿದ ಕೆಲಸ
ನಾನೇ ಮಾಡುತ್ತೇನೆ.

ರಾಜಕುಮಾರಿ : ಉಳಿದ ಕೆಲಸ ಅಂದರೆ?
ರಾಜಕುಮಾರಿಯಾದ್ದರಿಂದ ನನಗೆ ಅಡಿಗೆ ಮಾಡೋದಕ್ಕೆ
ಬರೋದಿಲ್ಲ ಅಂತಲ ನಿನ್ನ ಅಭಿಪ್ರಾಯ?

ಸಂಜೀವಶಿವ : ಹಾಗೇನಿಲ್ಲ.

ರಾಜಕುಮಾರಿ : ನನಗೂ ಅಡಿಗೆ ಮಾಡುವುದಕ್ಕೆ ಬರುತ್ತದೆ, ಮಹಾಶಯಾ.
ಸೊಪ್ಪಿನ ಸಾರು,
ಅನ್ನ ಬೇಯಿಸೋದು ಹ್ಯಾಗಂತ ನನಗೆಲ್ಲಾ ಗೊತ್ತು.
ಪುಷ್ಪಗಂಧಿ ಅಡಿಗೆ ಮಾಡೋದನ್ನ ಕದ್ದು ನೋಡಿ
ಕಲ್ತಿದೀನಿ.

ಮುದುಕಿ : (ಪ್ರವೇಶಿಸಿ) ಮಗು, ಅಗತ್ಯವಾಗಿ ನಿನ್ನತಾಯಿ ನಿನ್ನನ್ನ
ನೋಡಬೇಕಂತೆ.

(ರಾಜಕುಮಾರಿ ಭಯದಲ್ಲಿ ಸಂಜೀವಶಿವನನ್ನು ತಬ್ಬಿಕೊಳ್ಳುವಳು.)

ಸಂಜೀವಶಿವ : ರಾಜಕುಮಾರಿ, ಇಗೋ ಈ ಬಳ್ಳಿಯೇ ತಾಳಿಯೆಂದೆ ಅಲ್ಲವೆ?
ಇದಕ್ಕೆ ನನ್ನ ಒಪ್ಪಿಗೆ ಇದೆ. ಇನ್ನು ಮೇಲೆ ಬದುಕಿದ್ದರೆ
ಇಬ್ಬರಿಗೂ ಒಂದೇ ಗುಡಿಸಲು. ಬದುಕಿಲ್ಲವಾದರೆ
ಇಬ್ಬರಿಗೂ ಒಂದೇ ಚಿತೆ. ಒಪ್ಪಿಗೆ ಇದೆಯೆ?

ರಾಜಕುಮಾರಿ : ಶಿವನ ಸಾಕ್ಷಿಯಾಗಿ ಒಪ್ಪಿದೆ.
(ದೂರದ ಶಿವ ದೇವಸ್ಥಾನದಲ್ಲಿ ಗಂಟೆ ಬಾರಿಸುತ್ತದೆ. ಇಬ್ಬರೂ ಸಂತೋಷ
ಪಡುತ್ತಾರೆ. ಮುದುಕಿ ಹಣೆ ಹಣೆ ಬಡಿದುಕೊಳ್ಳುತ್ತಾಳೆ)

ಸಂಜೀವ : ರಾಜಕುಮಾರೀ ಪ್ರೇಮದ ಕಾಣಿಕೆ ಕೊಡುವಷ್ಟು ದೊಡ್ಡವನಲ್ಲ ನಾನು.
ಇದು ನಿನ್ನ ವಿನಮ್ರ ಕಾಣಿಕೆ. ದಯಮಾಡಿ ಸ್ವೀಕರಿಸಬೇಕು.
(ಎಂದು ಅಲ್ಲಿಯೇ ಇದ್ದ ಸಂಪಿಗೆ ಹೂವನ್ನು ಕೊಡಹೋಗುವನು. ರಾಜಕುಮಾರಿ
ಅದನ್ನು ಕೈಯಿಂದ ತಕ್ಕೊಳ್ಳದೆ ಮುಡಿಗಿಡಸಲೆಂದು ತಿರುಗುವಳು.
ಸಂಜೀವ ಜವಾಬ್ದಾರಿಯ ಭಾರದಿಂದ ನಡುಗುತ್ತ ಸಂಪಿಗೆಯನ್ನು ಅವಳ
ಮುಡಿಗಿಡುವನು. ರಾಜಕುಮಾರಿ ರೋಮಾಂಚಿತಗೊಂಡು ಮೈಮರೆಯುವಳು.
ಸಂಜೀವಶಿವ "ಮತ್ತೆ ಬರುತ್ತೇನೆ" ಎಂದು ಹೇಳಿ ಹೋಗುವನು.
ರಾಜಕುಮಾರಿ ಮತ್ತೆ ಮತ್ತೆ ಮುಡಿಯ ಮುಟ್ಟಿ ನೋಡಿಕೊಂಡು ತನ್ನಲ್ಲಾದ
ಹೊಸ ಬದಲಾವಣೆಯನ್ನು ಸಂಭ್ರಮಿಸುತ್ತಿದ್ದಾಳೆ. ಕನ್ನಡಿಯ ಮುಂದೆ ನಿಂತು
ನೋಡಿಕೊಳ್ಳುತ್ತ ಆನಂದ ಪಡುತ್ತಿರುವಾಗ ಕೋಪದಲ್ಲಿ ಬಂದ ಮುದುಕಿ
ಆಳಿದ ಮಹಾರಾಣಿಯ ವರ್ಣಚಿತ್ರದ ಹಿಂದೆ ನಿಂತುಕೊಳ್ಳುವಳು.)

ರಾಜಕುಮಾರಿ : (ಮುಡಿಯನ್ನು ಮುಟ್ಟಿಕೊಳ್ಳುತ್ತ) ಸಂಪಿಗೆ,
ಸಂಪಿಗೆ ಈಗಷ್ಟೆ ನಿನ್ನನ್ನ  ನನ್ನ ಮುಡಿಗಿಟ್ಟನಲ್ಲ,
ಅವನ ಹೆಸರು ಹೇಳೇ.

ಮುದುಕಿ : ಸಂಜೀವಶಿವ

ರಾಜಕುಮಾರಿ : ಅವಯ್ಯಾ! ಶಿವನಿಗೂ ಇಷ್ಟೊಂದು ಚಂದ ಹೆಸರಿಲ್ಲವಲ್ಲೆ!
ಈ ಹೆಸರು ಕೇಳಿದರೇ ರೋಮಾಂಚನವಾಗುತ್ತದಲ್ಲೇ ಸಂಪಿಗೆ!
ನಿನ್ನಿಂದ ಪರಿಮಳ ಸೂಸುವ ಹಾಗೆ,
ಈ ಹೆಸರಿನಿಂದಲೂ ಸೂಸುತ್ತಿದೆಯಲ್ಲೆ!
ಆದರೆ ಇದು ನಿನ್ನ ಪರಿಮಳಕ್ಕಿಂತ ಹೆಚ್ಚು ಆಹ್ಲಾದಕರ.
ನನ್ನ ಗಂಡ ನಿನ್ನನ್ನು ಮುಡಿಗೇರಿಸಿದಾಗ

ಸಳ್ಳಂತ ಮೈಯಲ್ಲಿ ಮಿಂದು ಹರಿದಾಡಿ,
ರೋಮಾಂಚನಗೊಂಡು ಗರಿಗೆದರಿದ ನವಿಲಿನಂತಾದೆನೆ ಗೆಳತಿ!

ಮುದುಕಿ : ನವಿಲಾದ ಭ್ರಾಂತಿಯಲ್ಲಿರುವುದರಿಂದ ನಿನಗೆ
ಈಲೋಕ ಕಾಣಿಸುತ್ತಿಲ್ಲ ಮಗಳೆ. ಮೈ ತುಂಬ ಕಣ್ಣಿನ
ನಿನ್ನ ಒಂದೊಂದೇ ಕಣ್ಣು ತೆರೆಯುತ್ತೇನೆ:
ನೀ ನಿಂತ ನೆಲ ನೋಡು: ಕಾಣಿಸುತ್ತಿದೆಯೆ?

ರಾಜಕುಮಾರಿ : ಕಾಣುತ್ತಿದೆ.

ಮುದುಕಿ : ಹಾಗಾದರೆ ಹೇಳು: ನೀನ್ಯಾಕೆ ಆ ಬಡ ವೈದ್ಯನನ್ನ ಇಷ್ಟಪಟ್ಟೆ ಮಗಳೆ?

ರಾಜಕುಮಾರಿ : ಯಾಕೆಂದರೆ ನಿಜ ಹೇಳ್ತಾನೆ ಅದಕ್ಕೆ.

ಮುದುಕಿ : ಅಂದರೆ?

ರಾಜಕುಮಾರಿ : ನನ್ನ ಸುತ್ತ ಇದ್ದವರೆಲ್ಲಾ ಸುಳ್ಳು ಹೇಳ್ತಾರೆ. ನನಗೆ ನನ್ನ
ಅಧ್ಯಾಪಕರು ಹೇಳಿದ್ದು ಒಂದೂ ತಿಳಿಯುವುದಿಲ್ಲ.
ನನಗೆ ತಿಳಿಯುತ್ತಿಲ್ಲ ಅಂದರೆ ಅಬ್ಬ ಏನು
ಚುರುಕು ಬುದ್ಧಿ ಅಂತ ಮಹಾರಾಜರ ಮುಂದೆ
ಸುಳ್ಳು ಹೇಳ್ತಾರೆ. ಇವನೊಬ್ಬನೇ ನಾನು ಧಡ್ಡಿ ಅಂತ
ನಿಜ ಹೇಳಿದ್ದು.

ಮುದುಕಿ : ನಿಜ ಹೇಳಿದ್ದಕ್ಕೆ ಮೆಚ್ಚಿ ಬಹುಮಾನ ಕೊಡಬೇಕು.
ಪ್ರಾಣವನ್ನೇ ಅವನ ಕೈಗಿಡೋದ?

ರಾಜಕುಮಾರಿ : ಹೌದು, ಹಾಗೆ ಇಟ್ಟಿದ್ದಕ್ಕೇ ಅಲ್ಲವೆ ಅವನು ನನ್ನನ್ನ
ಕಾಪಾಡಿದ್ದು? ರಾಜವೈದ್ಯರೆಲ್ಲಾ ಕೈ ಚೆಲ್ಲಿದಾಗ
ಅವನೇ ಮುಂದೆ ಬಂದು ಮದ್ದು ಕೊಟ್ಟು ರೋಗ
ವಾಸಿ ಮಾಡಿದ.

ಮುದುಕಿ : ಮದುವೆ ಆದರೆ ಅವನೊಂದಿಗೆ ಇರಲಿಕ್ಕಾಗುತ್ತೇನಮ್ಮ ನಿನಗೆ?
ನೀನು ರಾಜಕುಮಾರಿ, ಅವನೋ ಅಳಲೇಕಾಯಿ ವೈದ್ಯ.

ರಾಜಕುಮಾರಿ : ನನಗೆ ಅರಮನೆ, ರಾಜ್ಯ ಯಾವುದೂ ಬೇಡ.
ಮದುವೆ ಆಗಿ ಆಶ್ರಮ ಕಟ್ಟಿಕೊಂಡು ಇಬ್ಬರೂ

ಕಾಡಿನಲ್ಲಿದ್ದು ಬಿಡ್ತೀವಿ. ನಾನು ಮದ್ದರೆದು ಕೊಡ್ತೀನಿ.
ಅವನು ನನ್ನಂಥ ರೋಗಿಗಳ ಸೇವೆ ಮಾಡ್ತಾನೆ.
ನನ್ನಕೈಸೋತರೆ ಆತ ಬಂದು ಸಹಾಯ ಮಾಡ್ತಾನೆ.
ನನ್ನ ಮುಖದ ಬೆವರು ಅವನೇ ಒರೆಸ್ತಾನೆ. ಈಗಲೂ
ಅವನೇ ಒರೆಸೋದು. ನಾಡಿ ನೋಡೋದಕ್ಕೆ ಅಂತ
ಅವನು ಕೈ ಹಿಡಿದಾಗ ನನ್ನ ಮೈ ಝುಮ್ಮಂತದೆ!
ನನಗ್ಗೊತ್ತು ಅವನಿಗೂ ಹಾಗೇ ಆಗ್ತದೆ.

ಮುದುಕಿ : ಹ್ಯಾಗೆ ಗೊತ್ತಾಯ್ತು?

ರಾಜಕುಮಾರಿ : ನನ್ನ ಜೊತೆ ಇದ್ದಾಗ ಉಸಿರು ಕಮ್ಮಿ ಬಂದ ಹಾಗೆ ಮಾತಾಡ್ತಾನೆ!

ಮುದುಕಿ : ತುಂಬಾ ಜಾಣೆಯಮ್ಮ ನೀನು!

ರಾಜಕುಮಾರಿ : ಹೌದ? ವೈದ್ಯನಿಗೆ ಈ ಮಾತು ಹೇಳಮ್ಮ
ನಾನು ಧಡ್ಡಿ ಅಂದ್ಕೊಂಡಿದಾನೆ.

ಮುದುಕಿ : ಮೂರ್ಖ ಅವನು. ಒಂದೊಂದು ಸಣ್ಣ ವಿಷಯ ತಿಳಿಯೋದಕ್ಕೂ
ಒಂದೊಂದು ಇಡೀ ದಿನ ತಗೊಳ್ತಾನೆ.
ಅವನ ತಾಯಿಯ ವಿಷಯ ಗೊತ್ತ ನಿನಗೆ?]

ರಾಜಕುಮಾರಿ : ಗೊತ್ತು, ಎಳೇಮಕ್ಕಳ ಕತ್ತು ಹಿಸುಕಿ ಕೊಂದು ತಿನ್ನುತ್ತಾಳಂತೆ.
ನನಗೆ ನಿನ್ನವಿಷಯ ಗೊತ್ತಿಲ್ಲ. ಅಷ್ಟೆ.

ಮುದುಕಿ : ಗುರುತಾಗಲಿಲ್ಲವೆ ಮಗಳೆ? ನಾನು ನಿನ್ನ ತಾಯಿ.

ರಾಜಕುಮಾರಿ : ನನ್ನ ಅಷ್ಟೂ ಕಣ್ಣು ತೆರೆದು ಉಪಕಾರ ಮಾಡಿದ್ದಕ್ಕೆ
ನಿನಗೆ ನೂರು ನಮಸ್ಕಾರ ತಾಯಿ.
ನನಗೀಗ ಎಲ್ಲವೂ ನಿಚ್ಚಳವಾಗಿಕಾಣುತ್ತಿದೆ. ಹೇಳಲೆ?
ನನ್ನ ತಾಯಿ ಸತ್ತು ಹತ್ತು ವರ್ಷಗಳಾದವು.
ಈಗ ನನ್ನ ತಾಯಿಯ ಹೆಸರು, ಇನ್ನೊಮ್ಮೆ ವೈದ್ಯನ ತಾಯಿಯ
ಹೆಸರು ಹೇಳಿಕೊಂಡು ಬರುವ ನೀನ್ಯಾರೋ ನಾನರಿಯೆ.
ಬಹುಶಃ ವೈದ್ಯನ ತಾಯಿ ಅಥವಾ ಆಕೆಯ
ಗೆಳತಿಯಾಗಿದ್ದರೆ ಒಂದು ಮಾತು ಹೇಳುತ್ತೇನೆ ಕೇಳು:
ಈಗಷ್ಟೇ ಮುಡಿಗೆ ಹೂ ಮುಡಿಸಿ ಹೋದನಲ್ಲ ವೈದ್ಯ,
ಅವನು ಗಂಡನಾಗಿ ಸಿಕ್ಕ ತಕ್ಷಣವೆ ಒಂದು

ಪವಾಡ ನಡೆಯಿತು ತಾಯಿ:
ತೊಟ್ಟಿಲ ಕೂಸು ಮಡದಿಯಾಗಿ,
ಮೂಗಿಗೆ ಬಾಯಿ ಬಂದು,
ಆಗಬಾರದ್ದಾಗಿ ನಡೆಯಬಾರದ್ದು ನಡೆದು ಹೋಯಿತು.
ಸೂರ್ಯಕಿರಣ ಮಣ್ಣ ಸೇರಿ ಥರಾವರಿ ಸಸ್ಯ ಪ್ರಪಂಚವ
ಹುಟ್ಟಿಸುವಂತೆ, ನೋಟ ಮಾತ್ರದಿಂದ
ನೂರಾರು ಭಾವನೆಗಳನ್ನ ನನ್ನಲ್ಲಿ ಅರಳಿಸಬಲ್ಲಾತ,
ನೋವಿನಲ್ಲಿದ್ದವರನ್ನ ಸಾವಿನ ಬಾಯಿಂದ
ಬಿಡಿಸಿ ತರಬಲ್ಲಾತ,
ಯಾಕೆಂದು ಗೊತ್ತಿಲ್ಲದೆ ಅರಳಿದ ನನ್ನ ಬದುಕಿಗೆ
ಅರ್ಥವಂತಿಕೆ ಕೊಡಬಲ್ಲಾತ
ಗಂಡನಾಗಿ ಸಿಕ್ಕಮೇಲೆ ನಾನೀಗ ಯಾರಿಗೂ ಹೆದರುವುದಿಲ್ಲವ್ವ.
ನಿನಗೂ ನಿನ್ನ ತಾಯಿಗೆ ಕೂಡ!
ನೀನು ಹೀಗೆ ಅಪ್ಪಣೆಯಿಲ್ಲದೆ,
ಎಲ್ಲೆಂದರೆಲ್ಲಿ ನಾನಿದ್ದಲ್ಲಿ,
ತಾಯಿಯ ಹೆಸರು ಹೇಳಿಕೊಂಡು ನುಗ್ಗುವುದು
ನನಗೆ ಸರಿಬರುವುದಿಲ್ಲ.
ನನ್ನ ಕಣ್ಣು ಸರಿಯಾಗಿ ತೆರೆದವು ಅಂತ ಖಾತ್ರಿಯಾಯಿತಲ್ಲ?
ಈಗ ಹೊರಡು. ಪುಷ್ಪಗಂಧಿ,

ಪುಷ್ಪಗಂಧಿ : (ಪ್ರವೇಶಿಸಿ) ರಾಜಕುಮಾರೀ,

ರಾಜಕುಮಾರಿ : ಈಕೆಗೆ ಬಾಗಿಲು ತೋರಿಸು.
(ಮುದುಕಿಯ ವೇಷದ ತಾಯಿ ಆಶ್ಚರ್ಯದಿಂದ ಸುಮ್ಮನೆ ಹೋಗುವಳು.)

* * *

## ಚಳ್ಳೆಹಣ್ಣು

(ಮದನತಿಲಕನ ಮನೆ, ಮದನತಿಲಕ ಮತ್ತು ಮಂಜರಿ.)

ಮಂಜರಿ : ನಿಜ ಹೇಳು, ನಿನ್ನ ಕನಸಿನಲ್ಲಿ ಯಾವಳೊಂದಿಗಿದ್ದೆ?

ಮದನತಿಲಕ : ಯಾರೂ ಇಲ್ಲವಲ್ಲ, ಇದ್ದಿದ್ದರೆ ನಿನ್ನ ಜೊತೆಗಿರಬೇಕು.

ಮಂಜರಿ : ನಿಜ ಬೊಗಳು; ನಿನ್ನ ಕನವರಿಕೆಯನ್ನೆಲ್ಲ ಕೇಳಿದ್ದೇನೆ.

ಮದನತಿಲಕ : ನನ್ನ ಮಾತು ಕೇಳು ಮಾರಾಯಳೇ. ಇಂದಿನ ನಾಟಕದ ತಯಾರಿ ಮಾಡಬೇಕು. ಮಾರ್ಕಂಡೇಯನ ಮಾತುಗಳನ್ನ ನೀನು ಉರುಹೊಡೆಯಬೇಕು. ದೀರ್ಘ ಆಲಾಪದ ನಂತರ ಒಂದು ಗಳಿಗೆ ಪದ ಇದೆ.

ಮಂಜರಿ : ನನ್ನ ಮಾತಿಗೆ ಮೊದಲು ಜವಾಬು ಕೊಡು. ನೀನು ಆ ಮುದಿ ಹೆಂಗಸು ಮದರಂಗಿ  ಜೊತೆ ಇರ್ಲಿಲ್ಲವ?

ಮದನತಿಲಕ : ಮದರಂಗಿ ಯಾರು?

ಮಂಜರಿ : ತೋಟದಲ್ಲಿ ಯಾರೂ ಇರೋದಿಲ್ಲಾಂತ ಅಲ್ಲಿಗೇ ಬರಹೇಳುತ್ತಿದ್ದೆ; ನಿನ್ನ ಕನವರಿಕೆಯಲ್ಲಿ.

ಮದನತಿಲಕ : ಇದು ನಿನ್ನ ಕನಸು ಮಾರಾಯಳೆ.

ಮಂಜರಿ : ನಿನ್ನ ಕನಸು ನಾನು ಹೇಳ್ತಿರೋದು. ನನ್ನ ಕನಸಾಗಿದ್ದರೆ ನಿನ್ನನ್ನ ಅಲ್ಲೇ ಒದೀತಿದ್ದೆ.

ಮದನತಿಲಕ : ಹೋಗಲಿ ಒಂದು ಸಲವಾದರೂ ನಿನ್ನ ಕನಸಿನಲ್ಲಿ ನನಗೆ ಪ್ರವೇಶ ಕೊಡು. ನಾನೆಂಥವನು ಅಂತ ನಿನಗೇ ಗೊತ್ತಾಗಿ ಬಿಡುತ್ತದೆ.

ಮಂಜರಿ : ನನಗೆ ನಿದ್ದೆ ಬಂದರಲ್ಲವೆ? ನೀನು ಯಾರ್ಯಾರನ್ನ ಕನಸಿಗೆ ಕರೆತಂದು ತಬ್ಬಿಕೊಂಡಿರ್ತೀಯೋ ಅಂತ ಕಾವಲುಕಾಯೋದೇ ನನ್ನ ಕೆಲಸ ಆಗಿದೆ. ಒಂದು ದಿನ ನಿನಗೇ ಗೊತ್ತಿಲ್ಲದ ಹಾಗೆ ನಿನ್ನ ಕನಸಿಗೆ ನುಗ್ಗಿ, ನೀನು ಯಾರೊಂದಿಗಿದ್ದೆ ಅಂತ ಪತ್ತೆ ಹಚ್ಚಿ, ಕಚ ಕಚ ಅವಳ ಕಿವಿ ಮತ್ತು ನಿನ್ನ ಮೂಗು ಕಚ್ಚದಿದ್ದರೆ ನನ್ನ ಹೆಸರು ಮಂಜರಿಯೇ ಅಲ್ಲ. ನೀನೊಬ್ಬ ಚಪಲಚಿತ್ತದ ಸ್ತ್ರೀಲಂಪಟ! ದೇವತ ಭೀತಿ ಇಲ್ಲದ ಠಕ್ಕ!

ಮದನತಿಲಕ : ನೀನು ಮುಟ್ಟಿದರೆ ಮುನಿಯಮ್ಮ, ಜಗಳಗಂಟಿ, ವಿಷಕಂಠಿ.

ಮಂಜರಿ : ಥೂ ನಾನಿನ್ನ ಜೊತೆ ಇರಲಾರೆ. ಇಗೋ ನಾನು ಹೊರಟೆ ತೌರಿಗೆ……

(ಹೊರಡುವಳು. ಸಂಜೀವಶಿವ ಬಂದುದನ್ನು ನೋಡಿ ಮನೆಯೊಳಕ್ಕೆ ಹೋಗುವಳು.)

ಮದನತಿಲಕ : ನೀನ್ಯಾವಾಗ ಬಂದೆ ವೈದ್ಯ ಮಹಾಶಯಾ?

ಸಂಜೀವಶಿವ : ಯಾವಾಗಲೋ ಬಂದು ನೀನಾಡೋ ಆಟ ನೋಡುತ್ತಿದ್ದೆ. ಈಕೆ…..

ಮದನತಿಲಕ : ನನ್ನ ಎಡಭಾಗ, ಅಂದರೆ ಅರ್ಧಾಂಗಿ.

ಸಂಜೀವಶಿವ : ಓಹೋ ಮದರಂಗಿ!

ಮದನತಿಲಕ : ಮದರಂಗಿ? ಯಾರವಳು?

ಸಂಜೀವಶಿವ : ಆ ದಿನ ಮದರಂಗಿಯ ಹೆಸರು ಹೇಳಿ ನನ್ನ ಬಳಿ ಮದ್ದು ತಗೊಂಡೆಯಲ್ಲವೆ?

ಮದನತಿಲಕ : ಮೆಲ್ಲಗೆ ಮಾತಾಡು. ನೀನು ಆ ಹಳೇ ಹೆಂಗಸಿನ ವಿಷಯ ಹೇಳಿದೆ ಅಲ್ಲವೆ? ಅದು ಹಳೇ ಕಥೆ ಮಾರಾಯಾ. ಆಗ ನನಗೂ ಪ್ರಾಯವಿರಲಿಲ್ಲ. ಮದರಂಗಿಯಂಥ ಮುದುಕಿಯ ಪ್ರೀತಿಯೇ ಅನುಗ್ರಹವಾಗಿತ್ತು. ಆಮೇಲೆ ನೀನು ದಯಮಾಡಿ ಕೊಟ್ಟ ಯೌವನದ ಮದ್ದು ತಗೊಂಡೆ ನೋಡು; ಹೋತಿನ ಪ್ರಾಯ ಬಂದು ಬಿಟ್ಟಿತಯ್ಯಾ ನನಗೆ! ನಿನ್ನ ಅದ್ಭುತ ಮದ್ದು ತಗೊಂಡ ಮೇಲೂ ಮುದುಕಿಯನ್ನ ಕಟ್ಟಿಕೊಂಡರೆ ನಿನ್ನಮದ್ದಿಗೇ ಅವಮಾನ ಅಂತ ಇವಳನ್ನ ಕಟ್ಟಿಕೊಂಡೆ.

ಸಂಜೀವಶಿವ : ಇವಳೆಲ್ಲಿ ಸಿಕ್ಕಳು?

ಮದನತಿಲಕ : ಮೊನ್ನೆ ಯಕ್ಷಗಾನ ಇತ್ತಲ್ಲ; ವಸ್ತ್ರಾಪಹರಣದ ಪ್ರಸಂಗ, ದುಶ್ಯಾಸನನ ವೇಷ ಕಟ್ಟಿದ್ದೆ. ನಾನು ರಭಸದಿಂದ ಸೀರೆ ಸೆಳೆಯುತ್ತಿದ್ದರೆ ಕೃಷ್ಣಾ ಕಾಪಾಡೆಂದು ದ್ರೌಪದಿ ಪದ ಒದರುತ್ತಿದ್ದರೆ, ಜನರೆಲ್ಲಾ ನನ್ನ ನೋಡಿ ಕೋಪದಲ್ಲಿ ಹಲ್ಲು ಕಡಿಯುತ್ತಿದ್ದರೆ ಇವಳೊಬ್ಬಳೇ ನನ್ನಕಡೆ ನೋಡಿ ಆನಂದದಿಂದ ನಗುತ್ತಿದ್ದಳಯ್ಯ! ಸಿಗಬಲ್ಲಳೇ ಎಂದು ನೋಡಿದರೆ-ಅವಳೇ ಕಣ್ಣು ಹೊಡೆದು ಸಿಕ್ಕೇಬಿಟ್ಟಳಯ್ಯಾ! ಇಂಥ ರಸಭರಿತ ಕಿತ್ತಳೆಹಣ್ಣು ಸಿಕ್ಕಮೇಲೆ ಮದರಂಗಿಯಂಥ ಸಿಪ್ಪೆ ಒಣಗಿ ರಸವಾರಿದ ಚಳ್ಳೆಹಣ್ಣು ಹ್ಯಾಗಯ್ಯಾ ತಿನ್ನೋದು?

ಸಂಜೀವಶಿವ : ಇವಳೊಂದಿಗೂ ಜಗಳಾಡ್ತ ಇದ್ದೆಯಲ್ಲ ಮಾರಾಯಾ?

ಮದನತಿಲಕ : ಅದು ಇನ್ನೊಂದು ಕಥೆ. ಮದರಂಗಿ ಸದಾ ಒಟಗುಡುತ್ತದಲ್ಲಾ ಅಂತ ಇದನ್ನ ಕಟ್ಟಿಕೊಂಡರೆ ಇದಿನ್ನೂ ವಾಚಾಳಿ,-ಇಲ್ಲಾ ನನಗೆ ಛೀಮಾರಿ ಹಾಕುತ್ತಾಳೆ, ಇಲ್ಲಾ ಶಾಪ ಹಾಕುತ್ತಾಳೆ, ಇಲ್ಲಾ ಬೈಯುತ್ತಾಳೆ, ಇಲ್ಲಾ ಒಟಗುಡುತ್ತಾಳೆ, ಇಲ್ಲಾ ಚಾಡಿ ಹೇಳುತ್ತಾಳೆ, ಅದೂ ಇಲ್ಲಾಂದರೆ ನನ್ನ ಕನವರಿಕೆಗಳನ್ನೆಲ್ಲ ಕದ್ದು ಕೇಳಿ ಬೆಕ್ಕಿನ ಹಾಗೆ ಜಗಳವಾಡುತ್ತಾ ರಾತ್ರಿ ಅನುಭವಿಸಿದ ದಾಂಪತ್ಯ ಸುಖವನ್ನೆಲ್ಲಾ ಹೀಗೆ ಹಗಲು ಹೊತ್ತು ವಾಂತಿ ಮಾಡಿಸುತ್ತಾಳೆ. ನನ್ನ ವಿಷಯ ಬಿಡು: ನೀನೇನು ಬಂದೆ ಈ ಕಡೆಗೆ? ಅದನ್ನ ಹೇಳು.

ಸಂಜೀವಶಿವ : ನಿನ್ನಿಂದ ತುರ್ತಾಗಿ ನನ್ನ ತಾಯಿಯ ಬಗ್ಗೆ ಒಂದು ಸತ್ಯ ತಿಳಿಯೋಣ ಅಂತ ಬಂದೆ.

ಮದನತಿಲಕ : ದಿನ ಬೆಳಗಾದರೆ ನೋಡುವ ತಾಯಿಯ ಸತ್ಯ ಮಗನಿಗೇ ಗೊತ್ತಿಲ್ಲವೆಂದರೆ ನಂಬುವ ಮಾತೆ? ವಿದೂಷಕನನ್ನೇ ನಗಿಸಲು ಸುರು ಮಾಡಿದಿಯಲ್ಲ ಸ್ವಾಮೀ.

ಸಂಜೀವಶಿವ : ಗಂಭೀರವಾಗಿ ಕೇಳುತ್ತಿದ್ದೇನೆ, ದಯಮಾಡಿ ಉತ್ತರ ಕೊಡು. ನೀನು ನಿನ್ನ ವೇಷಗಾರಿಕೆಯಿಂದ ಸಾವಿಗೇ ಚಳ್ಳೆಹಣ್ಣು ತಿನ್ನಿಸಿದೆಯಂತೆ ಹೌದೆ?

ಮದನತಿಲಕ : ಸಾವಿನ ಭಯದಲ್ಲಿ ಸಾವಿಗೆ ಗುರುತು ಸಿಗದಿರಲೆಂದು ನಾನು ದಿನಕ್ಕೊಂದು ವೇಷ ಮತ್ತು ಹೆಸರುಗಳನ್ನು ಬದಲು ಮಾಡುತ್ತೇನೆನ್ನುವುದು ನಿಜ. ನನ್ನ ಅಭಿನಯದಿಂದ ಮನುಷ್ಯರು ಮೋಸ ಹೋಗುತ್ತಾರೆಂಬುದೂ ನಿಜ. ಆದರಿವು ಮೂಢನಂಬಿಕೆಗಳೆಂದು ಎಲ್ಲರಿಗಿಂತ ಚೆನ್ನಾಗಿ ನನಗೇ ಗೊತ್ತು. ಯಾಕೆಂದರೆ ಅವು ನಿಜವಾದಲ್ಲಿ ಜಗತ್ತಿನಲ್ಲಿ ಯಾರೂ ಸಾಯುತ್ತಿರಲಿಲ್ಲ. ಎಲ್ಲರೂ ದಿನಕ್ಕೊಂದು ಹೆಸರು ವೇಷ ಬದಲಿಸಿಕೊಂಡು ಚಿರಂಜೀವಿಗಳಾಗುತ್ತಿದ್ದರು. ಆದರೆ ನಾನೊಂದು ಪ್ರಶ್ನೆ ಕೇಳುತ್ತೇನೆ. ನೀನದಕ್ಕೆ ಪ್ರಾಮಾಣಿಕವಾಗಿ ಉತ್ತರ ಕೊಟ್ಟರೆ ಅದೇ ನಿನಗೆ ದಾರಿದೀಪವಾಗಬಹುದು.

ಸಂಜೀವಶಿವ : ಕೇಳು.

ಮದನತಿಲಕ : ನಿನ್ನ ತಾಯಿ ಸಾವಿನ ಅಧಿದೇವತೆ ಶೆಟವಿ ತಾಯಿ ಇಲ್ಲದೆ ನಿನ್ನ ವೈದ್ಯವಿಲ್ಲವಂತೆ, ಹೌದೆ?

ಸಂಜೀವಶಿವ : ಹೌದು. ಆಕೆ ಅದೃಶ್ಯಳಾಗಿ ರೋಗಿಯ ಎಡಕ್ಕೆ ಅಥವಾ ಬಲಕ್ಕೆ ಪ್ರತ್ಯಕ್ಷಳಾಗುತ್ತಾಳೆ. ಬಲಕ್ಕಾದರೆ ವೈದ್ಯ ಮಾಡುತ್ತೇನೆ, ಎಡಕ್ಕಾದರೆ ಮಾಡಕೂಡದು. ಹಾಗೆಂದು ತಾಯಿ ನನಗೆ ವರ ಕೊಟ್ಟಿದ್ದಾಳೆ. ನನ್ನ ಯಶಸ್ಸಿನ ಗುಟ್ಟು ಇದೇ. ಈಗ ಮುಂದಿನ ನಿಜ ಕೇಳು: ಕಾಡಿನಲ್ಲಿ ನಾನು ರಾಜಕುಮಾರಿಯ ನಾಡಿ ನೋಡುವಾಗ ನನ್ನ ತಾಯಿ ಎಡಕ್ಕೆ ಪ್ರತ್ಯಕ್ಷಳಾಗಿ ರೋಗಿಯನ್ನು ಒಪ್ಪದಂತೆ ಸೂಚಿಸಿದ್ದಳು. ಆದರೂ ನಾನು ಮದ್ದು ಕೊಟ್ಟೆ. ಈಗವಳಿಗೆ ಕೋಪ ಬಂದಿದೆ. ನಾಳೆ ಅಸ್ತಮಾನ ಆಗುವುದರೊಳಗೆ ರಾಜಕುಮಾರಿಯ ಕತ್ತಿನಲ್ಲಿ ಕಟ್ಟಿರುವ ಮದ್ದಿನ ಬಳ್ಳಿಯನ್ನು ಬಿಚ್ಚಿಕೊಂಡು ಬಾ ಎಂದು ಕಳಿಸಿದ್ದಾಳೆ. ರಾಜಕುಮಾರಿ ಉಳಿಯಬೇಕು. ಈಗ ಉಪಾಯ ಹೇಳಬಲ್ಲೆಯಾ?

ಮದನತಿಲಕ : ನಿನ್ನ ಬಗೆಗೆ ನನ್ನ ಗೌರವ ಇಮ್ಮಡಿಯಾದುದನ್ನು ಹೇಳಲೇಬೇಕು. ಆದರೆ ನಿನ್ನ ತಾಯಿ ಹುನ್ನಾರಿನವಳು. ಎಲ್ಲಿ ಯಾವಾಗ ಹ್ಯಾಗೆ ಎದುರು ಬಂದಾಳೆಂದು ತಿಳಿಯದೆ ಅವಳಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ ಮಾರಾಯಾ. ಈ ತನಕ ಕೋಟಿ ಕೋಟಿ ಜೀವರಾಶಿಗಳ ಕೊಲೆ ಮಾಡಿದ್ದಾಳೆ. ಒಂದರ ಅಪಾದನೆಯಾದರೂ ಅವಳ ಮೇಲಿದೆಯೆ? ಮಾಯೀ ಬೆಟ್ಟದ ಗವಿಯಲ್ಲಿ ನಿನ್ನ ತಾಯಿ ತನ್ನ ಚಟುವಟಿಕೆಗಳಿಗೆ ನೆರವಾಗುವ ಅಂಧಮ್ ತಮಸ್ಸನ್ನು ಗುಟ್ಟಾಗಿ ಇಟ್ಟಿದ್ದಾಳೆಂದು ಹೇಳುತ್ತಾರೆ. ಆದರೆ....

ಸಂಜೀವಶಿವ : ಆದರೆ ಅದಕ್ಕಿಂತ ಹೆಚ್ಚಿಗೆ ಭ್ರಮಾತ್ಮಕವಾದ ಬೆಳಕಿನ ತಮಸ್ಸಿನಲ್ಲಿ ನಮ್ಮನ್ನಿಟ್ಟಿದ್ದಾಳೆ. ತಾಯಿಯ ಸಮೀಪದಲ್ಲಿದ್ದಾಗ ದುರ್ವಾಸನೆಯಿಂದ ನನ್ನ ಮೂಗು ಮತ್ತು ಉಸಿರು ಕಟ್ಟುತ್ತಿದ್ದವು. ಅದೆಲ್ಲ ನನ್ನ ಮದ್ದಿನದು ಮತ್ತು ಮನುಷ್ಯರ ರೋಗದ್ದೆಂದು ತಪ್ಪು ತಿಳಿದಿದ್ದೆ. ಅಲ್ಲ ಅದೆಲ್ಲ ಸಾವಿನ ವಾಸನೆಯೆಂದು ಈಗ ನಿಜ ತಿಳಿಯುತ್ತಿದೆ. ಮನುಷ್ಯ ತನಗಿರುವ ಒಂದೇ ಬದುಕನ್ನ ಎಷ್ಟೇ ದುಃಖಮಯ, -ಎಷ್ಟೇ ಅರ್ಥವಿಲ್ಲದ್ದು ಅಂತ ಅಂದು ಕೊಂಡರೂ ಈ ಪರಿ ಕೊಳಚೆ ಮಾಡಿಕೊಳ್ಳಲಾರ.

ಮದನತಿಲಕ : ನೋಡು ವೈದ್ಯ ಮಹಾಶಯಾ, ಬದುಕು ದುಃಖಮಯ ಅಂತ ಯಾರಿಗೆ ಗೊತ್ತಿಲ್ಲ? ಹಾಗಂತ ನಾವ್ಯಾರೂ ತಲೆಮೇಲೆ ಕೈಹೊತ್ತು ಕೂತಿಲ್ಲವಲ್ಲ. ನಮನಮಗೆ ಕಂಡ ಅರ್ಥಗಳನ್ನು ಪಡೆಯುತ್ತಲೇ ಇರುತ್ತೇವೆ. ಇಷ್ಟೆಲ್ಲ ನಾಟಕವಾಡಲು ನನಗೆ ಪ್ರೇರಣೆ ಕೊಡುವ ಶಕ್ತಿಯಾದರೂ ಯಾವುದು? ಖಂಡಿತ ಅರ್ಥವಿದೆಯೆಂಬ ನಂಬಿಕೆ; ಅಲ್ಲವೆ?

ಸಂಜೀವಶಿವ : ಈ ಪ್ರಪಂಚದಲ್ಲಿ ಅರ್ಥ ಇರೋದು ಮನುಷ್ಯನೊಬ್ಬನಿಗೇ, ಅದು ಸಿಕ್ಕೋದೂ ಅವನೊಬ್ಬನಿಗೇ.ಅದನ್ನೇ ಉಪಯೋಗಿಸಿಕೊಂಡು ತಾಯಿ ನಮ್ಮನ್ನಾಳುತ್ತಿದ್ದಾಳೆ. ನನಗೆ ಬೇಕಾದ್ದು ಅರ್ಥವಲ್ಲ ಸ್ವಾತಂತ್ರ್ಯ, ತಾಯಿಯಿಂದ ಸ್ವಾತಂತ್ರ್ಯ. ಈ ಬದುಕು ಬದುಕೋದಕ್ಕೆ ಯೋಗ್ಯವಾಗುವುದೇ ಸ್ವಾತಂತ್ರ್ಯದಿಂದ, ರಾಜಕುಮಾರಿಯ ಪ್ರೀತಿ ನನಗೆ ಸ್ವಾತಂತ್ರ್ಯದ ಮೊದಲ ಪಾಠ ಕಲಿಸಿಯಾಗಿದೆ. ನಾನೀಗ ಸ್ವತಂತ್ರವಾಗಿ ವೈದ್ಯವೃತ್ತಿಕೈಕೊಳ್ಳಬೇಕೆಂದಿದ್ದೇನೆ. ತಾಯಿ ರೋಗಿಯ ಎಡ ಬಲದಲ್ಲಿ ಪ್ರತ್ಯಕ್ಷಳಾಗಲಿ, ಬಿಡಲಿ, ನಾನು ನನ್ನ ಬಳಿ ಬರುವ ಎಲ್ಲ ರೋಗಿಗಳಿಗೂ ಮದ್ದು ಕೊಡುತ್ತೇನೆ. ಇದೆಲ್ಲ ಆಮೇಲೆ. ಈಗ ತುರ್ತಾಗಿ ರಾಜಕುಮಾರಿ ಉಳಿಯಬೇಕಾದ ಉಪಾಯ ಹೇಳಬಲ್ಲೆಯಾ?

ಮದನತಿಲಕ : ನಿನಗೆ ದೇವರಲ್ಲಿ ನಂಬಿಕೆ ಇದೆಯ?

ಸಂಜೀವಶಿವ : ಇದೆ.

ಮದನತಿಲಕ : ಹಾಗಿದ್ದರೆ ಕೇಳು: ರಾಜಕುಮಾರಿಯ ಜೀವ ಅಪಾಯದಲ್ಲಿರುವ ವಿಚಾರ ಮಹಾರಾಜರಿಗೆ ಗೊತ್ತಿಲ್ಲ. ಅಷ್ಟೇ ಅಲ್ಲ-ಅಪಾಯದಿಂದ ಪಾರಾದಳೆಂದೇ ಇಂದಿನ ನಾಟಕ ಏರ್ಪಡಿಸಿದ್ದಾರೆ. ಅವರಿಗೆ ಈ ವಿಚಾರ ಹೇಳಿ ಪ್ರಯೋಜನವೂ ಇಲ್ಲ. ಅವರು ರಾಜಕುಮಾರಿಯೊಂದಿಗೆ ನಾಟಕ ನೋಡುತ್ತಿರಲಿ-ಕಾಡಿನಲ್ಲಿರುವ ಚಂದ್ರಶೇಖರ ದೇವಾಲಯ ಜಾಗೃತ ಸ್ಥಳವೆಂದು ಖ್ಯಾತಿಯಿದೆ. ಅಲ್ಲಿಯ ಶಿವಲಿಂಗದಿಂದ ಸಾಕ್ಷಾತ್ ಶಿವನೇ ಪ್ರತ್ಯಕ್ಷನಾಗಿ ಅನೇಕರಿಗೆ ದರ್ಶನ ಕೊಟ್ಟದ್ದಿದೆ. ಮಾರ್ಕಂಡೇಯ ಮುನಿಗೆ ಶಿವದರ್ಶನವಾಗಿ ಆಯುಷ್ಯವೃದ್ಧಿಯಾದದ್ದೂ ಇಲ್ಲಿಯೇ ಎಂದು ಹೇಳುತ್ತಾರೆ. ಮಾತ್ರವಲ್ಲ, ಹೀಗೆ ಶಿವದರ್ಶನ ಪಡೆದವರಲ್ಲಿ ನಿನ್ನ ತಂದೆಯೂ ಒಬ್ಬನಾಗಿದ್ದ. ನೀನ್ಯಾಕೆ ಅಲ್ಲಿಗೆ ಹೋಗಿ ಪ್ರಯತ್ನಿಸಬಾರದು? ಹ್ಯಾಗೂ ನಾಳೆ ಅಸ್ತಮಾನದವರೆಗೂ ಸಮಯವಿದೆ.

ಸಂಜೀವಶಿವ : ಹೌದು. ಹಾಗೇ ಮಾಡುವಾ. (ಹೊರಡುವನು)

* * *

## ಭಯಕೆ ಅಭಯವ ನೀಡಿ

(ಶಿವದೇವಾಲಯ ಶಿವನ ಹೊಗಳಿಕೆಯನ್ನು ಹೇಳುತ್ತ ಸಂಜೀವಶಿವನ ಪ್ರವೇಶ)

ಸಂಜೀವಶಿವ : **ಚಂದ್ರಶೇಖರ ಚಂದ್ರಶೇಖರ ಚಂದ್ರಶೇಖರ ಪಾಹಿ ಮಾಂ|**
**ಚಂದ್ರಶೇಖರ ಚಂದ್ರಶೇಖರ ಚಂದ್ರಶೇಖರ ರಕ್ಷ ಮಾಂ||**
**ದೇವಸಿಂಧುತರಂಗಶೀಕರಸಿಕ್ತಶುಭ್ರ ಜಟಾಧರಂ**
**ಭಾಲಲೋಚನಜಾತಪಾವಕದಗ್ಧಮನ್ಮಥವಿಗ್ರಹಂ**
**ಅಂಧಕಾಂತಕಮಾಶ್ರಿತಾಮರ ಪಾದಪಂ ಶಮನಾಂತಕಂ**
**ಚಂದ್ರಶೇಖರಮಾಶ್ರಯೋ ಮಮ ಕಿ ಕರಿಷ್ಯತಿ ವೈ ಯಮಃ||**

**ಮೃತ್ಯುಭೀತ ಮೃಕಂಡುಸೂನುಕೃತಸ್ತವಂ ಶಿವಸನ್ನಿಧೌ**
**ಭಕ್ತವತ್ಸಲಮರ್ಚಿತಂ ನಿಧಿಮಕ್ಷಮಂ ಹರಿದಂಬರಂ**
**ಪೂರ್ಣಮಾಯುರರೋಗಿತಾಮಖಿಲಾರ್ಥ ಸಂಪದಮಾದರಂ**
**ಚಂದ್ರಶೇಕರಮಾಶ್ರಯೋ ಮಮ ಕಿಂ ಕರಿಷ್ಯತಿ ವೈ ಯಮಃ||**

*(ಅಷ್ಟರಲ್ಲಿ ಶಿವನೇ ನೃತ್ಯ ಮಾಡುತ್ತ ಪ್ರತ್ಯಕ್ಷನಾಗಿ ಆಶೀರ್ವಾದಿಸುವ ಭಂಗಿಯಲ್ಲಿ ನಿಂತು)*

ಶಿವ : ಎಲಾ ಭಕ್ತಾಗ್ರಣಿಯೇ
ಭಕ್ತರು ಶಿವ ಅಂದರೆ ಸಾಕು ಭೋ ಅಂತ ಶಿಲೆಯಿಂದ ಬರಬೇಕು ನಾನು.
ಇಗೋ ನಿನ್ನ ನಿರ್ಮಲ ಭಕ್ತಿಗೆ ಮೆಚ್ಚಿ ಬಂದಿದ್ದೇನೆ. ಹೇಳು ಮಗನೇ
ನಿನಗೇನು ಬೇಕು?

(ಶಿವನು ಮಾತಾಡಿದ್ದಕ್ಕೆ ಸಂಜೀವಶಿವ ಬೆರಗಾಗಿ ನಿಲ್ಲುವನು)

ಎಲೈ ಭಕ್ತ ಶಿರೋಮಣಿಯೇ. ನೀನು ಹೊಗಳುವ ಮುಂಚೆಯೇ ನಾನು ಮಾತಾಡಿದ್ದಕ್ಕೆ ಭಯವೆ?
ಅಥವಾ ನಾನು ಶಿವ ಹೌದೋ ಅಲ್ಲವೋ ಅಂತ ಅನುಮಾನವೆ?

ಸಂಜೀವಶಿವ : (ಗೊಂದಲದಲ್ಲಿ) ಹಾಗೇನಿಲ್ಲ.

ಶಿವ : **ಭಕ್ತಿಗೆ ನಾನೆಷ್ಟು ಸುಲಭವಾಗಿ ಒಲಿಯುತ್ತೇನೆಂದು**
**ಗೊತ್ತೇ ಇರಬೇಕಲ್ಲ? ದಾಸರ ಹರಿಕಥೆ ಕೇಳಿಲ್ಲವೆ?**
**ಮಲಗಿ ನೆನೆದರೆ ಭಕ್ತ, ಕುಂತಾಲಿಸುವನು ಶಿವನು!**
**ಕುಂತು ನೆನೆದರೆ ಭಕ್ತ ನಿಂತಾಲಿಸುವನು ಶಿವನು!**
ನಿಂತು ನೆನೆದರೆ ಭಕ್ತ ಕುಣಿದಾಡಿ ಕೇಳುವನು ಶಿವನು! ನೀನು ನಿಂತು ಹೊಗಳಿದಿಯಾದ್ದರಿಂದ ನಾನು ಕುಣಿಯುತ್ತ ಬರಬೇಕಾಯಿತು.

ಸಂಜೀವಶಿವ : (ನಂಬಿ) ಧನ್ಯನಾದೆ ತಂದೆ!

ಶಿವ : ನಿಜವಾಗಿಯೂ?

ಸಂಜೀವಶಿವ : ನಿಜವಾಗಿ!

ಶಿವ : ನೀನು ನನ್ನ ಕೈಲಾಸವಾಸಿಯಾದ ಭಕ್ತ ಶಿರೋಮಣಿ ಕೀರ್ತಿಶಿವನ ಮಗನಲ್ಲವೆ?

ಸಂಜೀವಶಿವ : ಹೌದು. ಕೀರ್ತಿಶಿವನ ಮಗ, ಶೆಟಿವಿ ತಾಯಿಯ ಸಾಕು ಮಗನಾದ ಸಂಜೀವಶಿವ ನಾನು.

ಶಿವ : ಭೇಶ್ ಭೇಶ್. ಭಕ್ತರ ದೊಡ್ಡ ಪರಂಪರೆಯೇ ನಿನ್ನ ಹಿನ್ನೆಲೆಗಿದೆ
ಎಂದಂತಾಯ್ತು. ಹಾಗಿದ್ದರೆ ಬೇಗ ಅವರಸರ ಮಾಡಿ ವರ ಕೇಳು.
ನಿನಗೆ ವರ ಕೊಟ್ಟಲ್ಲದೆ ನನಗೆ ತೃಪ್ತಿ ಇಲ್ಲ. ಸಾಮಾನ್ಯವಾಗಿ ಕೇಳುವವರ
ಮನಸ್ಸನ್ನರಿದು ಕೇಳುವ ಮೊದಲೇ ವರ ಕೊಡೋದು ನನ್ನ ಚಾಳಿ.
ಈ ದಿನ ನಿನ್ನಮನಸ್ಸಿನಲ್ಲೇನಿದೆಯೆಂಬುದೇ ತಿಳಿಯುತ್ತಿಲ್ಲವಾದ್ದರಿಂದ
ಹೀಗೆ ಬಾಯಿಬಿಟ್ಟು ಕೇಳಬೇಕಾಯ್ತು.

ಸಂಜೀವಶಿವ : ಮಕ್ಕಳ ಗೋಳು ತಂದೆಗಲ್ಲದೆ ಇನ್ಯಾರಿಗೆ ತಿಳಿದೀತು ತಂದೆ?

ಶಿವ : ಅಲ್ಲವೇ? ಅಲ್ಲವೇ? ನಿನ್ನ ನೋಡಿದೊಡನೆ ನಿನ್ನ ಹಿಂದಿನ ಮುಂದಿನ
ಮತ್ತು ಇಂದಿನ ಎಲ್ಲಾ ಜನ್ಮಂಗಳ ದುಃಖಂಗಳು ಗೊತ್ತಾದುವಯ್ಯಾ!
ಆದರೀಗ ತುರ್ತಾಗಿ ಯಾವ ದುಃಖ ನಿವಾರಣೆ ಮಾಡಬೇಕು ಅಂತ
ತಿಳಿದರೆ…..

ಸಂಜೀವಶಿವ : ನನಗೆ ಮತಿಭ್ರಮಣೆಯಾಗುತ್ತಿದೆ ಸ್ವಾಮೀ.
ದೇವರದೇವ! ಮಹಾದೇವ, ಇಷ್ಟು ಸುಲಭವಾಗಿ…..

ಶಿವ  : ಬಡಕೊಂಡೆ ಪೂಜಾರಿಗೆ, ಸುಲಭವಾದಷ್ಟೂ ನಮ್ಮ ಬೆಲೆ ಕಮ್ಮಿಯಾಗುತ್ತದಯ್ಯ.
ಬಂದ ಭಕ್ತರು ಒಂದೆರಡು ಗಂಟೆ ಹಾಡಿ ಹೊಗಳಿ ಕಂಠಶೋಷಣೆ
ಮಾಡಿಕೊಂಡು ಧ್ವನಿ ನಿಂತ ಮೇಲೆ, ಒತ್ತಾಯದಿಂದ ಒಲಿದವರಂತೆ
ಅಭಿನಯಿಸಿ ವರ ಕೊಡೋಣ ಅಂತ. ನನ್ನ ಮಾತು ಕೇಳಲೇ ಇಲ್ಲ
ಆತ. ಈಗ
ನೋಡಿದರೆ ನನ್ನ ಪರಮಭಕ್ತನಿಗೇ ನನ್ನ ಬಗ್ಗೆ ಅನುಮಾನ ಮೂಡಿದೆ!
ನೋಡಯ್ಯಾ-ನಿನಗೆ ಕೊಡಬೇಕಾದ ವರವನ್ನ ನೀನು ಹುಟ್ಟುವ
ಮುಂಚೆಯೇ ಉರು ಹೊಡೆದಿದ್ದೆ. ಹಾಳಾದ್ದು ಮರೆವಾಗಿ ಹೋಯ್ತು,
ಸಮಯ ಹಾಳು ಮಾಡೋದು ಬೇಡ
ಅಂತ ನೇರವಾಗಿ ವ್ಯವಹಾರಕ್ಕಿಳಿದೆ, ಅಷ್ಟೆ.
ನನ್ನ ಬಗ್ಗೆ ಅನುಮಾನ ಬಂದಿದ್ದರೆ ಇಕಾ ನೋಡು; ಜಡೆಯಲ್ಲಿ ನಿಜವಾದ
ಚಂದ್ರ ಮತ್ತು ನೀರಿದೆ. ಹಣೆಯಲ್ಲಿ ಕಣ್ಣಿದೆ. ಖಾತ್ರಿ ಆಗದಿದ್ದರೆ
ಮುಟ್ಟಿ ನೋಡು ಅಥವಾ ತಾಂಡವ ನೃತ್ಯ ಮಾಡಿ ತೋರಿಸಲ?
ಪಕ್ಕ ವಾದ್ಯದವರು ಬನ್ನಿರಯ್ಯಾ....
(ಶಿವ ನೆಲವನ್ನು ನೋಡಿ)
ಈ ನೆಲ ಇದೆಯಲ್ಲ, ಅಂಕುಡೊಂಕು, ತಾಂಡವ ನೃತ್ಯಕ್ಕಲ್ಲ ಇದು.
ಅಲ್ಲದೆ ಇತ್ತೀಚೆಗೆ ಪಕ್ಕವಾದ್ಯ ಕಲಿಯುತ್ತಾರಲ್ಲ, ಅವರಿಗೆ ತಾಳ ಜ್ಞಾನ
ಸಾಲದು....

ಸಂಜೀವಶಿವ : ಅಲ್ಲದೆ ನಿಮಗೂ ಅಭ್ಯಾಸ ಸಾಲದು.

ಶಿವ : ಎಲಾ ಇವನ! ಯಾವೋನಯ್ಯಾ ನೀನು?

ಸಂಜೀವಶಿವ : ನಿನ್ನ ಮಗ ಸಂಜೀವಶಿವ ತಾಯಿ! ಬರೀ ಒಬ್ಬ ಮದನತಿಲಕ ನಟ
ಅಂತಿದ್ದೆ. ಈಗ ನನ್ನ ತಾಯಿಯೂ ನಟಿಯಾಗಿ ಅಭಿನಯಿಸತೊಡಗಿದ್ದಾಳೆ.
ಆದರೆ ನೀನೊಬ್ಬ ಕೆಟ್ಟ ನಟಿ ತಾಯಿ.

ತಾಯಿ : (ಸ್ವಂತ ವೇಷಭೂಷಣದಲ್ಲಿ) ನಾನ್ಯಾರೆಂದು ತಿಳಿಯಲಿಕ್ಕೆ ಇಷ್ಟು ಹೊತ್ತು
ಬೇಕಾಯ್ತು ನಿನಗೆ? ಆರಂಭದಿಂದಲೇ ಕೆಟ್ಟದಾಗಿ ಅಭಿನಯಿಸಿದರೂ
ನಿನಗೆ ಗುರುತಾಗಲಿಲ್ಲವಲ್ಲ.
ನೀನೊಬ್ಬ ಕೆಟ್ಟ ಪ್ರೇಕ್ಷಕ ಅಂತ ಮೊದಲು ಒಪ್ಪಿಕೊ.
ದೇವರಂತೆ ಅಭಿನಯಿಸುವುದು ಇಷ್ಟು ಸುಲಭ ಅಂತ
ಗೊತ್ತಿರಲಿಲ್ಲ. ಅವನ ಹಾಗೇ ಕೂತು ನಿಂತು
ಅವನ ಶೈಲಿಯಲ್ಲೇ ಆಶೀರ್ವದಿಸುವುದು ಬಹಳ ಸರಳ ಮಾರಾಯಾ.
ಒಮ್ಮೆ ತಿಳಿದರೆ ದೇವರ ಮಾದರಿಗಳನ್ನ

ಲಾಭದಾಯಕವಾಗಿ ತಯಾರಿಸಬಹುದು.
ನಿನ್ನ ದೇವರೂ ಬಲೆ ಘಾಟಿ ಮಾರಾಯಾ, ಋತುಮಾನದ
ಹದಗಳಿಗೆ ಹಲಬಣ್ಣ ತಳೆದವನು.
ಎತ್ತರದ ಬೆಟ್ಟದಲಿ ಚಿತ್ತಾರದ ಗುಡಿ ಕಟ್ಟಿ
ಕ್ಷಿತಿಜದಾಚೆಗೆ ಮಿಂಚ ಹೊಳೆಸಿದವನು.
ಮಿಂಚಿನಲಿ ಕಣ್ಣಾಲಿ ಕೀಲಿಸಿ ನಿಂತರೆ ಮಾನವ
ಆ ಮಿಂಚು ತಾನೆಂದು ಸಡಗರಿಸುವವನು.
ಅರಿವು ಮರೆವಿನ ಆಟದಲ್ಲಿ, ಮಾನವ ಮರೆತರೂ
ದೇವರಿಗೆ ಗೊತ್ತು, ಆ ಮಿಂಚಿಗೆ ವಿದ್ಯುತ್ ಸರಬರಾಜಾದದ್ದು
ಮಾನವನಿಂದ ಎಂದು.
ಒಬ್ಬಿಬ್ಬರೇ ಈ ದೇವರೂ?
ಥರಾವರಿ ಛತ್ತೀಸ್ಕೋಟಿ ಮತ್ತು ಚಿಲ್ಲರೆ.
ಶಿಲಾದೇವರು ಕಲಾದೇವರು, ಮಣ್ಣದೇವರು ಮರದ ದೇವರು
ಚಿಕ್ಕಣ್ಣ ದೇವರು ಮುಕ್ಕಣ್ಣ ದೇವರು, ಮೈತುಂಬ ಕಣ್ಣಿನವರು
ನಕ್ಕವರು ಅತ್ತವರು, ಬೆರಗಿನವರು
ಕೈಮುಖ ಎಂಟೆಂಟಾಗಿ ಗುಣಿಸಿಕೊಂಡವರು
ಭಯಗಳ ಹೇರಿ ಅಭಯಂಗಳ ನೀಡುವವರು,
ಮಾನವ ಕಲ್ಪನೆಯ ದುಂದಿಗೆ ಸಾಕ್ಷಿಯಾದವರು.
ಒಬ್ಬೊಬ್ಬ ದೇವರಿಗೆ ಅವನವಳ ಸಂಸಾರ ವೇಷಭೂಷಣ
ಹಾಡು ಕುಡಿತ ಕುಣಿತ-ಛೇ ಈ ಕೊಳಕು ದೇವರುಗಳಿಂದ
ಜಗತ್ತನ್ನ ಚರಂಡಿ ಮಾಡಿದ್ದೀರಲ್ರಯ್ಯಾ! ಅಭಿನಯ ಸಾಕು.
ನನಗೆ ನೋಡಪ್ಪ-ಪ್ರಾರ್ಥನೆ ಬೇಡ, ಅಷ್ಟೋತ್ತರ
ಶತ ಸಹಸ್ರ ನಾಮಾವಳಿ ಬೇಡ. ಸಧ್ಯ ಹೃದ್ಯವಾದ
ಗದ್ಯದಲ್ಲಿ ಮಾತಾಡಿದರೆ ಸಾಕು.
ನಾನು ಯಾರೂಂತ ಗೊತ್ತಾಯಿತಲ್ಲ?
ದೇವರ ವೈರಿ, ನಿನ್ನ ಸಾಕು ತಾಯಿ,
ಸ್ಥಳೀಯ ಹೆಸರು ಶೆಟಿವಿ ಮಾಯಿ.
ನೀ ಯಾರು ಹೇಳು.

ಸಂಜೀವಶಿವ : ಹಿಂದೊಮ್ಮೆ ತಾಯಿಯ ವಾತ್ಸಲ್ಯಕ್ಕೆ ವಾರಸುದಾರನಾಗಿ
ಈಗ ತಾಯಿ ಕೈಬಿಟ್ಟು ತಬ್ಬಲಿಯಾಗಿ, ಮುರಿದ ಮಹಿಮನಾಗಿ,
ಹಳ್ಳಕ್ಕೆ ಬಿದ್ದ ಸಂಜೀವಶಿವ ನಾನು.

ತಾಯಿ : ಅದು ನಿನಗೆ ನೀನೇ ಹಟದಿಂದ ಕೊಟ್ಟುಕೊಂಡ ಶಿಕ್ಷೆ,
ತಾಯಿ ಕೊಟ್ಟುದಲ್ಲ.

ಸಂಜೀವಶಿವ : ನನ್ನದೊಂದು ಭಗ್ನ ಕನಸು ಹೇಳಲೇ ತಾಯಿ?

ತಾಯಿ : ಹೇಳು.

ಸಂಜೀವಶಿವ : ಕಾಡಿನಲ್ಲಿ ತೊರೆಯ ಬಳಿಯೊಂದು ಹಸಿರು ಮರ. ಅದರ ಕೆಳಗೊಂದು
ಗುಡಿಸಲು. ಅಂಗಳದಲ್ಲಿ ಒಂದೆರಡು ಹೂವಿನ ಕಂಟಿ. ಅಲ್ಲಿ ನಾನಿದ್ದೇನೆ,
ರೋಗಿಗಳೊಂದಿಗೆ,
ಒಳಗೆ ರಾಜಕುಮಾರಿ ಮದ್ದರೆಯುತ್ತಿದ್ದಾಳೆ. ನನ್ನ ಗುಡಿಸಲ ಹಾಗೇ
ನನ್ನ ಅಹಂಕಾರವೂ ಚಿಕ್ಕದೇ. ನನ್ನ ಮದ್ದಿನಿಂದ
ಗುಣ ಹೊಂದಿದ ರೋಗಿಗಳು
"ಅಬ್ಬ ಎಂಥ ಒಳ್ಳೆ ವೈದ್ಯ!" ಅಂತಾರೆ. ಅಷ್ಟಕ್ಕೇ ನನ್ನೆದೆ ಉಬ್ಬಿ
ದೇವರನ್ನು ಕಂಡ ಸಾರ್ಥಕತೆಯನ್ನು ಅನುಭವಿಸುತ್ತದೆ.
ಆದರೆ ತಾಯೀ,
ಉಬ್ಬಿದೆದೆಯಲ್ಲಿ ಈಗೇನೂ ಉಳಿದಿಲ್ಲ. ಯಾಕೆಂದರೆ ಒಳಗೆ
ಮದ್ದರೆವ ರಾಜಕುಮಾರಿಯಿಲ್ಲ. ಆದ್ದರಿಂದ ಮದ್ದಿಲ್ಲ.
ಆದ್ದರಿಂದ ರೋಗಿಗಳಿಲ್ಲ. ನನಗೆ ದೇವರೂ ಕಾಣೋದಿಲ್ಲ.
ಈಗ ಬದುಕೋದಕ್ಕೇ ಭಯವಾಗುತ್ತದೆ ತಾಯಿ!

ತಾಯಿ : ಭಯಪಡಬೇಕಾದ್ದು ನ್ಯಾಯವೇ. ಯಾಕೆಂದರೆ ನಿನಗೆ
ಭಯಂಕರವಾದ ಎರಡು ರೋಗಗಳಿವೆ.

ಸಂಜೀವಶಿವ : ನನಗೆ ರೋಗ? ಯಾವವು ತಾಯಿ?

ತಾಯಿ : ರಾಜಕುಮಾರಿ ಮತ್ತು ದೇವರು.

ಸಂಜೀವಶಿವ : ಕೇವಲ ರಾಜಕುಮಾರಿಯ ಜೀವ ಒಂದನ್ನ ಮಾತ್ರ ಉಳಿಸಿಕೊಡು
ಎಂಬ ನನ್ನ ನಿವೇದನೆಯನ್ನು ಹೀಗೆ ತಿರಸ್ಕರಿಸುತ್ತೀಯಲ್ಲಾ ತಾಯಿ.

ತಾಯಿ : ತಿರಸ್ಕರಿಸಲಿಲ್ಲ, ನಿರಾಕರಿಸಿದೆ. ಉತ್ಪ್ರೇಕ್ಷೆ ಮಾಡಬೇಡ.

ಸಂಜೀವಶಿವ : ನನ್ನ ಕಂಡರೆ ಎಷ್ಟೂ ಪ್ರೀತಿಯಿಲ್ಲ ನಿನ್ನಲ್ಲಿ.

ತಾಯಿ : ಹೌದು ನಿನ್ನ ದೌರ್ಬಲ್ಯಗಳನ್ನ ಪ್ರೀತಿಸಲಾರೆ ನಾನು, ನೀನು ಮಗನಾದರೂ.

ಸಂಜೀವಶಿವ : ಹುಚ್ಚು ಹಿಡಿಸುವಂತೆ ತರ್ಕಗಳ ಹಾದಿ ತಪ್ಪಿಸುತ್ತೀ ತಾಯಿ.

ತಾಯಿ : ಸಾವವರಿಗೆ ಜೀವ ಕೊಡುವೆನೆಂಬ ಜಂಬಗಳ ತೇಗುತ್ತಿರುವೆ,
ಅದಕ್ಕೇ ನಿನ್ನ ಕಾರಣ ಶಕ್ತಿ ಕುಗ್ಗಿದೆ, ಮಗನೇ.

ಸಂಜೀವಶಿವ : ನಿನಗೆ ಕರುಳಿಲ್ಲ ಗೊತ್ತು.
ಆದರೂ ನಿನ್ನಲ್ಲಿಯ ಯಾವುದೋ ವಿಶೇಷಕ್ಕೆ
ಮಾರುಹೋಗಿದ್ದೇನೆ. ಅದೇನೆಂದು ನಾನರಿಯೆ.
ಬಹುಶಃ ನೀನೊಂದು ಭಯಾನಕವಾದ,
ಆದಿ ಅಂತ್ಯಗಳಿರದ ಏಕಾಂತ!
ಗಾಳಿ ಆಲುಗದ ಬೆಳಕು ನಾಟದ
ನಿಶ್ಶೂನ್ಯ ಬಯಲು ನೀನು!

ತಾಯಿ : ಇದು ನೀನು ಮಾಡಿದ, ನಿನ್ನ ಸಾಮರ್ಥ್ಯ ಮತ್ತು ಶಬ್ದಗಳಿಗೆ ನಿಲುಕಿದ
ನನ್ನ ವರ್ಣನೆ ಮಗನೆ, ನನ್ನ ನಿಜವಲ್ಲ.
ಇಷ್ಟಾಗಿ ವರ್ಣನೆ ಮಾಡೆಂದು ನಿನ್ನನ್ನ ನಾನು ಕೇಳಲೂ ಇಲ್ಲ.
ಜೀವನದ ಬಗ್ಗೆ ನಾವಿಬ್ಬರೂ ಹಸಿದವರು:
ಹೆಚ್ಚು ಹೆಚ್ಚು ಜೀವರನ್ನು ಬದುಕಿಸಿ
ನೀನು ಸಂತೋಷಪಡುತ್ತಿ.
ಹೆಚ್ಚು ಹೆಚ್ಚು ಜೀವರನ್ನು ಮುಕ್ಕಿ ನಾನು ಆನಂದಪಡುತ್ತೇನೆ.
ನಿನ್ನ ಹಸಿವುಸುಲಭವಾದದ್ದರಿಂದ ನನಗೆ ಅರ್ಥವಾಯಿತು. ನನ್ನ ಹಸಿವು
ಉಗ್ರ ಮಗನೆ! ಈ ಪುಟ್ಟ ಬಾಂಧಿನಂಥ ಕ್ಷಿತಿಜದೊಳಗಿನ
ಲೋಕದವನು ನೀನಾದ್ದರಿಂದ ನಿನ್ನ ಹಸಿವು ಅರ್ಥವಾಗುತ್ತಿರಬಹುದು.
ನನ್ನದು ಕ್ಷಿತಿಜಗಳೇ ಇಲ್ಲದ ಲೋಕ ಮಗನೆ. ಆದ್ದರಿಂದಲೇ
ನನ್ನ ಹಸಿವು ಕೇವಲ ಕ್ರೂರವಾಗಿ ಮಾತ್ರ ನಿನಗೆ ಕಂಡೀತು.

ಸಂಜೀವಶಿವ : ನನ್ನ ಕಣ್ಣಿಗೆ
ನೀನು ಕಾಣಿಸುತ್ತಿರುವುದೇ ಆಶ್ಚರ್ಯವಲ್ಲವೇ ತಾಯಿ?

ತಾಯಿ : ಹೌದು. ನಿನ್ನ ಕಣ್ಣಿಂದು ನನ್ನ ನಾನು ನೋಡಿಕೊಳ್ಳುತ್ತಿದ್ದೇನೆ,
ಅದಕ್ಕೇ ನಿನಗೆ ಕಾಣಿಸುತ್ತಿದ್ದೇನೆ ಮಗನೆ. ಈಗ
ನನಗೆ ಪ್ರಶ್ನೆಗೆ ಉತ್ತರ ಕೊಡು.
ಸಂಜು ಹೂಡಿದ್ದೀರಂತೆ ನನ್ನ ವಿರುದ್ಧ, ನೀನು ಮತ್ತು ಮದನ ತಿಲಕ,
ಅದೇನೆಂದು ಕೇಳಬಹುದೆ?

ಸಂಜೀವಶಿವ : ಅಗತ್ಯವಾಗಿ. ತಾಯ ಕೃಪೆ ಇಲ್ಲದೆ ನನ್ನ ವೈದ್ಯವೃತ್ತಿಗೆ
ಅರ್ಥವಿದೆಯೆ, ಇಲ್ಲವ ಅಂತ ಚಿಂತನೆ ಮಾಡುತ್ತಿದ್ದೆವು.

ತಾಯಿ : ವೈದ್ಯವೃತ್ತಿಗೆ ತಾಯಿಯಿಂದ ಬೇಕಾದಷ್ಟು ಪ್ರಯೋಜನಗಳಂತೂ ಇವೆ.

ಸಂಜೀವಶಿವ : ಹಾಗೇ ತಾಯಿಗೂ ವೈದ್ಯವೃತ್ತಿಯಿಂದ ಬೇಕಾದಷ್ಟು ಸಹಾಯವಿದೆ.
ಉದಾಹರಣೆಗೆ: ತಾಯಿ ತಗೋಬೇಕಾದ ಜೀವಗಳನ್ನ ವೈದ್ಯರೇ
ಕೊಂದುಹಾಕಿಬಿಡುತ್ತಾರೆ.

ತಾಯಿ : ಆದರೆ ತಾಯಿ ಮಾತ್ರ ಎಂದೂ ಕೈಯಾರೆ ಕೊಲ್ಲುವುದಿಲ್ಲ.
ಎನ್ನುವುದು ಗೊತ್ತಿರಲೇ ಬೇಕಲ್ಲ ನಿನಗೆ?

ಸಂಜೀವಶಿವ : ಭೀತಿ ಮಾತ್ರ ತಾಯಿಯದೇ ಅಲ್ಲವೆ?

ತಾಯಿ : ಭೀತಿಯಂಥ ಭಾವ, ಅನುಭಾವ ಇನ್ಯಾವುದಿದೆ ಮಗನೆ?
ನನ್ನ ಭೀತಿಯಲ್ಲಿ
ಚರಾಚರವೆಲ್ಲ ಹ್ಯಾಗೆ ಸೃಜನಶೀಲವಾಗುತ್ತದೆ ನೋಡು:
ನಿನ್ನ ತತ್ವಜ್ಞಾನ ಸಿದ್ಧಾಂತ
ಧರ್ಮ ವೇದಾಂತ
ಹುಟ್ಟಿದ್ದು ನನ್ನ ಭೀತಿಗೆ
ಏನಿಲ್ಲದಲ್ಲಿ ಏನೆಲ್ಲ ಹುಟ್ಟಿಸುತ್ತದೆ ಭೀತಿ!
ಕೊಂಬು ಕೋರರೆಹಲ್ಲಿನ ಕಥೆ
ಅನುಗ್ರಹಿಸುವ ಅಮರಾವತಿಯ ಕಥೆ,
ಮರುಗುವ ಧರೆಯ ವ್ಯಥೆ,
ಹುಟ್ಟಿಸಿದೆ ನೋಡು ಸಾವಿನ ಭಯ
ಎಷ್ಟೊಂದು ಚರಿತ್ರೆಯ!

ಸಂಜೀವಶಿವ : ಆದರೂ ಇದೆ ಇಲ್ಲೊಂದು ಎಲ್ಲಎಲ್ಲವ ಮೀರಿ
ಅಲ್ಲಮವಾದದ್ದು,
ಕಾಡಿನಲ್ಲಿ ಹರಿವ ನೀರಿನ ರುಚಿ ಮತ್ತು ಸ್ವಾತಂತ್ರ್ಯವುಳ್ಳದ್ದು.
ಹಕ್ಕಿಗಳ ಹೃದಯಕ್ಕೆ ಹಾಡು, ಮಕ್ಕಳ ಕಣ್ಣಿಗೆ ಕನಸು
ತುಂಬುವಂಥಾದ್ದು.
ಭಯಕೆ ಅಭಯವ ನೀಡಿ ನಿನ್ನನೆದುರಿಸುವ ಶಕ್ತಿ
ಕೊಡುವಂಥಾದ್ದು
ಶಿವಲಿಂಗವೆಂಬುದು!

**ತಾಯಿ : ಶಿವಲಿಂಗದ ವಾರ್ತೆಯೆಂಬುದು**

**ವಚನ ರಚನೆ ಮಗನೆ. ಹೋಗಲಿ,**

**ಏನಂತ ಹೊಗಳುವಿರಿ ಶಿವನ?**

**ಕಣ್ಣಲ್ಲಿ ಕಿಡಿಯನ್ನಿಟ್ಟುಕೊಂಡವನೆಂದೆ?**

**ನಿಶಾಚರ ಸ್ಮಶಾನವಾಸಿ. ಹೆಣಗಳ ತಿಂಬವನೆಂದೆ?**

**ರಾತ್ರಿಯಂಥ ಜಡೆಯಲ್ಲಿ ಚಂದ್ರನ ಮಡಗಿಕೊಂಡವನೆಂದೆ?**

**ಕೊಲುವ ದೇವರೆಂದೆ?**

**ಹಸಿರು ಧರ್ಮದ ಪಾರ್ವತಿಯ ಪತಿಯೆಂದೆ?**

**ಕುಣಿವ ದೇವರೆಂದೆ?**

**ಹಸಿರು ಧರ್ಮದ ಪಾರ್ವತಿಯ ಪತಿಯೆಂದೆ?**

**ಕುಣಿವ ದೇವರೆಂದೆ?**

**ಎಲವೆಲವೋ ಮಗನೇ,**

**ಆರುಮೂರೊಂಬತ್ತು ಪೆಟ್ಟಿನ ಬೆಸತಾಳಿನಲ್ಲಿ ಕುಣಿದರೆ ನಾನು**

**ಜಂಗಿನ ಗಲಿರು ನಿಶ್ಯಬ್ದವಾಗಿ**

**ನೆಲ ಕಚ್ಚಿ ಬಿದ್ದಿರುತಾನೆ ಶಿವ! ತೋರಿಸಲೆ?**

**ಅಗೊ ನಿನ್ನ ಮಿತ್ರನ ನಾಡಾಡಿ ನಾಟಕ ನಡೆಯುತ್ತಿದೆ ನೋಡು:**

**ಮಾರ್ಕಂಡೇಯ ಶಿವಲಿಂಗದ ತಬ್ಬಿ ಕಾಪಾಡೆಂದು ಹಾಡಿ**

**ದೊಡ್ಡ ಸಂಭಾಷಣೆ ಹೇಳುತ್ತಿದ್ದಾನೆ. ಕೇಳು:**

(ತಾಯಿ ಈಗ ಅರಮನೆಯಲ್ಲಿ ಇದೇ ಕಾಲದಲ್ಲಿ ನಡೆಯುತ್ತಿರುವ ಮದನ ತಿಲಕನ "ಮಾರ್ಕಂಡೇಯ ವಿಜಯ" ನಾಟಕದ ದೃಶ್ಯ ತೋರಿಸುತ್ತಾಳೆ. ಶಿವಲಿಂಗವ ತಬ್ಬಿರುವ ಮಾರ್ಕಂಡೇಯ. ಅವನ ಕುತ್ತಿಗೆ ಪಾಶ ಹಾಕಿ ಎಳೆಯುತ್ತಿರುವ ಯಮ.)

ಮಾರ್ಕಂಡೇಯ : ಜಗನ್ನಿಯಾಮಕನಾದ ಪರಶಿವ ಪರಮಾತ್ಮನೇ, ನಿನ್ನ ಭಕ್ತ ಶಿರೋಮಣಿಯಾದ
ಈ ಮಾರ್ಕಂಡೇಯನ ದುಃಖಸಾಗರವನ್ನು ವರ್ಣನೆ ಮಾಡುವುದು
ಸಾವಿರ ನಾಲಿಗೆಯ ಆದಿಶೇಷನಿಗೂ ಅಸಾಧ್ಯವೇ ಸೈ. ನಿನ್ನನ್ನು ದೃಢವಾಗಿ
ನಂಬಿ ಮಾಡಿದ ಶಿವಭಕ್ತಿ ಶಿವಾಚಾರಗಳು ಇಂತೀಪರಿ ನೀರಲ್ಲಿ ಹುಣಸೇ
ಹಣ್ಣು ತೊಳೆದಂತೆ ವ್ಯರ್ಥವಾಗಿ ಖರ್ಚಾಗಿ ಹೋದುದನ್ನು ನೋಡಿದರೆ
ಇನ್ನು ಮೇಲೆ ಯಾರೂ ನಿನಗೆ ಕಾಸಿನ ದೀಪ ಹಚ್ಚೋದಿಲ್ಲ, ಕರವೆತ್ತಿ
ಕೈಮುಗಿಯೋದಿಲ್ಲ ಎಂಬುದು ನಿನ್ನ ಗಮನಕ್ಕೆ ಬಂದಿದೆಯೆ ತಂದೆ?
ಅಯ್ಯೋ ಪರಶಿವ ಪರಮಾತ್ಮನೇ ಕಠೋರನಾದ ಕಾಲನು ನನ್ನ
ಆಯುಷ್ಯ ತೀರಿತೆಂದು ತನ್ನಯಮಪಾಶವನ್ನು ಕತ್ತಿಗೆ ಬಿಗಿದು ಎಳೆಯುತ್ತಿದ್ದಾನೆ.

ಶಿವನೇ ಶಂಭೋ ಮಹಾದೇವಾ ಈ ಕಾಲನಿಂದ ನನ್ನನ್ನು ಪಾರುಮಾಡಿ
ಭಕ್ತ ರಕ್ಷಕ, ಶಿಷ್ಟಪಾಲಕ ಎಂಬ ನಿನ್ನ ಬಿರುದನ್ನು ಉಳಿಸಿಕೊಳ್ಳಲಾರೆಯಾ?
ಶಿವ ಶಿವ ಅಯ್ಯೋ ಮಹಾದೇವಾ?

ತಾಯಿ : ಇಗೊ ನಿನ್ನ ಶಿವನ ವೇಷಧಾರಿ ಶಿವಲಿಂಗವ ಸೀಳಿ
ತ್ರಿಶೂಲವ ಝಳಪಿಸುತ್ತ ಪ್ರತ್ಯಕ್ಷನಾದ ನೋಡು: ಭಲೆ ಶಿವನೆ!
ಈಗವನು ನನ್ನ ಭಂಟನನ್ನು ಕೊಲ್ಲಬೇಕಲ್ಲವೆ? ತಗೊ
(ಕುಂತಲ್ಲಿಂದಲೇ ಏಟು ಹಾಕುವಳು. ಶಿವನ ಪಾತ್ರಧಾರಿ ಸಾಯುವನು.)
ಅರೆ ಕಾಪಾಡಬೇಕಾದ ಶಿವನೇ ಸತ್ತುಬಿದ್ದನೆ!
ತನ್ನವೇಷ ಧರಿಸಿದ ನಟನನ್ನಾದರೂ ನಿನ್ನ ಶಿವ ಕಾಪಾಡಬೇಕಿತ್ತಲವೆ?

ಸಂಜೀವಶಿವ : ಶಿವ ಜಾದೂಗಾರನಲ್ಲ ತಾಯಿ.

ತಾಯಿ : ಮೂರ್ಖ ಇದು ಜಾದೂಗಾರಿಕೆಯಲ್ಲ. ನಡೆದ ನಿಜ, ಹೋಗಿ ನೋಡು.

ಸಂಜೀವಶಿವ : ಮದನತಿಲಕ ಸತ್ತನೆ?

ತಾಯಿ : ಹೀಗೇ ನಿನ್ನ ಮೂವತ್ತು ಮೂರು ಕೋಟಿ ದೇವತೆಗಳನ್ನು ಒಂದೆರಡು
ತುತ್ತಿಗೇ ಕಬಳಿಸಿದವಳು ನಾನು.

ಸಂಜೀವಶಿವ : ಇಷ್ಟೊಂದು ಶಕ್ತಿವಂತಳು, ರಾಜಕುಮಾರಿಯನ್ನು ಕಬಳಿಸುವುದು ಕಷ್ಟವೆ?

ತಾಯಿ : ಅದನ್ನು ನೀನು ಹೇಳಬೇಕು. ನಿನಗೆ ನನ್ನ ಚೆಲ್ಲಾಟಗಳ ಒಂದು ಚಿಲ್ಲರೆ
ಮಾದರಿ ತೋರಿಸೋಣವೆಂದು ಹೀಗೆ ಮಾಡಿದೆನಷ್ಟೆ.

ಸಂಜೀವಶಿವ : (ದುಃಖದಿಂದ) ಅಯ್ಯೋ ಮದನತಿಲಕ, ನನ್ನ ತಾಯಿ ತನ್ನ ಕ್ರೂರ
ಆನಂದಗಳನ್ನು ಕಾರಿಕೊಂಡ ಫಲವಾಗಿ ನೀನು ಸಾಯಬೇಕಾಯಿತೆ!
ತಾಯಿ, ನೀನು ಯಾರೆಂದು ಹೇಳಲೆ:
ಹಸಿ ಹಸೀ ಜೀವಗಳಿಗಾಗಿ ಸದಾ ಬಾಯ್ದೆರೆದ ನರಕ ನೀನು!

ತಾಯಿ : ಸಾಲದು ಸಾಲದು ಮಗಾ, ನೀನು ಕೋಟಿ ಕಲ್ಪನೆಗಳಲ್ಲಿ
ಕೋಟಿ ಸಲ ವರ್ಣನೆ ಮಾಡಿದರೂ ನನ್ನ ಬಗ್ಗೆ ಹೇಳಬೇಕಾದ್ದು
ಇನ್ನೂ ಉಳಿಯುತ್ತದೆ. ಅದೇ ನನ್ನ ಗಮ್ಮತ್ತು.
ಮಗನಾಗಿ ನಿನಗೆ ನಾನು ಎಲ್ಲರಿಗಿಂತ ಹೆಚ್ಚು ಅರ್ಥವಾಗಿದ್ದರೂ
ನನ್ನ ಬಗ್ಗೆ ಈತನಕ ಜ್ಞಾನಿಗಳೆಂಬುವರು ಹೇಳಿದ್ದಕ್ಕಿಂತ ಹೆಚ್ಚಿಗೇನೂ
ಹೇಳಲಿಲ್ಲ ನೀನು. ನೋಡಿದೆಯಾ ನಿನ್ನ ಶಿವ
ಹ್ಯಾಗೆ ಬಿದ್ದಿದ್ದಾನೆ? ನಿನ್ನನ್ನು ದಾರಿಗೆ ತರಲು
ಇದು ಬೇಕಾದಷ್ಟಾಯಿತು. ಇದು ತೀವ್ರತರ ದುಃಖ ಕೊಡದಿದ್ದಲ್ಲಿ
ನಿನ್ನ ಆತ್ಮೀಯರ್ಯಾರಿದ್ದಾರೆ ಹೇಳು. ಅವರಿಗೇ ಚಿತ್ರಹಿಂಸೆ ಕೊಡೋಣ.

ಸಂಜೀವಶಿವ : ನನ್ನ ಅತ್ಯಂತ ಆತ್ಮೀಯಳೆಂದರೆ ನನ್ನ ತಾಯಿ.

ತಾಯಿ : ನಿಜ ಹೇಳಿದೆ ಮಗನೆ. ಇದನ್ನೆಲ್ಲ ನಾನೂ ಅನುಭವಿಸುತ್ತಿದ್ದೇನೆ. ನಿನಗಾಗಿ!
ನನ್ನನ್ನ ಅರ್ಥ ಮಾಡಿಕೊಳ್ಳೋದಕ್ಕೆ ನಿನಗಿದು ಮಾರ್ಗದರ್ಶಿಯಾಗಬೇಕು.
ನೆನಪಿದೆಯಲ್ಲ? ನಾಳೆ ಅಸ್ತಮಾನದ ಒಳಗೆ ರಾಜಕುಮಾರಿಯ ಕತ್ತಿನಲ್ಲಿಯ
ಮದ್ದಿನ ಬಳ್ಳಿಯ ಕಿತ್ತುಹಾಕು ಅವಳನ್ನು ನನಗೆ ಒಪ್ಪಿಸಬೇಕು. ನಾಳೆಯೇ
ಅವಳ ಮದುವೆ ಮತ್ತು ಕೊನೆಯ ಗಳಿಗೆ; ಮುಹೂರ್ತ ನಿಶ್ಚಯಿಸಿಯಾಗಿದೆ;
ನಾನು ಕಾಯುತ್ತೇನೆ.

ಸಂಜೀವಶಿವ : ಕ್ಷಮಿಸು, ಅದಾಗುವುದಿಲ್ಲ ತಾಯಿ.

ತಾಯಿ : ಅಂದರೆ ನೀನೇನು ಮಾತಾಡುತ್ತಿದ್ದೀ-ಗೊತ್ತ ನಿನಗೆ?

ಸಂಜೀವಶಿವ : ಸರಿಯಾಗಿ ಗೊತ್ತು. ಇನ್ನೊಮ್ಮೆ ಹೇಳುತ್ತೇನೆ ಕೇಳು ತಾಯಿ:
ನಾನೊಮ್ಮೆ ರೋಗಿಯ ನಾಡಿ ಹಿಡಿದು ವೈದ್ಯ ಮಾಡಿದ ಮೇಲೆ
ರೋಗಿ ಉಳಿಯಲೇಬೇಕೆಂಬುದು ನೀನೇ ನನಗೆ ಕೊಟ್ಟ ವರ.
ಅದನ್ನು ಉಳಿಸಿಕೊಳ್ಳೋದೂ ಬಿಡೋದೂ ನಿನಗೆ ಬಿಟ್ಟದ್ದು.
(ಹೊರಡುವನು)

* * *

## ಗ್ರಹಚಾರ

(ಶಿವನ ವೇಷದಲ್ಲಿ ಮಂಜರಿ ಸತ್ತು ಬಿದ್ದಿದ್ದಾಳೆ. ಮಾರ್ಕಂಡೇಯನ ವೇಷದ ಮದನತಿಲಕ ಅಳುತ್ತಿದ್ದಾನೆ.)

ಮದನತಿಲಕ : ಮಂಜರೀ ನನ್ನ ಮಂಜರಿ, ಉಳಿದಿರೋ ಒಬ್ಬಳೇ ಹೆಂಡತಿ ನೀನೂ ಹೋದ ಮೇಲೆ
ಬದುಕೋದಕ್ಕೆ ನನಗೇನೂ ಉಳಿದಿಲ್ಲವಲ್ಲೆ!
ನಿನ್ನ ಹೆಸರೇ ನನ್ನ ಬಾಯಿಗೆ ಎಷ್ಟೊಂದು ರುಚಿಯಾಗಿತ್ತು.
ಕೇಳೋದಕ್ಕೆ ಕಿವಿಗೆ ಹಿತಕರವಾಗಿತ್ತು.
ಕೇಳೋದಕ್ಕೆ ಕಿವಿಗೆ ಹಿತಕರವಾಗಿತ್ತು.
ಇನ್ನು ಯಾರನ್ನ ಆ ರೀತಿ ಕರೆಯಲೆ?
ಆಹಾ ಮಂಜರೀ… ಎಂಥಾ ಭಾಗ್ಯವತಿಯೇ ನೀನು!
ಹುಟ್ಟು ಕಲಾವಿದೆ,
ನಾಟಕ ಆಡ ಆಡುತ್ತಲೇ ವೀರಮರಣ ಪಡೆದೆಯಲ್ಲೆ!
ಹರಹರಾ ಅಂತ ನಿನ್ನ ವೇಷ ಕಟ್ಟಿದವಳನ್ನೇ

ಹರಕೊಂಡು ತಿಂದಿಯಲ್ಲೋ ಶಿವನೇ!

(ಸಹಾನುಭೂತಿ ಸೂಚಿಸಲು ಮದರಂಗಿ ಬಂದು ದೂರ ನಿಲ್ಲುತ್ತಾಳೆ. ಮದನ ತಿಲಕ ಅವಳನ್ನು ನೋಡಿ ಅಳುತ್ತ ಮಾತಾಡುತ್ತಾನೆ.)

ಬಾಮ್ಮಾ ಮದರಂಗಿ, ಸಮಾಧಾನ ಹೇಳಲಿಕ್ಕೆ ಬಂದಿದ್ದೀಯಲ್ಲವೆ?

ನನ್ನನ್ನ ಕಟ್ಟಿಕೊಂಡದ್ದರಿಂದ ಮುತ್ತೈದೆ ಸಾವುಕಂಡಳು ಪುಣ್ಯವಂತಿ!

ಯಾರಿಗುಂಟು ಯಾರಿಗಿಲ್ಲ!

ಹತ್ತಿರ ಬಾಮ್ಮಾ ನೋಡು, ಹ್ಯಾಗೆ ಮಲಗಿದ್ದಾಳೆ ಮಾರಾಯ್ತಿ?

ನೀನಾದರೂ ಈ ಹತಭಾಗ್ಯನ ಹತ್ತಿರ ಬಂದು

ಸಹಾನೂಭೂತಿ ತೋರಿಸಬಾರದೆ? ದುಃಖತಪ್ತವಾದ

ಕಣ್ಣೀರೊರೆಸಿ ನನ್ನ ಮುಖವನ್ನ ನಿನ್ನ ಹೃದಯಸ್ಥಲದಲ್ಲಿಟ್ಟುಕೊಂಡು

ಸಮಾಧಾನ ಹೇಳಿದರೆ ಬೇಡ ಅನ್ನುತ್ತೇನೆಯೇ?

(ಮದರಂಗಿ ಬಂದು ಕೂರುವಳು. ಮಂಜರಿಯ ಭೂತ ಅಂದರೆ ಹೆಣ ಮದರಂಗಿಯನ್ನು ನೋಡಿ ಎದ್ದು ಕೂತು ಮತ್ಸರದಿಂದ ಉರಿದುರಿದು ಸಂಕಟಪಡುತ್ತದೆ. ಭೂತರೂಪದಲ್ಲಿರುವುದರಿಂದ ಇಬ್ಬರಿಗೂ ಅವಳು ಕಾಣಿಸುವುದಿಲ್ಲ. ಸಂಜೀವಶಿವ ಬರುವವರೆಗಿನ ಇವರ ಸಂಭಾಷಣೆ ಶೋಕದ ಧಾಟಿಯಲ್ಲೇ ನಡೆಯುತ್ತದೆ. ಭೂತ ಸಕಾಲಿಕ ಪ್ರತಕ್ರಿಯೆ ವ್ಯಕ್ತಪಡಿಸುತ್ತಲೇ ಇರುತ್ತದೆ.)

ಮದರಂಗಿ : ಅಯ್ಯೋ ಪಾಪ, ಎಂಥಾ ಪುಣ್ಯಾತ್ಗಿತ್ತಿ. ಹೆಂಗ ಸತ್ತಳಲ್ಲ, ದುರ್ದೈವ....

ಮದನತಿಲಕ : ಎಂಥಾ ದುರ್ದೈವ ಅಂತೀಯಮ್ಮ! ಇವಳು ಸತ್ತ ದಿನ ಒಬ್ಬ ಮಂತ್ರಿ
ಸಾಯಲಿಲ್ಲ, ಒಬ್ಬ ಕವಿ ಸಾಯಲಿಲ್ಲ, ಒಬ್ಬ ರಾಜ ಸಾಯಲಿಲ್ಲ...
ಇದಕ್ಕಿಂತ ದುರ್ದೈವ ಬೇಕೆ? ದಿನಾಲು ಕನಸು ಮನಸಿನಲ್ಲಿ ಮದರಂಗಿಯನ್ನೇ
ಕನವರಿಸುತ್ತೀಯಲ್ಲಾ ಅಂತ ಅಸೂಯೆಯಿಂದ ಸತ್ತಳು ಕಣಮ್ಮ.

ಮದರಂಗಿ : ಸುಳ್ಳು.

ಮದನತಿಲಕ : ಹೆಣದ ಮುಂದೆ ಸುಳ್ಳು ಹೇಳ್ತಾರೇನೇ ಯಾರಾದರೂ?

ಮದರಂಗಿ : ಹಾಂಗಿದ್ದರೆ ನನ್ನ ಬಿಟ್ಟು ಅವಳನ್ಯಾಕೆ ಕಟ್ಟಿಕೊಂಡೆ?

ಮದನತಿಲಕ : ನನ್ನನ್ನ ಕಟ್ಟಿಕೊಂಡ ಒಂಭತ್ತನೆಯವಳು ಹೀಗೆ ಸಾಯಬೇಕೆಂತ ಗ್ರಹಚಾರ
ಗ್ರಂಥದಲ್ಲಿತ್ತು ಕಣೇ! ಅದಕ್ಕೇ ಮೊದಲು ಪೀಡೆ ತೊಲಗಲಿ ಅಂತ
ಅವಳನ್ನ ಕಟ್ಟಿಕೊಮಡೆ. ಇಲ್ಲದಿದ್ದಲ್ಲಿ ನೀನೇ ಹೀಗೆ ಸಾಯಬೇಕಾಗಿತ್ತು
ಗೊತ್ತ? (ಈಗ ಭೂತದ ಪ್ರತಿಕ್ರಿಯೆ ತೀವ್ರವಾಗುತ್ತದೆ)

ಮಂಜರಿಯಹೆಣ : ಎಲ ಎಲಾ ಅಯೋಗ್ಯ ನನಮಗನೆ!

ಮದನತಿಲಕ : ನೀನಿನ್ನೂ ನನ್ನ ಮಾತನ್ನ ನಂಬುತ್ತಿಲ್ಲ ಅಲ್ಲವೆ? ಅಯ್ಯೋ
ಶಿವಶಿವಾ ಹೀಗೆ ವಿಶ್ವಾಸಹೀನನಾಗಿ ಬದುಕೋದಕ್ಕಿಂತ

ಸಾಯೋದೇ ಮೇಲಲ್ಲವೆ? ಮಂಜರಿಯ ಬದಲು
ನನಗಾದರೂ ಸಾವನ್ನು ತರಬಾರದಿತ್ತೇ?....

ಮದರಂಗಿ : ನೀನೇನೋ ಸಾಯಬೇಕೆಂತೀ. ಆದರೆ ಸಾವಿನ ತಾಯಿ ಪರವಾನಿಗಿ
ಕೊಡಬೇಕಲ್ಲ ಮುದುಕಾ.

ಮದನತಿಲಕ : ಮೊನ್ನೆ ಕನಸಿನಲ್ಲಿ ಅವಳೂ ಬಂದಿದ್ದಳಮ್ಮ
"ಕೊಂದು ಬಿಡು ತಾಯೀ" ಅಂದೆ
"ಇನ್ನೊಂದು ಹುಡುಗಿಯನ್ನ ಆಳಿ ಬಾ ಮಗನೇ"
ಅಂದಳಲ್ಲಮ್ಮ.

ಮದರಂಗಿ : ಹುಡುಗಿ ಸಿಕ್ಕಬೇಕಲ್ಲೋ ಮುದುಕಾ ನಿನಗೆ.

ಮದನತಿಲಕ : ದೊಡ್ಡ ಮನಸ್ಸು ಮಾಡಿ ನೀ ಸಿಕ್ಕರೂ ಸಾಕಮ್ಮ ನನಗೆ.

ಮದರಂಗಿ : ಮುದುಕಾ ನಾ ಹುಡುಗಿ ಅಲ್ಲ, ನೀ ಹುಡುಗ ಅಲ್ಲ.

ಮದನತಿಲಕ : ನೀನೇ ದೊಡ್ಡಮನಸ್ಸು ಮಾಡಿ ಬಂದರೆ ನಾನು ಹುಡಗನೋ
ಮುದುಕನೋ ಅಂತ ನಿನಗೇ ತಿಳಿಯುತ್ತದೆ. ಇಬ್ಬರೂ ಪ್ರೀತಿಸುತ್ತ
ಇದ್ದರೆ ನನಗೆ ನೀನೇ ನಗೆಮಾರಿ ಪೋರಿ. ನಿನಗೆ ನಾನೇ ಜವಾರಿ ಹೋರಿ!

ಮದರಂಗಿ : ಅವ್ ಶಿವನೇ! ಏನ್ ಚಂದ ಮಾತಾಡತ್ತೈತಿದು! (ಸಂಜೀವಶಿವ ಬರುವನು)

ಸಂಜೀವಶಿವ : (ಆಶ್ಚರ್ಯದಿಂದ) ಅಯ್ಯಾ ನೀನಿನ್ನೂ ಜೀವಂತವಾಗಿದ್ದೀಯಾ?

ಮದನತಿಲಕ : ಯಾಕೆ ನಾನು ಸಾಯಬೇಕಿತ್ತ?

ಸಂಜೀವಶಿವ : ನಿನ್ನ ರಾತ್ರಿ ನೀನು ಶಿವನ ವೇಷ ಕಟ್ಟಿರಲಿಲ್ಲವ?

ಮದನತಿಲಕ : ಕಟ್ಟಿದ್ದೆ. (ಮಂಜರಿಯ ಹೆಣ ಎದ್ದು ಬಂದು "ಸುಳ್ಳು ಹೇಳ್ತೀಯಾ ಕಳ್ಳ ನನ ಮಗನೇ"
ಎಂದು ಮದನತಿಲಕನ ಕೆನ್ನೆಗೆ ತಿವಿಯುತ್ತದೆ.)

ಮದನತಿಲಕ : ಇಲ್ಲಿಲ್ಲ. ನಾನಲ್ಲ ಶಿವನ ವೇಷ ಕಟ್ಟಿದ್ದು, ಮಂಜರಿ.
(ಈಗ ಮಂಜರಿಯ ಭೂತ ಹೋಗಿ ಮತ್ತೆ ಹೆಣವಾಗುವುದು.)

ಸಂಜೀವಶಿವ : ಕೊನೇ ಕ್ಷಣದಲ್ಲಿ ಬದಲಿಸಿದೆಯಾ?

ಮದನತಿಲಕ : ಹೌದು.

ಸಂಜೀವಶಿವ : ಯಾಕೆ?

ಮದನತಿಲಕ : ಮಂಜರಿ ಹಟ ಹಿಡಿದಳು ಸ್ವಾಮಿ. ಶಿವನ ವೇಷ ಕಟ್ಟಿದರೇ ನಾನು
ಬದುಕೋದು, ಇಲ್ಲದಿದ್ದರೆ ಕೆರೆಯೋ ಬಾವಿಯೋ ಬೀಳ್ತೀನಿ ಅಂತ
ಹೆದರಿಸಿದಳು ಮಾರಾಯಾ.
(ಮಂಜರಿಯ ಹೆಣ ಇವನು ಸೃಷ್ಟಿಸುತ್ತಿರುವ ಸುಳ್ಳು ಕೇಳಿ ಬೆರಗಾಗಿ "ಅಬ್ಬಾ"
ಎಂದು ಬಾಯಿ ಮುಚ್ಚಿಕೊಳ್ಳುವುದು.)
"ಲೇ ಮಂಜರಿ ನಿನಗೆ ಶಿವನ ಸಂಭಾಷಣೆ ಮತ್ತು ಹಾಡು ಬರೋದಿಲ್ಲ.
ಹಟ ಹಿಡೀಬೇಡವೇ" ಅಂದೆ. ಏನೆಂದರೂ ಕೇಳಲಿಲ್ಲ.
ಕೊನೆಗೆ ವೇಷ ಬದಲಿಸಿ ಮಂಜರಿಗೆ ಶಿವನ ವೇಷ ಕಟ್ಟಿ ನಾನು
ಮಾರ್ಕಂಡೇಯನಾದೆ. ಮುಂದೆ ಶಿವ ಸತ್ತುಬಿದ್ದಾಗ "ಓಹೋ!" ಅಂದೆ.
ಇಷ್ಟೆ ಸ್ವಾಮಿ ನಡೆದದ್ದು.

ಮಂಜರಿಯ ಹೆಣ : (ಎದ್ದು ಬಂದು) ಎಲಾ ಕಳ್ಳ! ನೋಡಿದಿರಾ ಸಮಯಕ್ಕೆ ಸರಿಯಾಗಿ ಹ್ಯಾಗೆ ಗಾಳ ಹಾಕಿ ತಗೀತಾನೆ ಸುಳ್ಳುಗಳನ್ನ! ಲೋ ಅಡ್ಡ ಹುಟ್ಟಿದವನೆ ಸುಳ್ಳು ಬೊಗಳ್ತೀಯಾ? ಇಷ್ಟೆ ಸ್ವಾಮಿ ನಡೆದದ್ದು; ಇವನು ಶಿವ ನಾನು ಮಾರ್ಕಂಡೇಯನಾಗಿ ಇನ್ನೇನು ಆಟ ಸುರುವಾಗಬೇಕು; ಅಷ್ಟರಲ್ಲಿ ಯಾವಳೋ ಒಬ್ಬ ಸೇಡುಮಾರಿ ಬಂದಳು. ಅವಳ ಮುಖ ಕತ್ತಲೆಗಿಂತ ಕಪ್ಪಗಿತ್ತು, ಕುಡುಗೋಲಿನಂಥ ಕೋರೆ ಹಲ್ಲಿತ್ತು. ಕೊಂಬೂ ಇದ್ದಂಗಿತ್ತು. ನೆತ್ತರುಗಣ್ಣು ಕಿಸಿದು ಕೆಂಚು ಮೀಸೆ ಕೆದರಿ, ಮೃಗದ ನೆಗೆತ ನೆಗೆಯುತ್ತ ಬಂದಳು. "ಶಿವ ನೀನೇ ಏನಯ್ಯಾ?" ಅಂದಳು. ಅಷ್ಟಕ್ಕೇ ಈ ಶಿವನ ಒಳಚಡ್ಡಿ ಒದ್ದೆಯಾಯ್ತು ನೋಡಿ. ಇವನು ಹೆದರುತ್ತ "ದೇವೀ ನೀನ್ಯಾರು, ಎಲ್ಲಿಯವಳು ತಿಳಿಯಲಿಲ್ಲ" ಅಂದ. ಅದಕ್ಕವಳು "ಯಾಕೆ ಹಳೇ ದೋಸ್ತಿ ಮರೆತೆಯೇನಯ್ಯಾ? ಇವತ್ತು ಇಬ್ಬರೂ ಮಾಯೀಬೆಟ್ಟಕ್ಕೆ ಹೋಗೋದಲ್ಲವ? ನಿನ್ನವ್ವ ಕರೀತಿದಾಳೆ ಕಣೋ" ಅಂತಂದು ಗುಡ್ಡದಷ್ಟು ದೊಡ್ಡ ನಗೆ ನಕ್ಕು ಮಾಯವಾದಳು ನೋಡಿ. ಇವನು ಗಡಗಡ ನಡುಗುತ್ತ ನನ್ನ ಕೈಕಾಲುಕಟ್ಟಿಕೊಂಡು "ಅವಳ್ಯಾವಳೋ ಹಳೇ ಮಾರಿ ಕಣೇ ಆಟ ಕೆಡಿಸಿ ಬಿಡ್ತಾಳೆ. ವೇಷ ಬದಲಿಸೋಣ" ಅಂತ ಅಂಗಲಾಚಿದ. ನನಗೆ ಶಿವನ ಹಾಡು, ಮಾತು ಬರೋದಿಲ್ಲವೆಂದರೂ ಕೇಳಲಿಲ್ಲ. ನಾನೇ ಎಲ್ಲಾ ನೋಡಿಕೊಳ್ತೀನಿ ಅಂತ ಹೇಳಿ ಮಾತಾಡಲಿಕ್ಕೆ ನನಗೆ ಅವಕಾಶ ಕೊಡದೆ ಸಮಯವಾಯಿತೆಂದು ಅವಸರ ಮಾಡಿ ವೇಷಗಳನ್ನ ಅದಲಿಬದಲಿ ಮಾಡಿಯೇಬಿಟ್ಟ. ನಾನೂ ಒಪ್ಪಿಕೊಂಡು ಶಿವನ ವೇಷ ಕಟ್ಟಿದೆ. ನಾನು ಮಾಡಿದ ತಪ್ಪು ಆಮೇಲೆ ತಿಳಿಯಿತು. ಒಂದು ಧಡೂತಿ ರಾಕ್ಷಸಿ ದೂರದಲ್ಲಿ ಕುಂತಿತ್ತು. "ಸಾಯ್ ಶಿವನೇ" ಅಂತಂದು ಕೋಲು ಬೀಸಿ ನನ್ನ ಕಡೆ ಬಿಸಾಕಿದ್ದೇ, ಅದು ತಾಗಿ ಸತ್ತೇ ಬಿದ್ದೆ! (ಮದನತಿಲಕನನ್ನು ಒದೆಯುತ್ತ) ನನ್ನ ಕರ್ಮ; ಈ ಅಯೋಗ್ಯನಿಗಾಗಿ ನಾನು ಸಾಯಬೇಕಾಯ್ತು. ಸುಮ್ಮನೇ ಮಾರ್ಕಂಡೇಯನ ವೇಷದಲ್ಲಿ ಇದ್ದಿದ್ದರೆ ಜೀವಂತವಾಗಿದ್ದು ಈ ಮದರಂಗಿಯನ್ನು ಒಂದು ಕೈ ನೋಡಬಹುದಿತ್ತೆ!

ಸಂಜೀವಶಿವ : ಅಂದರೆ ನೀನು ಕಟ್ಟಬೇಕಾಗಿದ್ದ ವೇಷ ಅವಳು ಕಟ್ಟಿ ನಿನಗೆ ಬರಬೇಕಾದ ಸಾವನ್ನ ತಾನು ತಗೊಂಡ್ಲು ಅಂತಲ?

ಮಂಜರಿಯಹೆಣ : ಹಾಗೆ ಹೇಳಿ ಈ ಅಯೋಗ್ಯನಿಗೆ.

ಮದನತಿಲಕ : ಹಾಗಲ್ಲ ಅವಳ ಸಾವು ಹೀಗಾಗಬೇಕೆಂದು ಗ್ರಹಚಾರ ಗ್ರಂಥದಲ್ಲಿತ್ತಪ್ಪ.

ಮಂಜರಿಯ ಹೆಣ : ಮತ್ತೆ ಸುಳ್ಳು(ಒದೆಯುವಳು)

ಸಂಜೀವಶಿವ : ಈಕೆ ಯಾರು?

ಮದನತಿಲಕ : ಮದರಂಗಿ. ಸಹಾನುಭೂತಿ ಸೂಚಿಸಲಿಕ್ಕೆ ಬಂದಿದ್ದಾಲೆ. ಪಾಪ.
ಅಂದರೆ ಮಂಜರಿ ಸತ್ತುದರಿಂದ ನನಗೆ ದುಃಖ ಆಗಿಲ್ಲ ಅಂತ
ತಿಳಿಯಬೇಡ. ನೀನು ಬರುವ ಮುನ್ನ
ಬಿದ್ದು ಬಿದ್ದು ಅತ್ತೆ. ಬಿಕ್ಕಳಿಸಿ ಅತ್ತೆ
ದಿಂಡುರುಳಿ ಅತ್ತೆ. ಹಾಡಿಕೊಂಡತ್ತೆ.
ಅಲ್ಲವೇನೆ ಮದರಂಗಿ?

ಮಂಜರಿಯಹೆಣ : ಮತ್ತೆ ಸುಳ್ಳು.

ಮದನತಿಲಕ : ಯಾಕಯ್ಯ ಒದೀತಿ? ಮಾತಿನಲ್ಲಿ ನಂಬಿಕೆ ಬರಲಿಲ್ಲವ?

ಸಂಜೀವಶಿವ : ನಾನು ಒದೀಲಿಲ್ಲ ಕಣ್ಣಪ್ಪ, ನಿನ್ನ ಗ್ರಹಚಾರ ಒದೆಯುತ್ತಿದೆ!
*(ಹೋಗುವನು)*

## ಎಳೆದು ತನ್ನಿ ಅವರ

*(ವೈದ್ಯಶಾಲೆಯಲ್ಲಿ ತಾಯಿ ಮತ್ತು ಗಿರಿಮಲ್ಲಿಗೆ)*

ತಾಯಿ : ಗಿರಿಮಲ್ಲಿಗೆ, ಸಂಜೀವ ಮತ್ತು ರಾಜಕುಮಾರಿಯ ಮೇಲೆ ನಿಗಾ
ಇಟ್ಟಿದ್ದೀಯಲ್ಲವೆ?

ಗಿರಿಮಲ್ಲಿಗೆ : ಕಣ್ಣು ಪಿಳುಕಿಸದೆ ಗಮನಿಸುತ್ತಿದ್ದೇನೆ ತಾಯಿ.

ತಾಯಿ : ಸಂಜೀವ ಎಲ್ಲಿ ಹ್ಯಾಗಿದ್ದಾನೆ? ಏನು ಮಾಡುತ್ತಿದ್ದಾನೆ? ವಿವರವಾಗಿ ಹೇಳು.

ಗಿರಿಮಲ್ಲಿಗೆ : ಹೊತ್ತು ಕೈಮೀರುತ್ತಿದೆ ಎಂಬಂತೆ ಧಾವಿಸಿ ಅರಮನೆಗೆ ಬಂದು ತುರ್ತಾಗಿ ರಾಜಕುಮಾರಿಯಲ್ಲಿಗೆ ಹೋದ ಇವನು ಹೋಗಿ ಏನು ಹೇಳಿದನೊ. ತಾನು ಸಾವಿನ ಅರಮನೆಗೆ ಹೊರಟಿರುವೆನೆಂದು ಮತ್ತು ಸಾವನ್ನ ಎದುರಿಸುವುದು ಸಂಜೀವಶಿವನ ಮಡದಿಯಾಗಿ ತನ್ನ ಕರ್ತವ್ಯವೆಂದು ಅವಳು ನಿರ್ಧರಿಸಿಯಾಗಿತ್ತು ತಾಯಿ! ಅವಳ ಮುಖದಲ್ಲಿ ಎಷ್ಟೂ ಉದ್ವಿಗ್ನತೆ ಇರಲಿಲ್ಲ. ಸಾವಿನ ಮಾತು ಕೇಳಿ ಮೈಲಿಗೆಯಾಯಿತೆಂಬಂತೆ ತಲೆಗೂದಲು ಬಿಚ್ಚಿ ಬೆನ್ನಿಗಿಕ್ಕಿದಳು. ಕಾದಿರಲು ಸಂಜೀವಶಿವನಿಗೆ ಹೇಳಿ ಮಿಂದು ಬರಲು ಬಚ್ಚಲು ಮನೆಗೆ ಹೋದಳು. ಶುದ್ಧಿಗೆ ಮಿಂದು ಮಡಿಯಾಗಿ ಕನ್ನಡಿಯ ಮುಂದೆ ನಿಂತು ದೊಡ್ಡದಾಗಿ ಮತ್ತು ಸ್ಪಷ್ಟವಾಗಿ ಹಣೆಗೆ ಕುಂಕುಮ ಇಟ್ಟುಕೊಂಡಳು. ತಲೆಯ ಸೆರಗಿನಿಂದ ತೊಡಗಿ ನೆಲಬಡಿವ ನೆರಿಗೆಯತನಕ ಚಿನ್ನದಂಚಿನ ಚಂದ್ರಕಾಳಿಯನ್ನು ಹ್ಯಾಗೆ ಹ್ಯಾಗೋ ಉಟ್ಟು ನೀಲಿ ರವಿಕೆ ತೊಟ್ಟಳು. ತಲೆ ಬಾಚಿಕೊಂಡಳಾದರೂ ಕೂದಲನ್ನು ಒಟ್ಟು ಮಾಡಿ ಮುಡಿಕಟ್ಟುವುದು ಅವಳಿಗೆ ಸಾಧ್ಯವಾಗಲೇ ಇಲ್ಲ. ಅದು ತಿಳಿಯದೆ ಅವಳು ಒದ್ದಾಡುವುದ ನೋಡಿ ನಾನೇ ಜಡೆ ಹೆಣೆದು ದುಂಡುಮಲ್ಲಿಗೆ ದೇವಕೇದಗೆಗಳನ್ನು ಮುಡಿಸೋಣವೆಂದು ಆಸೆಯಾಗಿತ್ತು.

ಪ್ರಯಾಸದಿಂದ ನನ್ನಾಸೆಯನ್ನು ನಿಯಂತ್ರಿಸಿಕೊಂಡತಾಯಿತು. ಸಂಜೀವ ಕೊಟ್ಟ ಸಂಪಿಗೆಯನ್ನು ಅವಳೇ ಮತ್ತೊಮ್ಮೆ ಮುಡಿದುಕೊಂಡಳು. ಹಾಗೂ ಅವಳು ಶೃಂಗಾರವಾದುದ ನೋಡಿ ನನ್ನಲ್ಲಿ ನಗೆ ಮತ್ತು ಕಣ್ಣೀರು ಎರಡೂ ಉಕ್ಕಿದವು.

ತಾಯಿ : ಮುಂದೆ ಹೇಳು.

ಗಿರಿಮಲ್ಲಿಗೆ : ಆಮೇಲೆ ತನ್ನ ತಾಯಿಯ ವರ್ಣಚಿತ್ರದೆದುರು ಬಂದು ತುಪ್ಪದ ದೀಪ ಹಚ್ಚಿದಳು. "ಅಮ್ಮಾ ಗಂಡನ ಮನೆಗೆ ಹೋಗುತ್ತಿದ್ದೇನೆ, ಆಶೀರ್ವದಿಸು" ಎಂದು ಹಣೆ ನೆಲಕ್ಕೆ ತಾಗಿಸಿ ನಮಸ್ಕರಿಸಿದಳು. "ವೈದ್ಯನನ್ನ ನೋಡಿದ ತಕ್ಷಣವೆ ಆತನಿಗೆ ಮಾರು ಹೋದೆ. ಆಮೇಲೆ ಮಾತು ಬೆಳೆದಂತೆ ಆತ ಹೆಚ್ಚು ಅರ್ಹನಾಗಿ ಕಂಡ. ಆದರೆ ಮಾತಿಗಿಂತ ಮುಂಚೆಯೇ ನಮ್ಮ ಆತ್ಮಗಳು ಪರಸ್ಪರ ಹತ್ತಿರವಾಗಿದ್ದವು. ನಾನು ಸತ್ತನಂತರ ನನ್ನ ಗಂಡನಿಗೆ ದೀರ್ಘಾಯುಷ್ಯ ಮತ್ತು ನನ್ನಷ್ಟೇ ಪ್ರೀತಿಸುವ ಇನ್ನೊಬ್ಬ ಹೆಂಡತಿಯನ್ನು ಕೊಡು" ಎಂದು ಹೇಳುತ್ತಿರುವಂತೆಯೇ ದುಃಖದ ಕಟ್ಟೆಯೊಡೆದು ಧಾರಾವತಿ ಕಣ್ಣೀರ ಜಲದಲ್ಲಿ ಒದ್ದೆಯಾದಳು ತಾಯೀ, ನನ್ನ ಕಣ್ಣೂ ಹನಿಗೂಡಿ ಮುಂದೇನಾಯಿತೆಂದು ಕಾಣಲಿಲ್ಲ.

ಸೇವಕಿ : *(ಅವಸರಸರದಲ್ಲಿ ಆಗಮಿಸಿ)* ಮಹಾತಾಯಿ, ರಾಜಕುಮಾರಿ ಮತ್ತು ಸಂಜೀವಶಿವ ಇಬ್ಬರೂ ಕಾಣುತ್ತಿಲ್ಲ.

ತಾಯಿ : ಏನಂದೆ?

ಸೇವಕಿ : ಹೌದು ಮಹಾತಾಯಿ. ಇಬ್ಬರೂ ಈಗಷ್ಟೆ ಕುದುರೆಯೇರಿ ಹೊರಟರು. ಈ ಕಡೆಗೇ ಹೊರಟರೆಂದು ಬಗೆದು ನಮ್ಮ ಕೆಲಸ ಸುಗಮವಾಯಿತೆಂದು ಸುಮ್ಮನಿದ್ದೆವು. ಆದರೆ ಕಾಡು ಸೇರಿದೊಡನೆ ಕುದುರೆಯನ್ನು ವೇಗದಿಂದ ದೌಡಾಯಿಸಿ ಕಗ್ಗಾಡಿನಲ್ಲಿ ಕಣ್ಮರೆಯಾದರು.

ತಾಯಿ : ಗಿರಿಮಲ್ಲಿಗೆ, ಓಡಿ ಹಿಡಿಯಿರವರನ್ನ. ನಮಗಿರುವ ಎಲ್ಲ ಬಲಾಬಲ, ಉಪಾಯಗಳ ಬಳಸಿ ಎಳೆದುತನ್ನಿ ಅವರನ್ನ.

* * *

## ಕದಡಿದ ಆಕಾಶದಡಿ

*(ಕಾಡು, ಸಂಜೀವಶಿವ ಮತ್ತು ರಾಜಕುಮಾರಿಯನ್ನು ಹುಡುಕಿಕೊಂಡು ಇಬ್ಬರು ಸೇಡುಮಾರಿಯರು ಬರುವರು.)*

ಸೇಡುಮಾರಿ ೧ : ವಸ್ತುಗಳ್ಯಾಕೆ ಗುರುತ್ವಾಕರ್ಷಣ ಕಳೆದುಕೊಂಡಂತೆ
ಚೆಲ್ಲಾಪಿಲ್ಲಿ ಚೆಲ್ಲುವರಿಯುತ್ತಿವೆ?

ಸೇಡುಮಾರಿ ೨ : ಕಾಲಮೇಲೆ ನಿಂತಿದೆ ಬಾವಲಿ,
ತಲೆಕೆಳಗಾಗಿ ಮರಕ್ಕೆ ನೇತು ಬಿದ್ದಿದೆ ನವಿಲು!

ಸೇಡುಮಾರಿ ೧ : ಜೀವರಾಶಿಗಳ್ಯಾಕೆ ತಂತಮ್ಮ ಸ್ವಭಾವ ಧರ್ಮಂಗಳ
ಮೀರುತ್ತಿವೆ! ಊರಲ್ಲಿ ನೋಡಲಿಲ್ಲವೆ,
ಆಡುವ ಬಾಲಕರು ವೃದ್ಧರಾಗಿ ಕಾಲಜ್ಞಾನ ನುಡಿಯುತ್ತಿದ್ದರು!

ಸೇಡುಮಾರಿ ೨ : ಅಳಿದವರು ಉಳಿದವರು
ವೇಷಭೂಷಣ ಮತ್ತು ಸ್ಥಳಗಳ
ಅದಲು ಬದಲು ಮಾಡಿಕೊಂಡು
ಒಬ್ಬರು ಇನ್ನೊಬ್ಬರ ನಡೆನುಡಿಗಳು
ಕದ್ದಾಡುತ್ತಿದ್ದರು.

ಸೇಡುಮಾರಿ ೧ : ಭೂಮಿ ಆಕಾಶ ಎರಡೂ ಇವತ್ತು ಸರಿಯಿಲ್ಲ,
ತಳಮಳಗೊಂಡು ಕುದಿಯುತ್ತಿವೆ.
ಹೆಣ ತಿಂಬವರಿಗೆ ಹಿತವಾದ ಹವೆಯಿದು.
ಬೇಗ ಬಾ, ಹುಡುಕೋಣ.
(ಮರೆಯಾಗುವರು. ರಾಜಕುಮಾರಿ ಮತ್ತು ಸಂಜೀವಶಿವ ಆ ಈ ಕಡೆ
ನೋಡುತ್ತ ಅಡಗುತ್ತ ಬರುವರು. ಸ್ಥಳ ಸುರಕ್ಷಿತವೆನಿಸಿದಾಗ ಕೂರುವರು.)

ರಾಜಕುಮಾರಿ : ಇಲ್ಲಿ ಸ್ವಲ್ಪ ತಂಗೋಣವ?

ಸಂಜೀವಶಿವ : ಆಗಲಿ, ನಾವಾಗಲೇ ನಮ್ಮೂರ ಸೀಮೆ ದಾಟಿ ಬಂದಾಗಿದೆ.
ಕೊನೇಪಕ್ಷ ಹೊತ್ತು ಮುಳುಗೋತನಕ ಇಲ್ಲಿದ್ದು
ಆಮೇಲೆ ಹೊರಡಬಹುದು, ಆಯಾಸವಾಯಿತೇ
ರಾಜಕುಮಾರಿ?

ರಾಜಕುಮಾರಿ : ನನ್ನ ಹೆಸರು ಇರುವಂತಿಗೆ; ರಾಜಕುಮಾರಿಯಲ್ಲ.
ತುಂಬ ಆಯಾಸವಾಗಿದೆ ಸ್ವಾಮೀ,
ಜಲ ಜಲ ಬೆವರು ಸುರಿಯುತ್ತಿದೆ, ಕಾಣಬಾರದೆ?

ಸಂಜೀವಶಿವ : (ಬೆವರು ಒರೆಸುತ್ತ) ಆನಂದಗಳನುಂಡು ಆಡುವ ನಿನಗೆ
ಇಂತೆಂಬ ಕಷ್ಟನಿಷ್ಟುರ ಬರಬಾರದಿತ್ತು ಇರುವಂತಿಗೆ.
*(ರಾಜಕುಮಾರಿ ಹಾಗೇ ಅವನ ಎದೆಗೆ ಒರಗುವಳು. ಅವನು ಬೆವರು*
*ಒರೆಸುತ್ತಿರುವಂತೆ ಇವಳು ಅವನ ಹೃದಯಸ್ಪಂದನ ಕೇಳಿಸಿಕೊಳ್ಳುತ್ತ)*

ರಾಜಕುಮಾರಿ : ಯಾವುದೋ ಗುಡ್ಡಗಾಡು ಪ್ರದೇಶ ಅಲ್ಲವ ನೀ ಹುಟ್ಟಿದ್ದು?

ಸಂಜೀವಶಿವ : ಹೌದು ಯೋಗೀಕೊಳ್ಳದಲ್ಲಿ.

ರಾಜಕುಮಾರಿ : ಅಲ್ಲೊಂದು ನದಿ ಹರಿಯುತ್ತಿದೆ ಅಂತ ಅಲ್ಲವ ನೀ ಹೇಳಿದ್ದು?

ಸಂಜೀವಶಿವ : ಹೌದು, ವಿರುದ್ಧ ದಿಕ್ಕಿಗೆ ಹರಿವ ಎರಡು ಸೆಳವುಗಳ ನದಿ ಅದು.

ರಾಜಕುಮಾರಿ : ಆ  ನದಿ ಈಗಲೂ ನಿನ್ನ ಎದೆಯಲ್ಲಿ ಹರಿಯುತ್ತಿದೆ!
ರಭಸದಿಂದ ಹರಿಯುತ್ತ ಕೊಳ್ಳದ ತಿರುವಿನಲ್ಲಿ
ವಿರುದ್ಧ ದಿಕ್ಕಿನ ಎರಡು ಸೆಳವುಗಳಾಗಿ ಹಂಚಿ,
ಎರಡೂ ಸೆಳೆವು ಒಮ್ಮೊಮ್ಮೆ ಡಿಕ್ಕಿ ಹೊಡೆದು
ಘರ್ಷಿಸಿ ಬೇರ್ಪಡುತ್ತಿವೆ!

ಸಂಜೀವಶಿವ : ಇರುವಂತಿಗೆ ಅಗೊ ಅಸ್ತಮಾನವಾಯಿತು. ಇನ್ನು ಹೊರಡೋಣವೆ?
(ಹೊರಡುವರು, ಸೇಡುಮಾರಿಯರು ಬರುವರು.)

ಸೇಡುಮಾರಿ ೧ : ಅವರು ಹೊರಟಿದ್ದೇ ನಾವೂ ಹುಡುಕಲು ಹೊರಟೆವು.
ಆದರೂ ಅವರ ಸುಳಿವು ಸಿಗುತ್ತಿಲ್ಲವಲ್ಲ!

ಸೇಡುಮಾರಿ ೨ : ಹಾಳಾದ್ದು ಈ ಕಾಡಿನ ತುಂಬ ದಾರಿಗಳೇ ಇವೆ.
ಯಾವ ದಾರಿಯಿಂದ  ಪಾರಾದರೊ!

ಸೇಡುಮಾರಿ ೧ : ಇಡೀ ಕಾಡು ದುಃಸ್ವಪ್ನದ ಹಾಗಿದೆ.

ಸೇಡುಮಾರಿ ೨ : ಬಾನಲ್ಲಿ ಒಂದೂ ಚಿಕ್ಕೆ ಮೊಳೆತಿಲ್ಲವೆ!

ಸೇಡುಮಾರಿ ೧ : ಮರಗಳೆಲ್ಲ ಕತ್ತಲಲ್ಲಿ ಅದ್ದಿತೆಗೆದ ಹಾಗಿವೆ.
ಯಾರೋ ಅಡಗಿದ ಹಾಗಾಯಿತಲ್ಲವೆ?

ಸೇಡುಮಾರಿ ೨ : ಯಾರದು ಅಡಗಿದವರು ? ಹೊರಬನ್ನಿರಯ್ಯಾ
ನೀವು ಅಡಗಿದಲ್ಲಿ ತಾಯಿಯ ಕಣ್ಣು ನಾಟಿರುತ್ತವೆಂದು ತಿಳಿದಿರಲಿ.

ಸೇಡುಮಾರಿ ೧ : ತಾಯಿಯ ಕೈಗೆ ಏನು ಸಿಕ್ಕರೂ ಆಯುಧವಾಗುತ್ತದೆಂದು ತಿಳಿದಿರಲಿ.

ಸೇಡುಮಾರಿ ೨ : ಬನ್ನಿ ಈಚೆ.

ಸೇಡುಮಾರಿ ೧ : ಬನ್ನಿ ಹೊರಕ್ಕೆ.

ಸೇಡುಮಾರಿ ೨ : ಯಾರೂ ಇಲ್ಲ. ಅವರು ಇನ್ನೆಲ್ಲೋ ದೂರ ಹೋಗಿದ್ದಾರೆ.

ಸೇಡುಮಾರಿ ೧ : ಎಷ್ಟುದೂರ ಹೋದರೂ ತಾಯಿಗೆ ಸಮೀಪ ತಾನೆ?

ಸೇಡುಮಾರಿ ೨ : ಮಹಾ ಚೆಲುವೆಯಂತೆ ರಾಜಕುಮಾರಿ?

ಸೇಡುಮಾರಿ ೧ : ಎಲ್ಲಾ ಸುಳ್ಳು. ದೀರ್ಘ ಕಾಲದ ರೋಗಿ ಅವಳು. ಒಣಗಿದ್ದಾಳೆ ಚಿಗುರಲಾರದಷ್ಟು.

ಸೇಡುಮಾರಿ ೧ : ತಾಯಿಗೆ ನೈವೇದ್ಯವಾದರಾಯ್ತಲ್ಲ. ಆ ಕಡೆ ಸದ್ದಾಯಿತಲ್ಲ! ಬಾ.
(ಹುಡುಕುತ್ತ ಹೋಗುವರು. ರಾಜಕುಮಾರಿ, ಸಂಜೀವ ಬರುವರು.)

ರಾಜಕುಮಾರಿ : ನೀನು ಆ ಹಕ್ಕಿಯನ್ನು ಕಣ್ಣಾರೆ ಕಂಡೆಯಾ?

ಸಂಜೀವಶಿವ : ಅದರ ಬಗ್ಗೆ ಕಿವಿಯಾರೆ ಕೇಳಿ ಗೊತ್ತೇ ವಿನಾ ಕಣ್ಣಾರೆ ಕಂಡು ಗೊತ್ತಿಲ್ಲ.

ರಾಜಕುಮಾರಿ : ಅದು ಕೂಗುತ್ತದೆಯೇ?

ಸಂಜೀವಶಿವ : ನಾನು ಕೇಳಿಲ್ಲ. ಆದರೆ ಕೇಳಿಸಿಕೊಂಡವರು ಅದರ ಧ್ವನಿ
ಭಯಂಕರವಾಗಿರುತ್ತದೆ; ಒಂದೇ ಬಾರಿಗೆ ನೂರು ಗೂಗೆ ಕೂಗಿದ
ಹಾಗಿರುತ್ತದೆ ಅಂತಾರೆ.

ರಾಜಕುಮಾರಿ : ಅಗೋ ಆ ಕಡೆ ಕ್ಷಿತಿಜದ ಪಕ್ಕದ ದೊಡ್ಡ ಬಂಡೆಯಂಥದೊಂದು
ಏನೋ ಕಾಣಿಸುತ್ತಲ್ಲ, ಅದಿರಬಹುದ?

ಸಂಜೀವಶಿವ : ಅದು ದೊಡ್ಡಾಲದ ಮರ.

ರಾಜಕುಮಾರಿ : ಅಂದರೆ ಅದು ಮರದಲ್ಲಿರೋದಿಲ್ಲವ?

ಸಂಜೀವಶಿವ : ಮರಕ್ಕೆ ಅದರ ಭಾರ ತಡೆದುಕೊಳ್ಳೋ ಶಕ್ತಿ ಇರಬೇಕಲ್ಲ.

ರಾಜಕುಮಾರಿ : ಸ್ಮಶಾನವನ್ನ ಆರಿಸಿಕೊಂಡಿದೆಯಲ್ಲ ಇರೋದಕ್ಕೆ! ಆಶ್ಚರ್ಯ ಅಲ್ಲವೆ?

ಸಂಜೀವಶಿವ : ಹೊಟ್ಟೆಗೆ ಬೇಕಿಲ್ಲ. ಹೊತ್ತುಕೊಂಬಂದರವನ್ನ ಓಡಿಸಿ ಆ ಹೆಣಗಳನ್ನು
ಕಚ್ಚಿಕೊಂಡು ಹೋಗುತ್ತದಂತೆ, ನೋಡಿದವರು ಹೇಳಿದ್ದು.

ರಾಜಕುಮಾರಿ : ನೀನು ವರ್ಣನೆ ಮಾಡೋದನ್ನ ಕೇಳಿದರೆ
ಅದು ಭಯಾನಕ ಹಕ್ಕಿ ಅನ್ನೋದರಲ್ಲಿ ಸಂದೇಹವೇ ಇಲ್ಲ.
ಆದರೆ ಆ ಸ್ಥಳ ಮಾತ್ರ ಆ ಹಕ್ಕಿಗೆ ಯೋಗ್ಯವಾದದ್ದಲ್ಲ
ಅಂತ ಹೇಳಲೇಬೇಕು.
ಯಾಕಂತೀಯೋ ಅಂಥ ಸುಂದರವಾದ ಹಸಿರಿನಲ್ಲಿ
ಅಂಥ ಭಯಾನಕ ಹಕ್ಕಿಯನ್ನ
ಕಲ್ಪಿಸಲು ಸಾಧ್ಯವಾಗೋದೇ ಇಲ್ಲ.

ಸಂಜೀವಶಿವ : ಬಹಳ ಜನ ಆ ಹಕ್ಕಿಯನ್ನ
ಅಲ್ಲೇ ನೋಡಿದ್ದಾರಂತೆ. ನಿನಗೆ ಕಂಡ ಅವರ್ಯಾರಿಗೂ ಆ ಜಾಗ
ಚಂದ ಕಂಡೇ ಇಲ್ಲ.

ರಾಜಕುಮಾರಿ : ನೋಡೋದಕ್ಕೆ ಹ್ಯಾಗಿದೆ ಅದು ? ಹದ್ದಿನ ಹಾಗೆ?
ಅಥವಾ ಇನ್ನ್ಯಾವುದಾದರೂ ಹಕ್ಕಿಯ ಹಾಗೆ?

ಸಂಜೀವಶಿವ : ದೊಡ್ಡ ಹಕ್ಕೀನೇ. ರೆಕ್ಕೆ ಇವೆ. ಕಾಲಿವೆ. ಆದರೆ ಅವ್ಯಾವೂ ನೆನಪಿನಲ್ಲಿ
ಉಳಿಯೋದಿಲ್ಲ. ಕ್ರೂರವಾದ ಅದರ ಕಣ್ಣು ಮಾತ್ರ ಕಾಣುತ್ತವಂತೆ!
ಅದು ನಮ್ಮನ್ನ ನೋಡುತ್ತಿದೆ ಅಂತ ಗೊತ್ತಾದವರೆಲ್ಲ ಅಲ್ಲೇ ಸಾಯುತ್ತಾರಂತೆ!
ಇನ್ನು ಹೊರಡೋಣವ?

ರಾಜಕುಮಾರಿ : ಇರು ನಿನಗೊಮ್ಮೆ ನಮಸ್ಕಾರ ಮಾಡಬೇಕು.

ಸಂಜೀವಶಿವ : ಯಾಕೆ?

ರಾಜಕುಮಾರಿ : ಯಾಕೆಂದರೆ ನೀನು ಗಂಡ, ನಾನು ಹೆಂಡತಿ.
ಗಂಡ ಹೆಂಡತಿ ಅಂದಮೇಲೆ
ಒಂದು ಸಲವಾದರೂ ನಮಸ್ಕಾರ ಮಾಡಬೇಡವೇ?
*(ನಮಸ್ಕಾರ ಮಾಡಿ)* ಇನ್ನು ನಡೆ.
*(ಹೊರಡುವರು. ನಡೆದು ನಡೆದು ಇನ್ನೊಂದು ಭಯಾನಕವಾದ, ಆದರೆ ವಿಚಿತ್ರವಾದ ಕಾಡಿಗೆ ಬರುವರು.)*

ರಾಜಕುಮಾರಿ : ದಾರಿ ತಪ್ಪಿ ಇಲ್ಲಿಗೆ ಬಂದಿವ?

ಸಂಜೀವಶಿವ : ಇರಲಾರದು.

ರಾಜಕುಮಾರಿ : ಯಾವ ಸೀಮೆಯಿದು?
ಬಿರುಗಾಳಿ ಬೀಸಿ ಮರದೆಲೆ ಮುಖಕ್ಕೆ ರಾಚುತ್ತಿವೆ.
ಯಾರದೋ ನೆರಳು
ಹುಲ್ಲಿನ ಮ್ಯಾಲೆ ಕದ್ದು ನಡೆದಾಡಿದವಲ್ಲ!
ಮಂಜಿನಾಕೃತಿಗಳು ಅಗೋ ಅಗೋ
ಎದುರೆದುರೆ ಮೂಡಿ ನಮ್ಮೆಡೆಗೇ
ನಡೆದು ಬರುತ್ತಿವೆ!
*(ಭೂತಗಳು ಇವರ ಕಡೆಗೆ ನಡೆದು ಬಂದು ಗುಂಪಾಗಿ ಎತ್ತರದಲ್ಲಿ ನಿಂತು ಕೊಳ್ಳುತ್ತವೆ.)*

ಕೀರ್ತಿಶಿವನ ಭೂತ : ಅಯ್ಯಾ ಸಂಜೀವ ನಾನು ಕೀರ್ತಿಶಿವ
ನಿನ್ನ ತಂದೆ, ಈಗ ಆಗಿದ್ದೇನೆ ಭೂತ.
ನಾವೆಲ್ಲ ಭೂತಗಳು ಬಂದಿದ್ದೇವೆ
ನಿಮ್ಮನ್ನ ಹರಸುವುದಕ್ಕೆ.

ಭೂತಗಳು : ಹೆದರಬೇಡಿ ಮಕ್ಕಳೇ,
ನಾವೂ ನಿಮ್ಮಂತೆ ಕಾಳಗ ಕೊಟ್ಟು
ಕಳಕೊಂಡವರು. ಕಾಳಗ ಕೊಡುವ
ನಿಮ್ಮಂಥವರ ಹರಸುವವರು.
ದೇವರಿಗೆ ಕಣ್ಣಿಲ್ಲ, ಕಿವಿಯಿಲ್ಲ
ಅಥವಾ ಅವರಿಗೂ ಗೊಂದಲಗಳಿವೆ.
ಅಥವಾ ಅವರೂ ತಾವು ಮಾಡಿದ ಜಗತ್ತನ್ನ
ಸರಿಪಡಿಸಲಾರದ ಸೋಂಬೇರಿಗಳು.
ಆದರೂ ವರ್ಷಗಳು ಗತಿಸಿದರೂ
ನಿಮ್ಮ ಧೈರ್ಯದ ಬಗ್ಗೆ,
ತಾಯಿಯ ಕ್ರೌರ್ಯದ ಬಗ್ಗೆ
ಜನ ಆಡಿಕೊಳ್ಳುತ್ತಾರೆ;
ನೆನಪಿರಲಿ.
ಅಯ್ಯಾ ಎಳೆಯ ಗೆಳೆಯ
ಬಾರಯ್ಯಾ ಮುಂದೆ.
ಹಾರಾಡುವ ಎಲೆಯೇ ಬಣ್ಣದ ಗಾಳಿಪಟ ಅಂದುಕೊಳ್ಳಯ್ಯಾ.
ಬಣ್ಣದ ಗಾಳಿಪಟವೇ ಪುಷ್ಪಕ ವಿಮಾನ,
ಅದರ ಚಾಲಕ ನೀನೇ ಅಂದುಕೊಳ್ಳಯ್ಯಾ
ಈಗ ನಡೆಸು ವಿಮಾನವ.
ಆಕಾಶದಂಗಳದ ಚೆನ್ನದ ಹುಡಿಯಲ್ಲಾಡಿ
ಬಣ್ಣದ ಮುಗಿಲೇರಿ ಲತೆಗಳ ಜೀಕಿ,…..
ನಾವೂ ಹೀಗೇ ಜೋಕಾಲಿಯಾಡಿದೆವಯ್ಯಾ
ಹಂಕಾರ ಹೊತ್ತಿಸಿಕೊಂಡು ಹೂಂಕರಿಸಿ
ಕ್ಷಿತಿಜಗಳಿಗೆ ನುಗ್ಗಿ ತಾರೆಗಳ ಬೆಳಗಿ
ಗ್ರಹಗಳ ಇಳಿದೇರಿ
ದಿನ ರಾತ್ರಿ ಮಾಸ ವರುಷಗಳ
ದಣಿಯುವ ತನಕ ನಗಾಡಿ ಕಳೆದೆವಯ್ಯಾ!
ಅಲ್ಲೇ ಎಲ್ಲೋ ಇದ್ದಳು ಆಕೆ
ಇದ್ದೂ ಇಲ್ಲದಂತೆ, ನಮಗೆ ಕಾಣದಂತೆ

ಕಂಡರೂ ಗುರುತು ಸಿಗದಂತೆ
ಇದ್ದಾಳೆನ್ನಿಸಿ ಇಲ್ಲದ ಕನಸಿನಂತೆ
ಭಯದಂತೆ ಅಥವಾ ಈಗಿನ ನಮ್ಮಂತೆ.
ಆಮ್ಯಾಲೆ ಬೀಸಿದಳಯ್ಯಾ ತನ್ನ ಬಿರುಗಾಳಿ
ಸುಂಟರಗಾಳಿಗಳ ನಮ್ಮ ಪಟಗಳ ಮ್ಯಾಲೆ.
ಪಟ ಪಟ ಸೂತ್ರ ಹರಿದು ತೇಲುತ್ತ ತೇಲುತ್ತ
ಬಿದ್ದೆವು ನದಿ ದಡದ ಮಳಲಿನ ಮ್ಯಾಲೆ.
ತೆರೆಹೊಯ್ದು ಮಳಲೊಡನೆ ಮಳಲಾಗುವುದು
ತಡವಾಗಲಿಲ್ಲ.
ಈಗ ಇಲ್ಲಿದ್ದೇವೆ ಹೀಗೆ ನೆರಳಿನ ಹಾಗೆ
ಸಂದು ಮರೆವಿಗೆ.
ನಿಮ್ಮ ಸಾಹಸಗಳ ನೋಡುತ್ತ
ಮೆಚ್ಚುತ್ತ ಕೈ ಎತ್ತಿ ಹರಸುತ್ತ.
ಈವರೆಗೆ ಸತ್ತ ನಮ್ಮೆಲ್ಲರ ಬಲ
ದೇವಾನುದೇವತೆಗಳ ಬಲ
ನಿಮಗಿರಲಿ ಮಕ್ಕಳೇ,
ಛಲ ಮಾತ್ರ ಮನುಷ್ಯರದೇ ಇರಲಿ.

ಸಂಜೀವಶಿವ : ಉಪಕಾರವಾಯ್ತು ಪಿತೃಗಳೇ,
ನಮಗುಳಿದ ಇಂದಿನ ರಾತ್ರಿ
ಅಡವಿಯ ತುಂಬ ಅಲೆದಾಡಿ
ನಾವೂ ಕೊಡಲಿದ್ದೇವೆ ಕೊನೆಯ ಕಾಳಗವ.
ಎಲ್ಲರಿಗೂ ವಿದಾಯ ಹೇಳಿ
ಬರುತ್ತೇವೆ ನಿಮ್ಮ ಸನ್ನಿಧಿಗೆ.
ನಿಮ್ಮ ಕುಲಗೋತ್ರಗಳ
ಸತ್ಕೀರ್ತಿಗನುಗುಣವಾಗಿ ಹೋರಾಟ ಕೊಡುತ್ತೇವೆ
ಸಂಶಯ ಬೇಡ.
ನಾವು ಬರ್ತೀವಿನ್ನ ಶರಣು ಶರಣು.

*(ಸಂಜೀವಶಿವ ಮತ್ತು ರಾಜಕುಮಾರಿ ನಮಿಸುವರು. ಭೂತಗಳು ಕೈ ಎತ್ತಿ ಆಶೀರ್ವದಿಸಿ ಮಾಯವಾಗುವವು. ಮೆಲ್ಲಗೆ ಮುಂದೆ ಹೊರಡುವರು. ಅಷ್ಟರಲ್ಲಿ ದೇವಾಲಯದ ಗಂಟೆ ದನಿ ಕೇಳಿಸಿ ಆಮೇಲೆ ಹಾಡು ಕೇಳಿಸುವುದು.)*

**ಸೋಎನ್ನಿ ಶುಭವೆನ್ನಿ**
**ಮಂಗಳ ಶುಭವೆನ್ನಿ**

**ಅವ್ವಾ ಬಂಗಾರಿ! ರಾಜಕುಮಾರಿ**
**ಸಿಂಗಾರ ಸಿರಿಗೆ ಶುಭವೆನ್ನಿ!!**

ಸಂಜೀವಶಿವ : ದಯವಿಟ್ಟು ಬಾಯಿ ಮುಚ್ಚಿಕೊ.

ರಾಜಕುಮಾರಿ : ಯಾರಿಗೆ ಹೇಳಿದೆ ನೀನು?

ಸಂಜೀವಶಿವ : ನಿನಗೇ.

ರಾಜಕುಮಾರಿ : ನಾನು ಹಾಡಿದ್ದಲ್ಲ ಅದು.

ಸಂಜೀವಶಿವ : ಹೌದೇ? *(ನೆನಪಿಸಿಕೊಂಡು)* ಹೌದು. ನೀನು ಹಾಡಿದ್ದನ್ನ
ನಾನು ಕೇಳೇ ಇಲ್ಲ. ಇದೀಗ ನೀನೇ ಹಾಡಿದಂತೆ ಕೇಳಿಸಿತಲ್ಲ!
ಇನ್ನಷ್ಟು ಈ ಕಡೆ ಬಾ. ನನ್ನ ತಾಯಿ ನಿನ್ನ ದನಿಯಲ್ಲೂ ಹಾಡಬಲ್ಲಳು!

ರಾಜಕುಮಾರಿ : ಅದು ನಿನ್ನ ತಾಯಿಯ ದನಿಯಲ್ಲ, ಅಲ್ಲವ?

ಸಂಜೀವಶಿವ : ಹಾಗಿದ್ದರದು ಭೂತಗಳ ಹಾಡಾಗಿರಬಹುದು.

ರಾಜಕುಮಾರಿ : ಇಂಥ ಛಳಿಯಲ್ಲೂ ನಿನ್ನ ತಾಯಿ ಬರುತ್ತಾಳಾ?

ಸಂಜೀವಶಿವ : ಅವಳಿಗೆ ಛಳಿ, ಶೆಕೆ ಇಲ್ಲ. ಅವಳನ್ನ ಮಳೆ ಗಾಳಿ ಬೆಂಕಿ ಮುಟ್ಟುವುದಿಲ್ಲ.
ಬೆಳಕು ಕೂಡ.

ರಾಜಕುಮಾರಿ : ಅಕಾ ಅವಳ ದನಿ ಕೇಳಿಸಿತಲ್ಲವ?

ಸಂಜೀವಶಿವ : ಹೌದು ಅವಳದೆ.

ರಾಜಕುಮಾರಿ : ಆಗ ಬಹಳ ದೂರದಿಂದ ಕಿರಿಚಿದ ಹಾಗೆ ಕೇಳಿಸ್ತು. ಈಗ
ಪಕ್ಕದಲ್ಲೇ ಪಿಸುನುಡಿದ ಹಾಗೆ ಕೇಳಿಸುತ್ತದಲ್ಲ?
*(ಬಾಯಿ ಮುಚ್ಚಿಕೊಳ್ಳಲು ಸನ್ನೆ ಮಾಡುವನು)*
ಇಕಾ ಈಗ ಬಹುದೂರದಿಂದ ನಗುತ್ತಿದ್ದಾಳೆ.
ಹೋದಳೆಂದು ಕಾಣುತ್ತದೆ.

ಸಂಜೀವಶಿವ : ಇಲ್ಲೆಲ್ಲೊ ತುಂಬ ಜನ ನಗಾಡುತ್ತಿದ್ದಾರೆ.
ನಾವು ಯಾವುದೋ ಹಳ್ಳಿಗೆ ಬಂದಿದ್ದೇವೆಂದು ಅನ್ನಿಸೋದಿಲ್ಲವೆ?
ಆಗ ಕೇಳಿದ್ದು ಸೋಬಾನೆ ಪದ ಅಲ್ಲವೆ?

ಈಗಲೂ ಕೇಳಿಸಿತ?
ಇಲ್ಲೆಲ್ಲೊ ಮದುವೆ ನಡೆಯುತ್ತಿರುವ ಹಾಗಿದೆ.

ರಾಜಕುಮಾರಿ : ಅಗೋ ಅಲ್ಲಿ ನೇರಕ್ಕೆ ತೋರುವುದಲ್ಲ. ಒಂದು ಮನೆ.
ಅಲ್ಲೇ ನಡೆದಿರಬೇಕು. ನಾವೂ ಅವರ ಮಧ್ಯೆ ಸೇರಿಕೊಂಡು ಬಿಡೋಣ.
*(ನಡೆಯುವಳು. ಬಾಗಿಲು ಕಾಣಿಸುತ್ತದೆ.)*

ಸಂಜೀವಶಿವ : ಸರಿಯಾಗಿ ಕೇಳಿಸಿಕೊ : ಇಲ್ಲಿ ನಿನ್ನ ಹೆಸರು ಆಕಾಶಮಲ್ಲಿಗೆ.
ನನ್ನ ಹೆಸರು ಸಂಪಿಗೆರಾಮ, ತಿಳಿಯಿತೆ?
ತಪ್ಪಿಕೂಡ ನಮ್ಮ ಮುನ್ನಿನ ಹೆಸರು ಹೇಳಕೂಡದು.

ರಾಜಕುಮಾರಿ : ಆಯ್ತು.

ಸಂಜೀವಶಿವ : ಒಳಗೆ ಯಾರಿದ್ದರೆ ಅವರು ಬಾಗಿಲು ತೆರೆಯಿರಯ್ಯ.-

*(ನಿಧಾನವಾಗಿ ಬಾಗಿಲು ತೆರೆಯುತ್ತದೆ. ಝಗ್ಗನೆ ಮನೆಯೊಳಗಿನ ಬೆಳಕು ಎಲ್ಲ ಕಡೆ ನುಗ್ಗುತ್ತದೆ. ಅದೊಂದು ವೈವಿಧ್ಯಮಯವಾಗಿ ಬೆಳಗುವ ಸಾವಿರಾರು ಜ್ಯೋತಿಗಳಿಂದ ಭಯಾನಕವಾಗಿ ಕಾಣುವ ಲೋಕ. ಪಣತಿಗಳ ಆಕಾರ ಒಂದೇ ಆದರೂ ಜ್ಯೋತಿಗಳ ಗಾತ್ರ ಮಾತ್ರ ಒಂದರಂತೆ ಇನ್ನೊಂದಿಲ್ಲ. ಎತ್ತರದಲ್ಲೊಂದು ಸಿಂಹಾಸನ. ಅದರ ಮುಂದೆ ಕೆಳಭಾಗದಲ್ಲಿ ಪ್ರತ್ಯೇಕವಾಗಿ ಮತ್ತು ಸ್ಪಷ್ಟವಾಗಿ ಕಾಣಿಸುವ ಎರಡು ಪಣತಿಗಳಿವೆ. ಅವುಗಳಲ್ಲಿ ಒಂದು ಪ್ರಕಾಶಮಾನವಾಗಿ ಇನ್ನೊಂದು ಮಂದವಾಗಿ ಉರಿಯುತ್ತಿವೆ. ಈಗ ಸಂಜೀವಶಿವ ಸುತ್ತಲೂ ನೋಡಿ ಆಘಾತ ಹೊಂದುತ್ತಾನೆ : ಈ ಮಧ್ಯೆ ರಾಜಕುಮಾರಿ ಮಾಯವಾಗಿದ್ದಾಳೆ. ಅವಳು ತನ್ನೊಂದಿಗಿಲ್ಲದ್ದರಿಂದ ಮತ್ತು ಗಿರಿಮಲ್ಲಿಗೆ ಬಾಗಿಲು ತೆರೆದವಳಾದ್ದರಿಂದ ಹೌಹಾರಿ ಅಸಹಾಯಕನಾಗಿ ಕಿರಿಚಿ ಮಾತಾಡುತ್ತಾನೆ.)*

ಸಂಜೀವಶಿವ : ಮೋಸ ! ಮೋಸ!

ಗಿರಿಮಲ್ಲಿಗೆ : ಮಗನೇ ಸಂಜೀವಶಿವನೇ, ಹೆಸರು ಬದಲು ಮಾಡಿಕೊಂಡು ತಾಯಿಗೆ
ಮೋಸಮಾಡಿ ಓಡಿಹೋಗಬಹುದ ಹೀಗೆ?

ಸಂಜೀವಶಿವ : ನಾವು ಕಾಡಿನಲ್ಲಿ ಓಡಿದ್ದೆಲ್ಲ ಇಲ್ಲಿಗೆ ಬರುವುದಕ್ಕೆಂದೆ?

ಗಿರಿಮಲ್ಲಿಗೆ : ಹೌದು. ನಿಜ ಹೇಳಬೇಕೆಂದರೆ ಮಾಯೀಬೆಟ್ಟ ಬಿಟ್ಟು ನೀವು
ದೂರಕ್ಕೆ ಹೋಗೇ ಇಲ್ಲ ಮಗ. ಅಷ್ಟು ಹೊತ್ತೂ ನೀವು ಬೆಟ್ಟಕ್ಕೆ
ಪ್ರದಕ್ಷಿಣೆ ಹಾಕುತ್ತಿದ್ದಿರಷ್ಟೆ.

ಸಂಜೀವಶಿವ : *(ಕಿರಚಿ)* ಇದು ಭಾರೀ ಅನ್ಯಾಯ!

ಗಿರಿಮಲ್ಲಿಗೆ : ನೀನೆಷ್ಟು ಕಿರಿಚಿಕೊಂಡರೂ ಯಾವ ಮೂಲೆಯಿಂದಲೂ ನಿನಗೆ
ಸಹಾನುಭೂತಿ ಸಿಕ್ಕಲಾರದು. ಯಾಕೆಂದರೆ

ಇದು ಮಾನವಲೋಕವಲ್ಲ.
ಹೀಗೆ ಹುಚ್ಚುಗಳ ಎರಚಾಡುತ್ತಿದ್ದರೆ ಒಂದೆರಡು ಸಲ ಕೇಳಿ ಹೊರಕ್ಕೆ
ತಳ್ಳಬಹುದು ಅಥವಾ ನಿನ್ನ ಶಬ್ದವನ್ನು ನಿಶ್ಯಬ್ದಗೊಳಿಸಬಹುದು.
ಅದಕ್ಕಿಂತ ಹೆಚ್ಚಿನ ಪ್ರತಿಫಲ ನಿನಗೆ ಖಂಡಿತ ಸಿಕ್ಕಲಾರದು.
ನಿನ್ನ ಹೇಳಿಕೆ ಕೇಳಿಕೊಂಡು ನ್ಯಾಯನಿರ್ಣಯ ಮಾಡಲು ಇಲ್ಲಿ ತಾಯಿ
ಇಲ್ಲ. ನಾನು ಕೆಲವು ಪ್ರಶ್ನೆಗಳಿಗೆ ಉತ್ತರಿಸಬಹುದು. ಆದರೆ ಅವೆಲ್ಲ
ಕಲಿತ ಉತ್ತರಗಳು. ಅವನ್ನು ಮೀರಿ ನಾನು ಹೇಳಬಹುದಾದ
ಒಂದು ಮಾತೆಂದರೆ –
ಲೌಕಿಕ ನಾಮ ರೂಪ ಕ್ರಿಯೆಗಳ ಸಮೇತ ಈ ಲೋಕವನ್ನ
ಪ್ರವೇಶಿಸಿದ ಇಬ್ಬರೇ ಮಾನವರು ಎಂದರೆ; ನೀನು ಮತ್ತು ರಾಜಕುಮಾರಿ.
ರಾಜಕುಮಾರಿಗೆ ಈ ಸೌಭಾಗ್ಯ ಸಿಕ್ಕಿದ್ದು ನಿನ್ನಿಂದ.
ನಿನಗೆ ದೊರೆತದ್ದು ನೀನು ತಾಯಿಗೆ ಮಗನಾದ್ದರಿಂದ.
ನೀವೇ ಆದಿಮರು, ಅಂತಿಮರು ಕೂಡ.
ತಾಯಿಯ ಕೋಪ ಅಥವಾ ಅನುಗ್ರಹವೇ ನಿನ್ನ ದೈವ
ಎಂಬುವುದು ನೆನಪಿನಲ್ಲಿರಲಿ.
ಸಿಕ್ಕ ಈ ಅವಕಾಶವನ್ನ ಸರಿಯಾಗಿ ಉಪಯೋಗಿಸಿ ಒಳ್ಳೆಯ ವಾಕ್ಯವ
ಅನುಗ್ರಹಿಸೆಂದು ಕೇಳಿಕೊ. ಇಲ್ಲದಿದ್ದಲ್ಲಿ
ಪಶ್ಚಾತ್ತಾಪ ಪಡಬೇಕಾದವನೂ ನೀನೇ. ಏನಾದರೂ ನನ್ನಲ್ಲಿ ಕೇಳುವುದಿದ್ದರೆ
ತಾಯಿ ಓಲಗಗೊಡುವ ಮೊದಲೇ ಕೇಳು. ತಾಯಿ ಪ್ರತ್ಯಕ್ಷಳಾದ
ಮೇಲೆ ಮಾತ್ರ ನೀನಾಗಿ ಮಾತಾಡಕೂಡದು.

ಸಂಜೀವಶಿವ : *(ಒದರುತ್ತ)* ರಾಜಕುಮಾರಿಯನ್ನು ಬಲಿಕೊಡಲು ನೀವು ನನ್ನಿಂದ ಕದ್ದು
ಕೊಂಡು ಹೋದದ್ದು ತಪ್ಪಲ್ಲವೆ?

ಗಿರಿಮಲ್ಲಿಗೆ : ಸರಿಯಾಗಿ ಮಾತಾಡುವುದನ್ನ ಕಲಿತುಕೊ.
ಅದು ಬಲಿಯಲ್ಲ, ಸಹಜ ಸಾವು.
ನಿಯತಿಯಂತೆ ನಿರ್ಣಯಿಸಲ್ಪಟ್ಟ ದಿನ ವಾರ ಗಳಿಗೆಯಲ್ಲಿ,
ನಿಯತಿಯಂತೇ ತನ್ನ
ಸಹಜಸಾವನ್ನ ಸಾಯಲು ತಯಾರಾಗುತ್ತಿದ್ದಾಳೆ.

ಸಂಜೀವಶಿವ : ನಾನು ವೈದ್ಯ ಮಾಡಿದ ಮೇಲೆ ತೋಗಿ ಬದುಕಲೇಬೇಕೆಂದು
ತಾಯಿ ನನಗಿತ್ತ ವರ ಹುಸಿಯಾಗಲಿಲ್ಲವೆ?

ಗಿರಿಮಲ್ಲಿಗೆ : ರೋಗಿಯ ಎಡ ಇಲ್ಲವೆ ಬಲದಲ್ಲಿ ತಾಯಿ ಪ್ರತ್ಯಕ್ಷಳಾಗುವ
ಮೊದಲೇ ನೀನು ವೈದ್ಯ ಮಾಡಿದ್ದು ತಪ್ಪಲ್ಲವೆ?

ವರ ಕೊಟ್ಟವರಿಗೆ
ಪಡೆದವರಿಗಿಂತ ಹೆಚ್ಚಿನ ಜವಾಬ್ದಾರಿ ಇರುತ್ತದೆ. "ಮಗಳೇ
ನಿನ್ನ ವೈದ್ಯ ಕತ್ತಿನಲ್ಲಿ ಕಟ್ಟಿದ್ದ ಮದ್ದಿನ ಬಳ್ಳಿಯನ್ನು
ಕಿತ್ತುಹಾಕದಿದ್ದಲ್ಲಿ ಸಂಜೀವಶಿವನೂ ನಿನ್ನೊಂದಿಗೆ ಸಾಯುತ್ತಾನೆ"
ಎಂದೆವು. "ನನ್ನ ವೈದ್ಯ ಬಾಳಲೆಂದು" ಅದನ್ನು ಖುದ್ದಾಗಿ
ಅವಳೇ ಹರಿದು ಹಾಕಿದಳು. ಆಮೇಲೆಯೇ ನಾವು ಶೃಂಗಾರಕ್ಕೆ
ತೊಡಗಿದೆವು. ಬಲ್ಲೆಯಾ?

ಸಂಜೀವಶಿವ : *(ಹತಾಶನಾಗಿ)* ನನ್ನ ಭ್ರಾಂತು ನಿಭ್ರಾಂತವಾದವು ಗಿರಿಮಲ್ಲಿಗೆ!
ಕ್ರೂರವಾದ ದೈವವೊಂದು ನಮ್ಮಿಬ್ಬರನ್ನು
ಈ ರೀತಿ ಒಂದು ಕಡೆಗೆ ತಳ್ಳಿಬಿಟ್ಟಿತು.
ಬದುಕಿದರೆ ಇಬ್ಬರಿಗೂ ಒಂದೇ ಗುಡಿಸಲು, ಸತ್ತರೆ
ಒಂದೇ ಚಿತೆ ಎಂದು ಹೇಳಿದ್ದೆ. ಆದರೆ ನನ್ನನ್ನು
ನಂಬಿದ್ದ ರಾಜಕುಮಾರಿ ಈಗ ಒಬ್ಬಳೇ ಸಾಯುತ್ತಿದ್ದಾಳೆ.
ನನ್ನ ವೈದ್ಯವೆಲ್ಲ ಸಾವಿನ ಸ್ಪರ್ಶದಿಂದ ಅರ್ಥಹೀನವಾಗಿದೆ.
ವಿಷ ಈ ಶಿವನ ಕಂಠದಲ್ಲಿಲ್ಲ, ನನ್ನ ಬದುಕಿನ ಸುತ್ತ
ಹಬ್ಬಿದೆ. ನನ್ನನ್ನೂ ಆಹುತಿ ತಗೊಂಡು
ಈ ವಿಷಯದಿಂದ ಮುಕ್ತಿಗೊಳಿಸುವ ತಾಯೀ.

ಗಿರಿಮಲ್ಲಿಗೆ : ಗೆಲ್ಲಲಾರದ ಆಟ ಆಡುತ್ತಿರುವಿ ಮಗನೆ.
ಇಂಥ ಮಾತಾಡಿ ಆಮೇಲೆ ಪಶ್ಚಾತ್ತಾಪ ಪಡಬೇಕಾದೀತು.

ಸಂಜೀವಶಿವ : ಈಗಲೂ ಪಶ್ಚಾತ್ತಾಪ ಪಡುತ್ತಿದ್ದೇನೆ
ನಿರ್ದಯಿ ತಾಯಿಯನ್ನ ಪಡೆದುದಕ್ಕೆ.

ಗಿರಿಮಲ್ಲಿಗೆ : ಮೂರ್ಖಾ,
ರಾಜಕುಮಾರಿಯನ್ನು ನೀನು ನೋಡುವ ಮೊದಲೇ,
ಅವಳು ಹುಟ್ಟುವಾಗಲೇ ಅವಳ ಆಯುಷ್ಯ
ನಿರ್ಧಾರವಾಗಿದ್ದುದ ಬಲ್ಲೆಯಾ?
ನಿಯತಿಯ ಬದಲಿಸಲುಂಟೆ?
ಅಂತಿಮ ಸತ್ಯ ನೋಡಬೇಕೆಂದೆಯಲ್ಲವೆ?
ನಿನ್ನ ಎದುರಿನಲ್ಲೇ ಪ್ರತ್ಯಕ್ಷವಾಗಿದೆ ನೋಡು!
ಝಗಮಗಿಸುವ ಅನಂತಜ್ಯೋತಿಗಳು ಜೀವರಾಶಿ ಸೂಚಿಗಳು!
ಹೊತ್ತುತ್ತಿರುವ ಜ್ಯೋತಿಗಳು! ಚಿಗುರುವ ಜ್ಯೋತಿಗಳು!
ಬೆಳೆಯುವ ಜ್ಯೋತಿಗಳು ! ಬೆಳಗುವ ಜ್ಯೋತಿಗಳು!

ನಂದುತ್ತಿರುವ ಜ್ಯೋತಿಗಳು ! ಒಂದೊಂದು ಜೀವಕ್ಕೆ ಒಂದೊಂದು ಜ್ಯೋತಿ!
ಒಂದೊಂದರ ತೈಲದ ಪ್ರಮಾಣ ಇನ್ನೊಂದರಿಂದ ಭಿನ್ನ.
ಪಣತಿಯಲ್ಲಿ ಎಷ್ಟೆಷ್ಟಿದ್ದರೆ ತೈಲ
ಅಷ್ಟಷ್ಟು ಆಯುಷ್ಯ ಆಯಾ ಜೀವಕ್ಕೆ!
ಇಲ್ಲಿ ನೋಡಿದೆಯಾ?
*(ಸಿಂಹಾಸನದೆದುರಿನ ಎರಡು ಜ್ಯೋತಿಗಳನ್ನು ತೋರಿಸುತ್ತ)*
ಪ್ರಕಾಶಮಾನವಾಗಿ ಬೆಳಗುತ್ತಿರೋದು,
ಎಲ್ಲ ಜ್ಯೋತಿಗಳಿಗಿಂತ ದೊಡ್ಡದಾಗಿರೋದು ಮತ್ತು
ತೈಲ ತುಂಬಿರೋದು ನಿನ್ನ ಆಯುಷ್ಯಜ್ಯೋತಿ,
ತಾಯಿ ನಿನಗೆ ಎಲ್ಲರಿಗಿಂತ ಹೆಚ್ಚು ಆಯುಷ್ಯ ಕೊಟ್ಟಿದ್ದಾಳೆ, ಮಗನಾದುದರಿಂದ.
ಇಕಾ ತೈಲ ತೀರಿ ಇನ್ನೇನು ನಂದಲಿರುವ
ಪಕ್ಕದ ಬಡಕಲು ಜ್ಯೋತಿಯಿದೆಯಲ್ಲ,
ಅದು ನಿನ್ನ ರಾಜಕುಮಾರಿಯದು,
ಇಕೊ ರಾಜಕುಮಾರಿ ಬಂದಳು.

*(ಮದುವೆಗೆ ಶೃಂಗರಿಸಿದ ರಾಜಕುಮಾರಿಯನ್ನ ಸೇಡು ಮಾರಿಯವರು ಸೋಬಾನೆ ಹಾಡುತ್ತ ಕರೆತಂದು ಸಣ್ಣದಾಗಿ ಉರಿದ ದೀಪವೆದುರು ನಿಲ್ಲಿಸುವರು. ರಾಜಕುಮಾರಿ ಇನ್ನೇನು ಜೀವ ಮುಗಿದ ಅವಸ್ಥೆಯಲ್ಲಿದ್ದಾಳೆ. ಸಂಜೀವಶಿವನನ್ನು ಅವಳ ಪಕ್ಕದಲ್ಲಿ ದೊಡ್ಡ ಜ್ಯೋತಿಯ ಹತ್ತಿರ ನಿಲ್ಲಿಸುವರು.)*

ತಾಳಿ ಕಟ್ಟುವ ಮುನ್ನ
ಮದುವೆಗೆ ತಾಯಿಯನ್ನ ಆಮಂತ್ರಿಸು,
ತಾಯಿ ಪ್ರೀತಳಾದ ಮೇಲೆ ಅಮರತ್ವ ಕೇಳಿಕೊ,
ಅದು ಜಾಣತನ.

ಸಂಜೀವಶಿವ : ನಿನ್ನಂತೆ ಪ್ರೀತಿಸಿ ಪೀಡಿಸಿದವರಿಲ್ಲ
ಮುದ್ದಿಸಿ ಮರೆತವರಿಲ್ಲ ತಾಯೆ.
ಸನ್ಮಾನ ಮಾಡಿ ಅವಮಾನಿಸಿದವರಿಲ್ಲ
ಕಾಪಾಡಿ ಕೈಬಿಟ್ಟು ತಳ್ಳದವರಿಲ್ಲ.
ಅಂಬೇ, ಜಗದಂಬೇ
ಸಕಲ ಚರಾಚರವ ಹೆದರಿಸಿಕೊಂಬೆ.
ನಿನ್ನ ಮಗ ನಮೋ ಎಂಬೇ ನನಗೆ ಸಾಕಾರಿಯಾಗೆಂಬೆ.
*(ನಿಧಾರನವಾಗಿ ಸಿಂಹಾಸನದ ಮೇಲೆ ಭಯಂಕರ ಆಕಾರದ ಗಿಡುಗ ಪಕ್ಷಿ ಪ್ರತ್ಯಕ್ಷವಾಗುತ್ತದೆ. ಅದರ ಕಣ್ಣು ಇನ್ನೂ ಭಯಾನಕವಾಗಿದೆ.)*

ಪಕ್ಷಿ : ಎಲ್ಲರ ಮೆಚ್ಚುಗೆಗೆ, ಹೊಗಳಿಕೆಗೆ,
ರಾಜಕುಮಾರಿಯ ಪ್ರೀತಿಗೆ,

ನನ್ನ ಅನುಗ್ರಹಕ್ಕೆ ಪಾತ್ರನಾದವನೇ, ಮಗನೇ ಸಂಜೀವಶಿವನೇ,
ನಿನಗೆ ಮಂಗಳವಾಗಲಿ.
ನಿನ್ನ ಭಕ್ತಿಯಿಂದ ಸಂಪ್ರೀತಳಾಗಿ ನಿನಗೆ
ಸತ್ಯದ ಅಂತಿಮದರ್ಶನದ ಅನುಗ್ರಹ ಮಾಡಿದ್ದೇನೆ.
ಸಾಮರ್ಥ್ಯವಿದ್ದಷ್ಟು ಗ್ರಹಿಸು.
ತಾಯಿ ನಾನು!
ಎಲ್ಲ ನುಂಗುವ ತಾಯಿ!
ಎಲ್ಲ ಉಗುಳುವ ತಾಯಿ!
ಎಲ್ಲ ಒಳಗೊಂಬಾಕೆ,
ಎಲ್ಲ ಹೊರಚೆಲ್ಲಿ ಬೆಳಗುವ ತಾಯಿ ನಾನು.
ಎಲ್ಲ ಎಲ್ಲದರ ಜೀವಜಾಲ, ಚರಾಚರದ
ಆದಿಅಂತ್ಯಗಳಿರದ ಅಖಂಡ ಬ್ರಹ್ಮಾಂಡದ ತಾಯಿ ನಾನು!
ಆಕಾರಗಳ ಸೃಷ್ಟಿಸುವವಳು.
ಆಕಾರಗಳ ಕರಗಿಸಿ ಎಲ್ಲ ಎಲ್ಲವನಿಲ್ಲದಾಗಿಸಿ
ಸೀಮೆದಪ್ಪಿಸುವ ನಿಸ್ಸೀಮ ಕಗ್ಗತ್ತಲೆ ನಾನು.
ಎಲ್ಲ ಬೆಳಕಿನ ಎಲ್ಲ ಚಲನೆಗಳ ಅಂತಿಮಗುರಿ!
ಎಲ್ಲ ಎಲ್ಲವ ಮುಕ್ಕಿ
ಬಗೆಬಗೆಯ ಕುಡಿಕೆಗಳಲ್ಲಿ ಕುದಿವ
ಪ್ರಾಣಂಗಳ ಹೀರಿ ತುಳುಕದವಳು
ಏಳೇಳು ಶರಧಿಗಳ ಕುಡಿಯುವವಳು
ಕುಡಿದು ಉಗುಳುವವಳು.
ಹದಿನಾಲ್ಕು ಲೋಕಗಳ ಆಳುವವಳು
ಅಳಿಸಿ ಬಾಳುವವಳು
ಎಷ್ಟೆಷ್ಟು ಭೇದಿಸಿದರಷ್ಟೂ ಅಭೇದ್ಯಳೋ
ಒಡೆಯಲಾರದ ಒಗಟು ನಾನು!
ನನ್ನ ಹುಡುಕಬಂದ ಸಾಧಕರೆದುರು
ಬಣ್ಣಗಳ ಚೆಲ್ಲಿ ಮೈಮರೆಸಿ ಅಡಗುವದು
ನನ್ನ ಚಾಳಿ.
ಬಹಳವಾದರೆ ಅವರ ಕಣ್ಣಿಗೆ
ಚಿಕ್ಕೆ ತಾರೆಗಳ ಚಿತ್ತಾರವುಳ್ಳ
ನನ್ನ ಬುರುಕಿ ಕಂಡೀತಷ್ಟೆ.
ಅಷ್ಟಕ್ಕೇ ಅವರು ಕಕ್ಕಾಬಿಕ್ಕಿ!
ಸತ್ಯವಾದ ಸತ್ಯ ಅಂತಿಮಸತ್ಯ ಎಂಬುವುದು

ಯಾವುದಾದರೂ ಇದ್ದರೆ, ಸಂಜೀವಶಿವನೇ
ಅದು ನಾನೇ ಮಗನೇ ! ಇನ್ನೊಂದಿಲ್ಲ!
ನನ್ನನ್ನ ಎಷ್ಟಾದರೂ ಹೆಸರಿನಿಂದ ಕರೆಯಬಹುದು.
ಶಿವಲಿಂಗನ ಹೆಸರಿನಲ್ಲಿ ಕೂಡ!
ಬೆಳಕಿಗೆ ಸೀಮೆಗಳಿವೆ, ಕತ್ತಲೆಗಿಲ್ಲ ಮಗನೇ!

ಸಂಜೀವಶಿವ : ಇದಕ್ಕಿಂತ ಹೆಚ್ಚಿನದೇನನ್ನೂ ನೀನು ಹೇಳಲಾರೆ ತಾಯಿ.
ಸಾವಿನ ದೇವತೆಯಾಗಿ ನಿನಗಿದು ಸಹಜ.
ತರ್ಕವೆಂದರೆ ತರ್ಕಕ್ಕೆ, ಬೇಕಾದರೆ ಪ್ರತ್ಯಕ್ಷ ಪ್ರಮಾಣಿಸಿ
ನಿನ್ನ ಸತ್ಯವನ್ನ ತೋರಿಸಬಲ್ಲೆ.
ಆದರೆ ಶಿವಲಿಂಗದ ಸತ್ಯ ಎಲ್ಲ ಪ್ರಮಾಣಗಳ
ಆಚೆಗಿನದಲ್ಲವೆ?

ಪಕ್ಷಿ : ಪ್ರಮಾಣಗಳಿಂದ ನನ್ನನ್ನೂ ಹಿಡಿಯಲಾಗಿಲ್ಲ ಕಂದಾ!

ಸಂಜೀವಶಿವ : ತನ್ನ ನಿಯತಿಗಳಿಂದ ತಂತಾನೆ ಕೈಕಾಲು ಕಟ್ಟಿಕೊಂಡವಳು
ಅಂತಿಮಸತ್ಯ ಹ್ಯಾಗಾದಳು ತಾಯಿ?

ಪಕ್ಷಿ : ನನ್ನ ನಿಯತಿಯ ಮೀರಿ ನಿನಗೆ
ಅಮರತ್ವ ನೀಡಬಲ್ಲೆ!
ಅದನ್ನು ಬಳಸಿಕೊಂಬ ವಿವೇಕ ನಿನ್ನಲ್ಲಿ ಇದೆಯೆಂದಾದರೆ

ಸಂಜೀವಶಿವ : ಸಾವಿನ ಭಯಕ್ಕಿಂತ ಅದಿಲ್ಲದ ಬದುಕಿನ ಬಗ್ಗೆ
ನನಗೆ ಹೆಚ್ಚು ಭಯವಿದೆ!
ಅಮರನಾಗಿ ನಿನ್ನಿಂದ ದೂರವಾಗುವುದಕ್ಕಿಂತ
ನಿನ್ನ ಮಗನಾಗಿ ಮನುಷ್ಯನಾಗಿರೋದೇ ನನ್ನ ಸೌಭಾಗ್ಯ ತಾಯಿ.

ಪಕ್ಷಿ : *(ಎದ್ದುನಿಂತು)* ನಿನ್ನ ಮಾತಿನಿಂದ ಸಂಪ್ರೀತಳಾಗಿದ್ದೇನೆ ಕಂದಾ!
ಮದುವೆಯ ಕಾಣಿಕೆಯಾಗಿ ನಿನಗೆ ಇಮ್ಮಡಿ ಆಯುಷ್ಯ ಕೊಟ್ಟಿದ್ದೇನೆ.
ತಾಳಿಯ ಕಟ್ಟು.

*(ರಾಜಕುಮಾರಿಗೆ ತಾಳಿ ಕಟ್ಟುವನು, ರಾಜಕುಮಾರಿ ಕುಸಿಯುವಳು.)*

ಸಂಜೀವಶಿವ : ಇಮ್ಮಡಿ ಆಯುಷ್ಯ ಕೊಟ್ಟುದಕ್ಕೆ
ಅನಂತ ಕೃತಜ್ಞತೆಗಳು ತಾಯೀ.
ಆದರೆ ಒಂದು ಮಾತನ್ನು ಹೇಳು. ನನಗಿತ್ತ

ಆಯುಷ್ಯವನ್ನಾದರೂ ನನಗಿಷ್ಟವಾದಂತೆ ಬಳಸುವ
ಸ್ವಾತಂತ್ರ್ಯ ನನಗುಂಟೆ?

ಪಕ್ಷಿ : ಉಂಟು ಆತ್ಮಹತ್ಯೆಗಾಗಿ ಬಳಸುವುದಿಲ್ಲವೆಂದಾದರೆ.

ಸಂಜೀವಶಿವ : *(ತನ್ನ ಆಯುಷ್ಯಜ್ಯೋತಿಯನ್ನೆತ್ತಿ, ಅದರಲ್ಲಿಯ ತೈಲವನ್ನು ಪಕ್ಕದ ರಾಜ ಕುಮಾರಿಯ ಪಣತಿಗೆ ಸುರಿಯುತ್ತ)*

ಹಾಗಿದ್ದರಿಗೋ ನನ್ನ ಶೇಷಾಯುಷ್ಯದ ಅರ್ಧವನ್ನ
ರಾಜಕುಮಾರಿಗೆ ಧಾರೆಯೆರೆದಿದ್ದೇನೆ.
ಅವಳಿನ್ನು ಬದುಕಬೇಕು.

*(ತಕ್ಷಣ ಪಕ್ಷಿ ಕೋಪ ಮತ್ತು ನೋವಿನಿಂದ ಭಯಾನಕವಾಗಿ ಕಿರಿಚಿಕೊಂಡು ಅಧೋಲೋಕವಿಡೀ ನಡುಗುತ್ತದೆ. ರಾಜಕುಮಾರಿಯ ಆಯುಷ್ಯ ಜ್ಯೋತಿ ಬರಬುರತ್ತ ತೇಜೋಮಯವಾಗಿ ಉರಿಯತೊಡಗುತ್ತದೆ. ರಾಜಕುಮಾರಿ ಮೆಲ್ಲಗೆ ಎದ್ದು ಗಾಬರಿಯಾಗಿ ಸುತ್ತ ನೋಡುತ್ತಿದ್ದಂತೆ ಅ ಸಹಾಯಕತೆಯಿಂದ ಪಕ್ಷಿ ಅಧಃಪತನಗೊಂಡಂತೆ ಸಿಂಹಾಸನದಲ್ಲಿ ಕುಸಿಯುತ್ತದೆ. ರಾಜಕುಮಾರಿ ಭಯದಲ್ಲಿ ಸಂಜೀವಶಿವನನ್ನು ತಬ್ಬಿ ಕೊ ಳ್ಳುವಳು. ಅಲ್ಲಿಯ ಭಯಾನಕವಾದ ಪ್ರಕಾಶ ಪ್ರಜ್ವಲವಾಗುತ್ತ ಇಡೀ ಮೃತ್ಯುಲೋಕವೇ ಸುಡುತ್ತಿರುವ ಅನುಭವವಾಗುತ್ತದೆ. ಅಸಹಾಯಕ ಪ ಕ್ಷಿಯ ಆರ್ತನಾದದಿಂದ ಸೂಚನೆ ಪಡೆದ ಗಿರಿಮಲ್ಲಿಗೆ ನಿರ್ಜೀವ ದನಿಯಲ್ಲಿ ಸಾರುತ್ತಾಳೆ.)*

ಗಿರಿಮಲ್ಲಿಗೆ : ಇವರಿಬ್ಬರೂ ಈ ಕ್ಷಣವೆ ಈ ಲೋಕದಿಂದ ತೊಲಗಲಿ.
ತಮ್ಮ ಲೋಕದಲ್ಲಿ ಯಾರ ಎದುರಿಗೂ
ಇಲ್ಲಿ ನಡೆದುದನ್ನ ಹೇಳದಿರಲಿ. ಹೇಳಿದರೆ – ಮೊದಲ
ವಾಕ್ಯ ಮುಗಿವ ಮುನ್ನವೇ ನಾಲಗೆ ಹಿರಿದು
ಸಾಯುವರೆಂದು ತಿಳಿದರಲಿ.
ಇವನ ವೈದ್ಯವೃತ್ತಿಗಿದ್ದ ತಾಯಿಯ ವರ ಇಂದಿನಿಂದ
ಪರಿಣಾಮಹೀನವೆಂದು ಅರಿತಿರಲಿ.

**ಮಂಗಳಂ**

## ಅನುಬಂಧ

ಕಂಬಾರ ಬರೆಯುವಂಥ ನಾಟಕವಾಗಲಿ, ಪದ್ಯಗಳಾಗಲಿ ಖಂಡಿತ ಪಾಶ್ಚಾತ್ಯರಲ್ಲೂ ಇಲ್ಲ.

**– ಯು.ಆರ್.ಅನಂತಮೂರ್ತಿ**

* * *

ಕಂಬಾರರು ಕನ್ನಡದ ರಂಗಭೂಮಿಗೆ ಮಳೆ ತಂದ ಋಷ್ಯಶೃಂಗರು. ಹಾಡುಗಳೆಂದರೆ ಕಂಪೆನಿ ಹಾಡುಗಳೆಂದು ಮಾತ್ರ ಅರ್ಥವಿದ್ದಾಗ ಮೊಟ್ಟ ಮೊದಲಿಗೆ 'ತೊಡಗಿಸುವ' 'ಗತ್ಯಾತ್ಮಕ' ಹಾಡುಗಳ ನಾಟಕ ಬರೆದ ಕಂಬಾರರ ಕವಿಸಾಮರ್ಥ್ಯದ ಬಗ್ಗೆ ನನಗಂತೂ ತುಂಬಾ ಗೌರವ, ಭಯ, ಅಸೂಯೆ. ನಮ್ಮಲ್ಲಿ ನಾಟಕಕಾರ ಮತ್ತೆ ಕವಿಯೆನಿಸಿಕೊಂಡಿದ್ದಾನೆ ಕಂಬಾರರ ಮೂಲಕ. ಅವರ ಜೋಕುಮಾರಸ್ವಾಮಿಯನ್ನು ನಾನು ಹುಡುಕಿದೆನೋ ಅಥವಾ ಜೋಕುಮಾರಸ್ವಾಮಿ ನನ್ನನ್ನು ಹುಡುಕಿದನೋ ನನಗಂತೂ ಅದರ ಪ್ರಯೋಗಕ್ರಿಯೆ 'ಯುರೇಕಾ' ಅನ್ನುವಂಥಾ ಸರಳ ಅನುಭವ.

ಕನ್ನಡದಲ್ಲೇ ಅಲ್ಲ, ಇಡೀ ದೇಶದಲ್ಲಿ ಕಂಬಾರರಷ್ಟು ತೀವ್ರವಾಗಿ ನೆಲದ ವಾಸನೆ ತುಂಬಿಕೊಂಡು ಜತೆಯಲ್ಲಿ ಸತ್ಯತ ಆಧುನಿಕತೆಗಳನ್ನು ಮೈಗೂಡಿಸಿಕೊಂಡಿರುವ ಸೃಜನಶೀಲ ನಾಟಕಕಾರ ಸಿಗುವುದು ದುರ್ಲಭ.

ನನ್ನ ಅಭಿಪ್ರಾಯದಲ್ಲಿ ದೇಶದ ಇಂದಿನ ಎಲ್ಲಾ ನಾಟಕಕಾರರ ನಡುವೆ ಕಂಬಾರರು ಅದ್ವಿತೀಯರು. ಅವರ ಜಾಗದಲ್ಲಿ ಇನ್ನೊಬ್ಬರನ್ನು ಯೋಚಿಸುವುದು ನನಗಂತೂ ಸಾಧ್ಯವಿಲ್ಲ.

**– ಬಿ.ವಿ. ಕಾರಂತ**

***

**ವಿನೋದ ಚೈತನ್ಯದ ನಾಟಕಕಾರ : ಚಂದ್ರಶೇಖರ ಕಂಬಾರ**
– *ಡಿ.ಆರ್.ನಾಗರಾಜ್*

ಅರುವತ್ತರ ದಶಕದ ಆರಂಭದಲ್ಲಿ ಚಂದ್ರಶೇಖರ ಕಂಬಾರರು ತಮ್ಮ ಮೊದಲ ನಾಟಕ ಋಷ್ಯಶೃಂಗವನ್ನು ಬರೆದಾಗ ಕನ್ನಡ ನಾಟಕದ ಇತಿಹಾಸದಲ್ಲಿ ಒಂದು ಕ್ರಾಂತಿಯನ್ನು ತಾವು ಶುರು ಮಾಡಿರುವ ಕಲ್ಪನೆ ಅವರಿಗೆ ಇರಲಿಲ್ಲ. ಪಾರಂಪರಿಕವಾದ 'ಬಯಲಾಟ' ಮಾದರಿಯಲ್ಲಿ ರಚಿತವಾದ ಆ ನಾಟಕ 'ಪರಕೀಯತೆ' ಮತ್ತು 'ಅಸ್ಮಿತೆ'ಯನ್ನು ಚರ್ಚಿಸುವ ಅತ್ಯಂತ ನವ್ಯದ ವಸ್ತುವನ್ನು ಒಳಗೊಂಡಿತ್ತು. ನಾಟಕದ ರೂಕ್ಕೆ ಸಂಬಂಧಿಸಿದಂತೆ ತಾವು ಒಂದು ಗಮನಾರ್ಹವಾದ ಪ್ರಯೋಗ ಮಾಡಿರುವುದರಿಂದ ಖಂಡಕಾವ್ಯ 'ಹೇಳತೇನೆ ಕೇಳ'ದಲ್ಲಿ ಅಂಥದೇ ವಿಷಯವನ್ನು ಕುರಿತು ಧ್ಯಾನಿಸಿದ್ದರು. (ಈವತ್ತಿಗೂ ಕೂಡ ಕಂಬಾರರು ಭಾರತದ ಪ್ರಮುಖ ಕವಿಗಳಲ್ಲೊಬ್ಬರು ಎಂಬುದು ನನ್ನ ದೃಢವಾದ ನಂಬಿಕೆ).

ಭಾರತೀಯ ಬರವಣಿಗೆಗೆ ನೀಡಿರುವ ಮಹತ್ವದ ಕೊಡುಗೆ ಎಂದರೆ ಅವರ 'ದೇಸಿ' ಕಲ್ಪನೆ; ಅವರ ಸಂವೇದನೆಯ ಕೇಂದ್ರ ಚೈತನ್ಯವಾದ ದೇಸಿಯತೆಯನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಈ ಪೀಠಿಕೆ ಅಗತ್ಯವಾಯಿತು. ಕಂಬಾರರ ಬರವಣಿಗೆಯಲ್ಲಿ 'ದೇಸಿ'ಯನ್ನು ಕುರಿತು ಮಾತನಾಡುವಾಗ ಆ ಪರಿಕಲ್ಪನೆಯ ಬಗ್ಗೆ ಸ್ವಲ್ಪ ದೀರ್ಘವಾದ ವಿವರಣೆ ನೀಡುವುದೂ ಕೂಡ ಆವಶ್ಯಕವೆನಿಸುತ್ತದೆ. ಹಳೆಗನ್ನಡ ಕಾವ್ಯ ಮೀಮಾಂಸೆಯ ಸಂದರ್ಭದಲ್ಲಿ 'ಮಾರ್ಗ' ಮತ್ತು 'ದೇಸಿ' ಎಂಬ ಎರಡು ಪ್ರಭೇದಗಳನ್ನು ಗುರ್ತಿಸುತ್ತೇವೆ. ಮೊದಲನೆಯ ಪದ್ಧತಿಯಲ್ಲಿ ವಿಶಾಲವಾದ ವಲಯದೊಡನೆ ವ್ಯವಹರಿಸುವ ಇಚ್ಚೆ ಮತ್ತು ಸಾಮರ್ಥ್ಯಕ್ಕೆ ಒತ್ತು ಬಿದ್ದರೆ, ಎರಡನೆಯ ಪದ್ಧತಿಯಲ್ಲಿ ಕಲ್ಪನೆಯ ಅಂತರ ವೀಕ್ಷಣೆಗೆ ಹೆಚ್ಚು ಒತ್ತು ಬೀಲುತ್ತದೆ; ಇಲ್ಲಿ ರೂಪಕಗಳ ವಿಸ್ತಾರದಲ್ಲಿ 'ದೇಸಿ' ಹೆಚ್ಚು ಪ್ರಸ್ತುತವಾಗುತ್ತದೆ. ಕಂಬಾರರನ್ನು ವರ್ಣಿಸುವಾಗ ದೇಶೀಯವಾದ ಎಂಬ ಮಾತನ್ನು ಬಳಸಲು ಪ್ರೇರಿತನಾದೆ; ಆದರೆ ಆ ಮಾತನ್ನೂ ಮನಸ್ಸು ಒಪ್ಪಲಿಲ್ಲ. 'ದೇಶೀಯವಾದ' ವೆಂಬ

ಪರಿಕಲ್ಪನೆಯನ್ನು ಸಮಕಾಲೀನ ಸಾಹಿತ್ಯ ಚಿಂತಕರು ಬಳಸುತ್ತಾ ಆ ಪದ ಗೌರವ ಸೂಚಕವಾಗುಳಿದಿಲ್ಲ; ತಮಗೆ ಅರ್ಥವಾಗದ ಸಂಗತಿಗಳನ್ನು ಅವರು ಸಾಮಾನ್ಯವಾಗಿ 'ದೇಶೀಯವಾದದ್ದು' ಎಂದು ಸಾರಾಸಗಟಾಗಿ ಬಣ್ಣಿಸಿಬಿಡುವ ಪರಿಪಾಠವಿದೆ.

ಭಾರತೀಯ ಸೃಜನಶೀಲತೆಯಲ್ಲಿ ಕಂಡುಬರುವ ಪ್ರಧಾನವಾದ ಪಾಶ್ಚಾತ್ಯ ಪ್ರಭಾವವನ್ನು ಸೌಮ್ಯೋಕ್ತಿಯಲ್ಲಿ ವಿಶಾಲವಾದ ವಿಶ್ವೀಯತೆ ಎಂದು ಕರೆಯಲಾಗುತ್ತಿದೆ; ಇದನ್ನು ನಾಲ್ಕು ಮಾರ್ಗಗಳಿಂದ ನಾವು ಎದುರುಗೊಳ್ಳಬಹುದೆಂದು ತೋರುತ್ತದೆ. ಅನುಕರಣೆಗಳು, ಬುಡಮೇಲುಗಾರರು, ಮುಗ್ಧರು ಹಾಗೂ ದೇವದಾಸಿಗಳು. ನನ್ನ ಪ್ರಕಾರ ಇವರೇ ಆ ನಾಲ್ಕು ವಿಧಾನಗಳನ್ನು ಪ್ರತಿನಿಧಿಸುವವರಾಗಿದ್ದಾರೆ. ಮೊದಲನೇ ಎರಡು ವರ್ಗದ ಜನರು ಪಶ್ಚಿಮದೊಡನೆ ಸರಾಗವಾದ ಸಂಬಂಧವನ್ನು ಹೊಂದಿದ್ದಾರೆ. ಬುಡಮೇಲುಗಾರರು ಅಂತಿಮವಾಗಿ ಪಶ್ಚಿಮದ ಪ್ರಭಾವವನ್ನು ಮೀರುವ ತುಡಿತವನ್ನು ಹೊಂದಿರುವುದು ನಿಜವಾದರೂ ಸಹ, ಮೂರು ಮತ್ತು ನಾಲ್ಕನೇ ಮಾದರಿಯ ಸೃಜನಶೀಲತೆ ನಮಗೆ ಬಹಳವಾಗಿ ಒಗ್ಗುವಂಥವು. ಸಾಹಿತ್ಯಕ ಸಂಸ್ಕೃತಿಗಳನ್ನು ಘಾಸಿಗೊಳಿಸುವಂಥ ಉತ್ಕಟವಾದ ವಿವಾದಗಳ ಬಗ್ಗೆ ದಿವ್ಯ ನಿರ್ಲಕ್ಷ್ಯದಿಂದಿರುವ ಹುನ್ನಾರವನ್ನು ಮುಗ್ಧರು ರೂಢಿಸಿಕೊಂಡಿದ್ದಾರೆ. ನಾಲ್ಕನೇ ವರ್ಗವಾದ 'ದೇವದಾಸಿ'ಗಳು ಮುಗ್ಧರು ಹಾಗೂ ಬುಡಮೇಲುಗಾರರು ಇಬ್ಬರ ವಿಧಾನಗಳನ್ನೂ ತಮ್ಮಲ್ಲಿ ಒಳಗೊಂಡಿದ್ದಾರೆ. ಕಂಬಾರರು 'ದೇಸಿ' ಕಲ್ಪನೆಯಲ್ಲಿ ಒಡಮೂಡಿ ಬಂದ ಮುಗ್ಧ ಬರಹಗಾರರಾಗಿದ್ದಾರೆ; ಹಾಗಾಗಿ, ಅವರು ಚಾರಿತ್ರಿಕ ಬದಲಾವಣೆಯ ಸಂಕೀರ್ಣ ಅನುಭವ ಶ್ರೇಣಿಯನ್ನು ನಿರಾಯಾಸವಾಗಿ ಹೀರಿಕೊಳ್ಳುವ ಚಿಂತಕರ ಜಾಯಮಾನಕ್ಕೆ ಸೇರಿದವರಾಗಿದ್ದಾರೆ. ಸೃಜನಾತ್ಮಕ ಮುಗ್ಧತೆ ಎನ್ನುವುದು ಕಂಬಾರರಿಗೆ ಒಂದು ಸಹಜ ಸ್ಥಿತಿಯಾಗಿರುವಂತೆಯೇ ಅದು ಒಂದು ಸೈದ್ಧಾಂತಿಕವಾದ ಆಯ್ಕೆಯೂ ಕೂಡ ಆಗಿದೆ. ಈ ಪ್ರಕ್ರಿಯೆಯ ಬಗ್ಗೆ ಕಂಬಾರರೇ 'ಜಾನಪದ ರಂಗಭೂಮಿ- ನಾನು ಕಂಡಂತೆ' ಎಂಬ ತಮ್ಮ ಆಂಗ್ಲಭಾಷೆಯ ಲೇಖನದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ; ಇದು ಜೋಕುಮಾರಸ್ವಾಮಿ (೧೯೭೩) ನಾಟಕದ ಇಂಗ್ಲಿಷ್ ಅನುವಾದಕ್ಕೆ ಬರೆದ ಮುನ್ನುಡಿಯೂ ಆಗಿದೆ.

"ನನ್ನ ಬಗ್ಗೆಯೇ ಮಾತನಾಡುತ್ತೇನೆ ಮೊದಲು. ಭೌಗೋಳಿಕವಾಗಿ ನಾನು ಒಂದು ಗ್ರಾಮಕ್ಕೆ ಸೇರಿದವನು, ಸಾಮಾಜಿಕವಾಗಿ ಒಂದು ಅಲಕ್ಷಿತವಾದ, ಅಶಿಕ್ಷಿತವಾದ ಸಮುದಾಯಕ್ಕೆ ಸೇರಿದವನು. ಹಾಗಾಗಿ ನಾನೊಬ್ಬ ಜಾನಪದ ಮನುಷ್ಯ- ಏಕೆಂದರೆ ನಾನು ಬೇರೇನೂ ಆಗಲಿಕ್ಕೆ ಸಾಧ್ಯವಿಲ್ಲ. (ಈ ಅಂಶವನ್ನು ನಾನು ಒತ್ತಿ ಹೇಳಲು ಕಾರಣ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಸುಶಿಕ್ಷಿತ ನಗರ ಪ್ರದೇಶದವರ ಪೈಕಿ 'ಜಾನಪದೀಯತೆ' ಎಂಬುದು ಬಹಳ ಆಕರ್ಷಕವಾಗತೊಡಗಿದೆ). ನಾನು ಬರೆದ ಮೊದಲಿನ ದೀರ್ಘ ಪದ್ಯ 'ಹೇಳತೇನ ಕೇಳ'ವು ಸಂಪೂರ್ಣವಾಗಿ ನನ್ನ ನೆಲದಿಂದ ರೂಪುಗೊಂಡದ್ದು. ಇಪ್ಪತ್ತೈದು ವರ್ಷಗಳ ನಂತರ ಮತ್ತೆ ಆ ಪದ್ಯದತ್ತ ಹೊರಳಿ ನೋಡಿದಾಗ ಇದುವರೆಗೆ ನಾನು ಬರೆದಿರುವುದೆಲ್ಲವೂ ಅದರೊಡನೆ ವಸ್ತು ವಿಷಯದಲ್ಲಿ ಒಂದು ಸಂಬಂಧವನ್ನು ಹೊಂದಿರುವುದು ಕಾಣುತ್ತೆ.... 'ಹೇಳತೇನ ಕೇಳ'ವನ್ನು ರೂಪಿಸಿದ ಜಾನಪದ ಮಾಧ್ಯಮವೇ ಜೋಕುಮಾರಸ್ವಾಮಿ ಮತ್ತು ಇತರ ನಾಟಕಗಳನ್ನು ಸಾಧ್ಯವಾಗಿಸಿತು ಎಂದು ಧೈರ್ಯವಾಗಿ ಹೇಳುತ್ತೇನೆ. ನನ್ನೊಳಗಿನ ಉತ್ಕಟವಾದ ಅನ್ನಿಸಿಕೆಯೆಂದರೆ ಒಂದು ಸಮಗ್ರವಾದ ಕಲೆಯನ್ನು ನಾನು ನಿಭಾಯಿಸುತ್ತಿದ್ದೇನೆ ಎಂಬುದು – ಇಷ್ಟು ವರ್ಷ ಈ ಅನ್ನಿಸಿಕೆ ನನ್ನೊಳಗಿದೆ – ಇನ್ನು ಮುಮದೆಯೂ ಅದು ಸ್ಥಾಯಿಯಾಗಿರುವುದೆನ್ನಲು ಅಡ್ಡಿಯಿಲ್ಲ."

ಗಿರೀಶ್ ಕಾರ್ನಾಡರಂಥ ನಾಟಕಕಾರರು ಹಯವದನದಂಥ ಸುಂದರವಾದ ನಾಟಕವನ್ನು ಬರೆಯುವಾಗ ಜಾನಪದದ ರೂಪವನ್ನು ಪ್ರಜ್ಞಾಪೂರ್ವಕವಾಗಿ ಆರಿಸಿಕೊಳ್ಳುತ್ತಾರೆ. ಕಂಬಾರರು ಮತ್ತು ಕಾರ್ನಾಡರ ನಡುವಿನ ವ್ಯತ್ಯಾಸವಿರುವುದೂ ಇಲ್ಲಿಯೇ; ರೂಪದ ಜೊತೆಗೆ ಕಾರ್ನಾಡರು ಪ್ರಜ್ಞಾಪೂರ್ವಕವಾಗಿ ಬೌದ್ಧಿಕವಾಗಿ ಮುಖಾಮುಖಿಯಾಗುವುದರಿಂದ ಅವರು ಜಾನಪದ ವಿಷಯವನ್ನು ಎತ್ತಿಕೊಂಡಾಗಲೆಲ್ಲ ಅವರ ನಾಟಕಗಳು ಹೆಚ್ಚು ಸ್ಪಷ್ಟ ವಿನ್ಯಾಸದಿಂದ ಒಡಗೂಡಿರುತ್ತವೆ. ಅವು ಕಾರ್ನಾಡರ ಮಾರ್ಗದರ್ಶಿ ಎ.ಕೆ. ರಾಮಾನುಜನ್‌ರಿಂದ ರೂಪಿಸಲ್ಪಟ್ಟ ಕಥೆಗಳನ್ನು ಆಧರಿಸಿದ ನಾಟಕಗಳು ಎಂಬುದನ್ನು ನಾವು ಮರೆಯುವಂತಿಲ್ಲ. ಆದಾಗ್ಯೂ ಈ ನಾಟಕಗಳು ಹೊಚ್ಚ ಹೊಸದಾಗಿ ಕಾಣುತ್ತವೆ. ಕಂಬಾರರು ಮಾತ್ರ ರೂಪದ ಬಗ್ಗೆ ಹೆಚ್ಚು ಆತ್ಮವಿಶ್ವಾಸದಿಂದಿರುತ್ತಾರೆ; ಆದರೆ ಅರ್ಥದ ವಿಷಯದಲ್ಲಿ ಅವರಿಗೆ ಸಂದಿಗ್ಧತೆಯಿದೆ. ಅವರ ನಾಟಕಗಳು ಸಂಕೀರ್ಣವಾದ ಅರ್ಥಗಳಿಂದ ಇರುವುದಕ್ಕೆ ಇದು ಕಾರಣ.

ಮೂಲತಃ ನಗರ ಸಂವೇದನೆಯೊಂದನ್ನು ಮರೆಮಾಚಲು ಅಥವಾ ಅನ್ವೇಷಿಸಲು ಕಂಬಾರರು ಬೇಕಂತಲೇ ದೇಶೀಯ ರೂಪಕಗಳನ್ನು ಬಳಸುವುದಿಲ್ಲ. ಕಂಬಾರರು ಹಳೆಯ ಜಗತ್ತಿನ ಒಂದು ಅಪ್ಪಟ ಅಂಗವಾಗಿರುವಂಥವರು. ಅವರ ಕಲ್ಪನೆ, ಅವರ ಭಾವನಾ ಪ್ರಪಂಚದಲ್ಲಿ ನಮಗೆ ಗೋಚರವಾಗುವ ದೇವತೆಗಳು, ಭೂತಪ್ರೇತಗಳು ಹಾಗೂ ಮೂಢನಂಬಿಕೆಗಳು ಆ ಪ್ರಪಂಚದ ಸಹಜ ಸದಸ್ಯರು – ಆದರೆ ಭ್ರಮನಿರಸನಗೊಂಡ ಆಧುನಿಕರು ಒಪ್ಪದ ವಸ್ತು ವಿಶೇಷತೆಗಳು ಹಾಗೂ ಸಂಗತಿಗಳು. ಕಂಬಾರರು ಭ್ರಮನಿರಸಗೊಳ್ಳುವುದಿಲ್ಲವಾದರೂ ಅವರು ಚಿತ್ರಿಸುವ ಲೋಕ ಬೌದ್ಧಿಕವಾಗಿ ಆಸಕ್ತಿಯನ್ನು ಉಂಟುಮಾಡುವಂಥದೇ ಆಗಿದೆ. 'ದೇಸಿ' ಕಲ್ಪನೆಯ ಪ್ರಧಾನವಾದ ಗುಣವೆಂದರೆ ಪಾಶ್ಚಾತ್ಯ ರೂಪಗಳಿಂದಾಗಲೀ ಅಥವಾ ತರ್ಕದಿಂದಾಗಲೀ ಘಾಸಿಗೊಳ್ಳುವಂಥದಲ್ಲ. ಅವರಲ್ಲಿ ಮುಗ್ಧತೆ ಎನ್ನುವುದು ಬೌದ್ಧಿಕ ಸ್ಥೈರ್ಯದ ಚಿನ್ಹೆಯಾಗಿದೆ.

ಕಂಬಾರರು ತಮ್ಮ ದೇಶೀಯ ಲೋಕವನ್ನು ಆಂಶಿಕವಾಗಿ ರಚಿಸಿಕೊಳ್ಳುತ್ತಾರೆ; ಚರಿತ್ರೆ, ಆಧ್ಯಾತ್ಮಿಕತೆ, ಧಾರ್ಮಿಕ ಅನುಭವಗಳು ಹಾಗೂ ಕಲೆಯ ಮೀಮಾಂಸೆಗೆ ಸಂಬಂಧಿಸಿದಂತೆ ಅವರು ತಮ್ಮದೇ ಓದನ್ನು ಸೃಷ್ಟಿಸಿಕೊಳ್ಳುತ್ತಾರೆ. ಒಳ್ಳೆಯದಕ್ಕೋ ಕೆಟ್ಟದಕ್ಕೋ ಒಟ್ಟಿನಲ್ಲಿ ಕಂಬಾರರಂಥ ಲೇಖಕರು ಸಮಗ್ರ ಸೃಷ್ಟಿಕರ್ತರಾಗಿದ್ದಾರೆ. ಕೇವಲ ನಾಟಕ ರಚನೆಯಿಂದಷ್ಟೇ ಅವರು ತೃಪ್ತರಾಗಲಾರರು; ಅಂಥ ನಾಟಕಗಳನ್ನು ಬರೆಯಲು ಒಬ್ಬ ಲೇಖಕ ತನಗಾಗಿಯೇ ಒಂದು ಬೌದ್ಧಿಕ ವಿಶ್ವವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಕಂಬಾರರು ಅಂಥ ವಿಶ್ವವೊಂದನ್ನು ಯಶಸ್ವಿಯಾಗಿ ರಚಿಸಿಕೊಂಡಿದ್ದಾರೆ. ಕೆಲವು ವೇಳೆ ಪುರಾಣ ಮತ್ತು ಚರಿತ್ರೆಯ ನಡುವಿನ ಗೆರೆಯನ್ನು ಕೂಡ ಕಂಬಾರರು ನಿರಾಕರಿಸಿಬಿಡುತ್ತಾರೆ. ಉದಾಹರಣೆಗೆ, ಭಾಷೆ, ಸಂಸ್ಕೃತಿ, ಚರಿತ್ರೆ, ರಾಜಕೀಯ ಸಿದ್ಧಾಂತ – ಇತ್ಯಾದಿಗಳ ಬಗ್ಗೆ ಇತ್ತೀಚಿನ ತಾತ್ವಿಕ ವಾಗ್ವಾದಗಳನ್ನು ಅಂತಸ್ಥ ಮಾಡಿಕೊಂಡು ಕಾರ್ನಾಡರು ಬಹಳ ಪ್ರಖರವಾಗಿ ವಾದ ಮಂಡಿಸಬಲ್ಲರು. ಕಂಬಾರರು ಈ ಮಾರ್ಗವನ್ನನುಸರಿಸದೆ ಈ ಎಲ್ಲ ತತ್ತ್ವಗಳಿಗೆ ತಮ್ಮದೇ ಆದ ನಿಲುವನ್ನು ವ್ಯಕ್ತಪಡಿಸುವುದರ ಮೂಲಕ ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುತ್ತಾರೆ. ಅವರ ತಾತ್ವಿಕತೆಯ ಮೂಲವನ್ನು ನಾವು ಅವರ ಸೃಜನಶೀಲತೆಯಲ್ಲೇ ಹುಡುಕಬೇಕಾಗಿದೆ. ವಿಪರ್ಯಾಸವೆನ್ನುವಂತೆ ಕಂಬಾರರ ಅತಿ ದೇಶೀಯತೆಯು ಅವರನ್ನು ಒಬ್ಬ ಅಥ್ಯಾಧುನಿಕನನ್ನಾಗಿ ಮಾಡಿದೆ.

ಕಂಬಾರರ ನಾಟಕಗಳು ಹೊಸ ಜಗತ್ತಿನೊಡನೆ ಹೊಂದಾಣಿಕೆ ಮಾಡಿಕೊಳ್ಳುತ್ತಿರುವ ಹಳೆಯ ಜಗತ್ತಿನ ಪ್ರಸಂಗಗಳಾಗಿವೆ. ಪುರಾಣ ಮತ್ತು ಚರಿತ್ರೆಯ ನಡುವಿನ ಸಂಘರ್ಷವನ್ನಿಲ್ಲಿ ಕಾಣುತ್ತೇವೆ ಹಾಗೂ ಕಂಬಾರರ ಕೃತಿಗಳಲ್ಲಿ ರಾಜಕೀಯ ವಸ್ತುಗಳು ಹೊರಹೊಮ್ಮುವುದನ್ನು ಗಮನಿಸುತ್ತೇವೆ. ಕಂಬಾರರ ಮೊದಲ ನಾಟಕ ಜೋಕುಮಾರಸ್ವಾಮಿ ಕನ್ನಡ ರಂಗಭೂಮಿಯಲ್ಲಿ ಪ್ರಖ್ಯಾತವಾದಂತೆ ಇತರ ಭಾಷೆಗಳಲ್ಲೂ ಪ್ರಸಿದ್ಧವಾಯಿತು. ಜೋಕುಮಾರಸ್ವಾಮಿ ಕರ್ನಾಟಕದ ಸಮಾಜವಾದಿಗಳನ್ನು ಆಕರ್ಷಿಸಿತು. 'ಉಳುವವನಗೇ ಭೂಮಿ' ಎಂಬ ವಸ್ತುವನ್ನು ಒಳಗೊಂಡ ನಾಟಕ ಇದು ಎಂದು ಅವರು ಬಗೆದರು. ಸಮಾಜವಾದೀ ಪಕ್ಷದ ಅನೇಕ ಮುಖಂಡರು ಈ ನಾಟಕವು ತಮ್ಮ ಸಿದ್ಧಾಂತವನ್ನು ಪ್ರತಿಫಲಿಸುತ್ತದೆಯೆಂದು ತಮ್ಮ ಬಳಿಯೇ ಹೇಳಿಕೊಂಡಿದ್ದಾರೆ ಎಂದು ಕಂಬಾರರೇ ಪ್ರಸ್ತಾಪಿಸುವುದುಂಟು. ಈ ನಾಟಕದಲ್ಲಿ ಕ್ರೂರಿಗಳು ಹಾಗೂ ದಬ್ಬಾಳಿಕೆ ನಡೆಸುವ ಗ್ರಾಮದ ಮೇಲ್ಜಾತಿಯವರ ಉಪಟಳದ ವಿರುದ್ಧ ಸೆಟೆದು ನಿಲ್ಲುವ ದುರ್ಬಲರೂ ಭೂರಹಿತರೂ ಆದ ಜನಸಮುದಾಯವನ್ನೊಳಗೊಂಡಂಥ ಅನೇಕ ದೃಶ್ಯಗಳು ಬರುತ್ತವೆ. ನಾಟಕದ ನಾಯಕ ಬಸಣ್ಣ ತುಳಿತಕ್ಕೊಳಗಾದವನು. ಜಮೀನ್ದಾರನ ವಿರುದ್ಧ ನಿಲ್ಲುವಂತೆ ಸಂಘಟಿಸುತ್ತಾನೆ. ಊರ ಗೌಡ ಮತ್ತು ಪ್ರತಿಭಟನಕಾರ ಬಸವಣ್ಣನ ನಡುವೆ ನಡೆಯುವ ಈ ಸಂಭಾಷನೆಯನ್ನು ಗಮನಿಸಿ :

ಬಸಣ್ಣ : ನನ್ ಹತ್ರಾನೂ ಬಂದೂಕು ಐತಿ, ಆದ್ರ ನಾನು ಸುಟ್ಟರ್ ಜನ ಸಾಯೂದಿಲ್ಲ. ಜನ ಹೆಚ್ತಾರಾ. (ನಗುತ್ತಾ)

ನಿಂಗಿ ಹೇಳ್ತಿದ್ಲು ನಿಂಗಾ ನರೆ ಕೂದ್ಲು ಬಂದವಾ ಅಂತ. ನಿಜವಾ ಗೌಡ?

ಗೌಡ : ತೋರಿಸ್ಲೇನಾ? ಇಲ್ಲಿ ನೋಡು ಬಂದೂಕು (ಅವನು ಬಂದೂಕು ಎತಿಕೋತಾಯಿದ್ದ ಹಾಗೆ ಬಸಣ್ಣ ಅದರ ಬಾಯಿಗೆ ಕಿವಿ ಕೊಡುತ್ತಾನೆ.)

ಬಸಣ್ಣ : ಅದು ಏನ್ ಹೇಳ್ತತಾ ಅಂತ ನಾನೂ ಕೇಳ್ತೀನಿ... ಏನೂ ಕೇಳಿಸ್ತಾಯಿಲ್ವಲ್ಲ. (ಬಂದೂಕು ಕಿತ್ತುಕೊಂಡು ಅತ್ತ ಬಿಸಾಕಿಬಿಡುತ್ತಾನೆ) ತೊಲಗಿ ಹೋಗು, ಅಧಿಕ ಪ್ರಸಂಗದವ್ನೆ. ಹೊಲಕ ಕಾಲಿಟ್ರೆ ನನ್ನ ಕಾಲು ಮುರೀತೀಯೇನ. ಹೌದೇನ? ನಿನ ಕಾಲಿನ ಬಗ್ಗೆ ನಿನಗೆ ದಿಗಿಲಿಲ್ಲೇನ? ಹೊಟ್ಟೆಗೆ ಹಿಟ್ಟು ಕಾಣದಂತೆ ರಟ್ಟೆ ಮುರಿದು ಹೊಲ ಸುದ್ದ ಮಾಡಿದ್ವಿ, ನಾನು ನನ್ನ ಅಪ್ಪ. ದೆವ್ವದ ಜಾಗ ಅಂತ ಜನ ಹಗಲು ಹೊತ್ತೂ ಕೂಡ ಅಲ್ಲಿ ತಿರುಗಾಡೋದಕ್ಕೂ ಹೆದರುವಂಥ ಕಾಲ್ದಲ್ಲಿ ನಾನೂ ನನ್ನ ಅಪ್ಪ ಅಲ್ಲಿ ಹಗಲೂ ರಾತ್ರಿ ದುಡಿದ್ವಿ! ಈಗ ಇಂವ ಬಂದು ಹೊಲ ನನ್ನದು ಅಂತ ಹೇಳ್ತಾ ಅವ್ನ!

ಇದು ಒಂದು ವರ್ಗದ ಸಂಘರ್ಷದ ಪ್ರಸಂಗವೆಂದು ಸುಲಭವಾಗಿ ನಿರ್ಧರಿಸಲು ಅನುಕೂಲವಾದಂಥ ಸಂಭಾಷಣೆ; ಆದರೆ ಆ ರೀತಿ ಅರ್ಥ ಮಾಡಿಕೊಂಡರೆ, ಅಂಶವನ್ನೇ ಅಖಂಡವೆಂದು ವ್ಯಾಖ್ಯಾನಿಸಿದ ಹಾಗೆ ಆಗುತ್ತದೆ. ಕಂಬಾರರ ಪ್ರಪಂಚದಲ್ಲಿ ಪುರಾಣಗಳು ಚರಿತ್ರೆಯನ್ನು ವಿಷದ ಪಡಿಸುತ್ತವೆ. ಈ ನಾಟಕದ ಉದ್ದಕ್ಕೂ ಬಸಣ್ಣ ಸೃಜನಶೀಲತೆಯ ಒಂದು ಆದಿಮ ರೂಪವಾಗಿ ಕಾಣಿಸಿಕೊಳ್ಳುತ್ತಾನೆ; ಕಾಮದ ಸಂಕೇತವಾಗಿ ಅವನು ಗೋಚರಿಸುತ್ತಾ ಇತರ ಸಾಮೂಹಿಕ ವ್ಯವಸ್ಥೆಯನ್ನು ಹೀಗಳೆಯುವಂತೆಯೂ ತೋರುತ್ತದೆ. ಸಮಾಜವನ್ನು ನಿಯಂತ್ರಿಸುವ ಸಾಮಾನ್ಯ ವಾದ ನೀತಿ ನಡಾವಳಿಗಳಿಗೆ ಅತೀತವಾಗಿ ಇದ್ದಾನೆ ಬಸಣ್ಣ. ಮೇಲೆ ಕಾಣಿಸಿರುವ ಸಂಭಾಷಣೆಯು ಕಾಮದ ಶಕ್ತಿ ಮತ್ತು ಅದರ ಗೈರುಹಾಜರಿಯ ನಡುವೆ ನಡೆಯುವ ಸಂಘರ್ಷದ ಸಂಕೇತವಾಗಿದೆ; ಕಂಬಾರರು ಕಾಮದ ಸಾಮರ್ಥ್ಯದ ಪರವಾಗಿದ್ದಾರೆ. ಕಂಬಾರರು ಚರಿತ್ರೆಯನ್ನು ಓದುವ ಕ್ರಮ – ಸಮಕಾಲೀನ ಚರಿತ್ರೆಯೂ ಸೇರಿದಂತೆ – ಯಾವಾಗಲೂ ಅದು ಫಲಶಕ್ತಿಯ ಪುರಾಣವಾಗಿದೆ ಎಂಬ ಹಿನ್ನೆಲೆಯಿಂದ ರೂಪಿತವಾದದ್ದಾಗಿರುತ್ತದೆ. ಅಸ್ತಿತ್ವದ ಒಂದು ವಿನ್ಯಾಸವಾಗಿ ಮಾತ್ರ ನಾಟಕದಲ್ಲಿ ಸಮಾಜವಾದಿ ಅರ್ಥ ಕಾಣಿಸಿಕೊಳ್ಳುತ್ತದೆ; ರಾಜಕೀಯವಾದ ಸಂಕೇತವು ಪುರಾಣ ಪ್ರಕ್ರಿಯೆ ಮತ್ತು ಕ್ರಿಯೆಯ ಘನ ವಿನ್ಯಾಸದಲ್ಲಿ ಅಂತರ್ಗತವಾಗಿಬಿಡುತ್ತದೆ. ಈ ನಾಟಕವನ್ನು ಅನುವಾದಿಸಿರುವ ರಾಜೀವ್ ತಾರಾನಾಥರು ಪುಸ್ತಕಕ್ಕೆ ಒಂದು ಸುಂದರವಾದ ಪೀಠಿಕೆಯನ್ನು ಬರೆಯುತ್ತಾ ಹೀಗೆ ಹೇಳಿದ್ದಾರೆ : "ಪೌರಾಣಿಕವಾದ ಅಸ್ತಿತ್ವ ಆ ಪ್ರಪಂಚದಲ್ಲಿ ಸಹಜವೂ, ವಾಸ್ತವವೂ ಆಗಿದೆ." ನಾವು ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ಚರಿತ್ರೆಯು ಒಂದು ಸರ್ವವ್ಯಾಪಿಯಾದ ವಾಸ್ತವವಾಗಿ ಕಂಬಾರರ ಜಗತ್ತನ್ನು ಪ್ರವೇಶಿಸುವುದಿಲ್ಲ. ಅದು ಕೇವಲ ಪೌರಾಣಿಕ ವಾಸ್ತವದ ಒಂದು ಅಂಗವಾಗಿ ಮಾತ್ರ ಕಾಣಿಸಿಕೊಳ್ಳುತ್ತದೆ.

ಕನ್ನಡ ಜಾನಪದ ರಂಗಭೂಮಿಯ ದೊಡ್ಡಾಟ ಮತ್ತು ಸಣ್ಣಾಟ ಎಂಬ ಎರಡು ಪ್ರಕಾರಗಳಲ್ಲೂ ಕಂಬಾರರ ಕಲ್ಪನೆ ಕ್ರಿಯಾಶೀಲವಾಗಿದೆ. ಸಣ್ಣಾಟದ ವೈನೋದಿಕ ಮಾರ್ಗದ ಮೂಲಕವೇ ಕಂಬಾರರು ಪ್ರಭುತ್ವ ಹಾಗೂ ಜನತಂತ್ರದ ಅವನತಿಯನ್ನು ಅನ್ವೇಷಿಸುತ್ತಾರೆ. ಕಂಬಾರರ ದೃಷ್ಟಿಯಲ್ಲಿ ಪ್ರಜಾಪ್ರಭುತ್ವವೂ ಕೂಡ ಭಿನ್ನ ನಡೆಯುತ್ತಿರುವ ರಾಜದರ್ಬಾರೇ. ಸಾಂಬಶಿವ ಪ್ರಹಸನ (೧೯೭೫) ವೆಂಬ ನಾಟಕದಲ್ಲಿ ಅವರು ಈ ನಿಜವನ್ನು ನಿರೂಪಿಸುತ್ತಾರೆ. ಪ್ರಜಾಪ್ರಭುತ್ವವನ್ನು ರಾಜತ್ವದ ಅಣಕವೆಂದು ನಿರೂಪಿಸುವುದರ ಮೂಲಕ ಈ ಸಂಸ್ಥೆಯನ್ನು ಟೀಕಿಸುವ ಜಾನಪದ ಮಾರ್ಗವನ್ನು ಕಂಬಾರರು ಕಂಡುಕೊಳ್ಳುತ್ತಾರೆ. ಹೊಸ ತರಹದ ರಾಜರ ದರ್ಬಾರು ಎಂದು ಪ್ರಜಾಪ್ರಭುತ್ವವನ್ನು ಕಂಬಾರರು ರಚಿಸುತ್ತಾ ಅದರ ಅಸಂಗತತೆ ಮತ್ತು ವಿಲಕ್ಷಣತೆಯ ಕಡೆ ನಮ್ಮ ಗಮನವನ್ನು ಸೆಳೆಯುತ್ತಾರೆ. ನಾಟಕದ ಕಿನ್ನರ ಲೋಕದ ಕತೆಗೂ ಮತ್ತು ಅದರಲ್ಲಿ ಅಡಕವಾದ ರಾಜಕೀಯ ಸಂದರ್ಭಕ್ಕೂ ಒಂದು ಬಗೆಯ ಕರ್ಷಣ ಏರ್ಪಡುತ್ತದೆ. 'ರಾಜ-ವಿದೂಷಕ'ನೆಂಬ ಒಬ್ಬ ವಿಶಿಷ್ಟ ಮನುಷ್ಯನನ್ನು ಸೃಷ್ಟಿಸಿ ಕಂಬಾರರು ರಂಗ ಮಾಧ್ಯಮದ ಗರಿಷ್ಠ ಸಾಧ್ಯತೆಗಳ ಸಾಕ್ಷಾತ್ಕಾರಕ್ಕೆ ಪ್ರಯತ್ನಿಸಿದ್ದಾರೆ. ನಾಟಕದ ಕೇಂದ್ರ ಪಾತ್ರಗಳು ಒಂದು ಬಗೆಯ ವಂಚಕರು; ಅವರ ಮೂಲಕ ಆಳುವವರ ಅಸಂಗತ ಬದುಕು ಮತ್ತು ಕಪಟವನ್ನು ಬಯಲು ಮಾಡುತ್ತಾರೆ. ವ್ಯವಸ್ಥೆ ತನ್ನ ಬಗ್ಗೆ ನೀಡುವ ನಿರೂಪಣೆಯನ್ನು ಕಂಬಾರರು ತಿರಸ್ಕರಿಸುತ್ತಾರೆ. ಹಾಗೆಯೇ ಕ್ರಿಯೆಗಳನ್ನು ಕೂಡ ಅವರು ನಿರಾಕರಿಸುತ್ತಾರೆ. ನಾಟಕವು ಚರಿತ್ರೆ ಮತ್ತು ಸಾಮಾಜಿಕ ಬದಲಾವಣೆಯನ್ನು ಕುರಿತು ಒಂದು ತತ್ವವನ್ನು ಮುಂದಿಡುತ್ತದೆ; ಇದರಲ್ಲಿ ಪ್ರತಿಯೊಬ್ಬ ವ್ಯಕ್ತಿ ಮತ್ತು

ಪ್ರತಿಯೊಂದು ಬಲ ಬದಲಾವಣೆಯು ಒಂದು ಘಟ್ಟವನ್ನು ಪ್ರತಿನಿಧಿಸುತ್ತದೆ. ಭವ್ಯವಾದದ್ದು ಮತ್ತು ಕ್ಷುಲ್ಲಕವಾದದ್ದು ಸ್ಥಳ ಬದಲಾವಣೆ ಮಾಡಿಕೊಳ್ಳುತ್ತವೆ. ಈ ರೀತಿ ವ್ಯತ್ಯಯದಿಂದಾಗಿ ಮಾನವ ಚರಿತ್ರೆಯನ್ನಷ್ಟೇ ಅಲ್ಲದೆ ನಿಸರ್ಗವನ್ನು ನಿಯಂತ್ರಿಸುವ ವಿಶ್ವೇಯ ತತ್ವದ ದರ್ಶನವಾಗುತ್ತದೆ. ಚರಿತ್ರೆ ಮತ್ತು ನಿಸರ್ಗ ಪರಸ್ಪರ ಸ್ಥಳ ಬದಲಾಯಿಸಿಕೊಳ್ಳುವ ತತ್ವಗಳಾಗುವುದನ್ನು ಕಾಣುತ್ತೇವೆ.

ಈ ವಿಧಾನವನ್ನನುಸರಿಸಿ ರಾಜಕೀಯ ವಸ್ತುಗಳನ್ನು ನಿಭಾಯಿಸುವುದು ಕಂಬಾರರಿಗೆ ಸಾಧ್ಯವಾಗಿರುವುದಕ್ಕೆ ಕಾರಣ ಅವರು ತಮ್ಮದೇ ಆದ ಜಾನಪದದ ತತ್ವವನ್ನು ನಿರೂಪಿಸಿ ಕೊಂಡಿರುವುದು; ಶೂದ್ರ ಜಗತ್ತಿನ ಜನಪದವೇ ಅವರ ಜೀವಾಳ. ಜ್ಯೋತಿಬಾ ಫುಲೆ, ಪೆರಿಯಾರ್ ಹಾಗೂ ಅಂಬೇಡ್ಕರ್ ಅವರು ಪರಿಭಾವಿಸಿದ ಕ್ರಮಕ್ಕಿಂತ ಭಿನ್ನವಾಗಿ ಭಾರತೀಯ ಚರಿತ್ರೆ ಮತ್ತು ಸಂಸ್ಕೃತಿಯನ್ನು ಕಂಬಾರರು ಅರ್ಥೈಸುತ್ತಾ ಪರ್ಯಾರವಾದ ಒಂದು ಶೂದ್ರತ್ವ ತತ್ವವನ್ನು ಮುನ್ನೆಲೆಗೆ ತರುತ್ತಾರೆ. ಅವರು ನಿರೂಪಿಸುವ ಸಾಂಸ್ಕೃತಿಕ ಕ್ರೋಧದ ರಾಜಕಾರಣವು ಉಚ್ಛಕಂಠದ ಹಾಸ್ಯವಾಗಿ ಪರಿಗಣಿಸುತ್ತಾ ಶೂದ್ರರ ವೈನೋದಿಕ ಚೈತನ್ಯವು ಸಾಂಸ್ಕೃತಿಕ ತತ್ವದ ಕೇಂದ್ರದಲ್ಲಿ ಸ್ಥಾಪಿತವಾಗುತ್ತದೆ. ದಲಿತರು ಮತ್ತು ಅತಿಶೂದ್ರರು ಬರೆದಂಥ ಸಾಹಿತ್ಯಕ ಅಥವಾ ರಾಜಕೀಯ ಬರಹಗಳನ್ನು ಓದುವ ಸಂದರ್ಭ ಬಂದಾಗ ಅವರ ಹದ್ದುಮೀರುವ ದುಃಖ, ಕೋಪ ಮತ್ತು ವ್ಯಾಕುಲ ಕಂಡು ಜಿಗುಪ್ಸೆಯುಂಟಾಗುತ್ತದೆ. ಅವರು ಅನುಸರಿಸುವ ಸೃಜನಶೀಲ ಮಾದರಿಯಲ್ಲಿ ಒಂದು ಸಮುದಾಯದ ಸಾಂಸ್ಕೃತಿಕ ಶಿಲ್ಪದ ಬಗ್ಗೆ ಒಂದು ತರಹದ ಪರಿಕಲ್ಪನೆ ಇರುತ್ತದೆ. ಕಂಬಾರರೂ ಕೂಡ ಮನುವಾದಿಗಳ ರಾಜಕಾರಣವನ್ನು ವಿರೋಧಿಸುವವರೇ; ಆದರೆ ಅವರು ಬೇರೊಂದು ಬಗೆಯ ಕಾವ್ಯಮೀಮಾಂಸೆಯ ನೆಲೆಯಿಂದ ತಮ್ಮ ವಿರೋಧವನ್ನು ದಾಖಲಿಸುತ್ತಾರೆ.

ಇಂದು ಭಾರತೀಯ ರಾಜಕೀಯ ಕಲ್ಪನೆಗೆ ಕಂಬಾರರು ಅನಿವಾರ್ಯವಾಗಿದ್ದಾರೆ, ಏಕೆಂದರೆ ಕಾವ್ಯಮೀಮಾಂಸೆ ರಾಜಕಾರಣಕ್ಕಿಂತ ಹೆಚ್ಚು ರಾಜಕೀಯವಾಗಿದೆಯೆಂದು ನಂಬುವ ಕೆಲವೇ ಕೆಲವು ಲೇಖಕರಲ್ಲಿ ಅವರೊಬ್ಬರು. ದಲಿತ-ಬಹುಮಾನ ಚಳವಳಿಗಳು ಈ ಮಹಾನ್ ಕವಿಯಿಂದ ಕಲಿಯಲು ನಿರ್ಧರಿಸುವುದಾದರೆ ಪ್ರತಿನಿತ್ಯ ಅಸ್ಮಿತೆಯ ಸಂಬಂಧವಾದ ಪ್ರಶ್ನೆಗಳನ್ನು ಉತ್ತಮ ರೀತಿಯಲ್ಲಿ ಎದುರುಗೊಳ್ಳಲು ರಾಜಕಾರಣಕ್ಕೆ ಸಾಧ್ಯವಾಗಬಹುದು.

**ಕನ್ನಡಕ್ಕೆ : ಪ್ರೊ. ಸಿ. ನಾಗಣ್ಣ**

## ಮಹಾಮಾಯಿ ಕುರಿತು

**–** ಜಿ.ಎಸ್. ಆಮೂರ

– ಅನು: ಸಿ.ನಾಗಣ್ಣ

ರಾಷ್ಟ್ರದಲ್ಲೇ ಇಂದು ಪ್ರಮುಖ ನಾಟಕಕಾರಲ್ಲೊಬ್ಬರಾಗಿರುವ ಚಂದ್ರಶೇಖರ ಕಂಬಾರ ಅವರು ಕರ್ನಾಟಕದಲ್ಲಿ ವಾಸ್ತವೇತರ ನಾಟಕಗಳ ಹುಡುಕಾಟವಿದ್ದ ಸಂದರ್ಭದಲ್ಲಿ ಬರವಣಿಗೆಗೆ ತೊಡಗಿದರು. ಆ ಘಟ್ಟದಲ್ಲಿ ಲೇಖಕರು ಮಾಡಿದ ಮಹತ್ವದ ಶೋಧನೆಯೆಂದರೆ ಪುರಾಣದ ಮೌಲ್ಯವನ್ನು ಮುನ್ನೆಲೆಗೆ ತಂದದ್ದು. ಅಯನಸ್ಕೊ ಮುಂತಾದ ಪಾಶ್ಚಾತ್ಯ ನಾಟಕಕಾರರು ಮಿಥಕಕ್ಕಿಂತ ನಿಜವಾದದ್ದು ಬೇರೆ ಇಲ್ಲ ಎಂಬ ಸಂಗತಿಯನ್ನು ಪ್ರತಿಪಾದಿಸಿದ್ದು ಈ ಲೇಖಕರಿಗೆ ಸ್ಫೂರ್ತಿ ನೀಡಿರಬಹುದಾದರೂ ತಾತ್ಕಾಲಿಕವಾದ ಮಾದರಿಯನ್ನು ಸಾಂಕೇತಿಕವಾದ ಭಿತ್ತಿಯಾಗಿ ಪರಿವರ್ತಿಸುವಂಥ ಮಿಥಕ ವಿಧಾನ ನಮ್ಮ ದೇಶೀಯ ಸಾಹಿತ್ಯ ಪರಂಪರೆಯಲ್ಲೇ ಇದ್ದಿತೆಂಬುದನ್ನು ನಾವು ಮರೆಯುವಂತಿಲ್ಲ. ಆದ್ಯ ರಂಗಾಚಾರ್ಯ ಹಾಗೂ ಗಿರೀಶ್ ಕಾರ್ನಾಡರು ಮಹಾಭಾರತದಂಥ ಪುರಾಣಗಳಿಗೆ ತಿರುಗಿದ್ದು ವಾಸ್ತವತೆಯ ಶೃಂಖಲೆಯಿಂದ ಬಿಡುಗಡೆ ಹೊಂದಿ ಶಾಶ್ವತವಾದ ಸನ್ನಿವೇಶ ಹಾಗೂ ಮೌಲ್ಯಗಳ ಮುಖಾಂತರ ವರ್ತಮಾನವನ್ನು ವೀಕ್ಷಿಸಲು; ಆದರೆ ಕಂಬಾರರು ಇವರಿಗಿಂತ ಭಿನ್ನವಾಗಿ ತಮ್ಮ ಪ್ರಯೋಗಗಳಿಗಾಗಿ ಜನಪದ ಪುರಾಣಗಳು ಹಾಗೂ ಜನಪದ ಸಾಹಿತ್ಯದಿಂದ ಸ್ಫೂರ್ತಿ ಗಳಿಸಿದರು.

ಮನುಷ್ಯನನ್ನು ಹಾಗೂ ಮಾನವ ಸನ್ನಿವೇಶವನ್ನು ಕುರಿತ ಕಾಣ್ಕೆಯನ್ನು ಪರಿಣಾಮಕಾರಿಯಾಗಿ ಸಂವಹನಿಸಲು ಕಂಬಾರರು ಜನರ ಬದುಕಿನಿಂದ ಪ್ರೇರಿತರಾಗಿ ಆ ಚೈತನ್ಯವನ್ನು ಆವಾಹಿಸಿಕೊಂಡಿರುವಂತೆಯೇ ಅವರು ತಮ್ಮ ಸ್ವಂತ ಪ್ರತಿಭೆಯನ್ನೂ ಢಾಳಾಗಿ ಮೂಡಿಸಿದ್ದಾರೆ. ಶಿವರಾಮ ಕಾಂತರು ಯಕ್ಷಗಾನವನ್ನು ಆವಿಷ್ಕರಿಸಿದ ಮಾದರಿಯಲ್ಲಿ ಕೇವಲ ಜನಪದ ರಂಗಭೂಮಿಯನ್ನು ಕಂಬಾರರು ನಯಗೊಳಿಸಲಿಲ್ಲ. ಆದರೆಪಾರಂಪರಿಕ ರೂಪಕ್ಕೆಯೇ ಅವರು ನವಚೈತನ್ಯವನ್ನೂಡಿ ಕನ್ನಡ ನಾಟಕ ಮತ್ತು ರಂಗಭೂಮಿಗೆ ಹೊಸ ರೀತಿಯ ಬಿಡುಗಡೆಯನ್ನು ಪ್ರಾಪ್ತಗೊಳಿಸಿದ್ದಾರೆ. ಕಂಬಾರರ ಆರಂಭಿಕ ನಾಟಕಗಳಾದ ನಾರ್ಸಿಸಸ್ ಹಾಗೂ ಋಷ್ಯಶೃಂಗ ೧೯೭೦ ರಲ್ಲಿ ಪ್ರಕಟವಾದಾಗ ಅವುಗಳ ನಿಜವಾದ ಮಹತ್ವ ತಿಳಿಯಲಿಲ್ಲ; ಆದರೆ ಅವರು ಆ ನಂತರ ಬರೆದ ನಾಟಕಗಳು – ಜೋಕುಮಾರಸ್ವಾಮಿ (೧೯೭೨) ಮತ್ತು ಸಿರಿಸಂಪಿಗೆ (೧೯೮೯) ಸಮಕಾಲೀನ ರಂಗಭೂಮಿಯ ಮೇಲೆ ಬಹಳ ಪರಿಣಾಮ ಬೀರಿವೆ ಮತ್ತು ವಿಮರ್ಶೆಯ ದೃಷ್ಟಿಯಿಂದಲೂ ಹೆಚ್ಚಿನ ಗಮನವನ್ನು ಸೆಳೆದಿದೆ.

ನೀವು ಅರ್ಥಮಾಡಿಕೊಳ್ಳಲು ತೊಡಗಿರುವುದು ನಿರ್ವಸಾಹತೀಕರಣಗೊಂಡ ಭಾರತದ ಒಳತೋಟಿಗಳನ್ನೋ ಅಥವಾ ಮನುಷ್ಯ ಸಮಾಜದ ಮೂಲಭೂತ ಅಸ್ತಿಭಾರವನ್ನು ಕುರಿತು ಚಿಂತಿಸುತ್ತಿರುವಿರೋ ಎಂದು ಸಂದರ್ಶಕರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಕಂಬಾರರು ಹೇಳಿದರು, "ಇವೆರಡನ್ನು ನಾನು ಪ್ರತ್ಯೇಕವಾಗಿ ನೋಡಲಾರೆ; ಏಕೆಂದರೆ ಇಡಿಯಾಗಿರುವುದರಲ್ಲಿ ನನಗೆ ನಂಬಿಕೆ; ವ್ಯಕ್ತಿನೆಲೆಯಲ್ಲಾಗಲಿ ಅಥವಾ ಸಮಾಜದ ನೆಲೆಯಲ್ಲಾಗಲಿ ಎಲ್ಲ ಬಗೆಯ ವಿಘಟನೆಯನ್ನೂ ನಾನು ವಿರೋಧಿಸುತ್ತೇನೆ'. ವಿಚ್ಛಿದ್ರೀಕರಣದ ಪ್ರಕ್ರಿಯೆಯೇ ಪ್ರಧಾನವಾಗಿರುವ ಉತ್ಕಟತೆಯನ್ನು ನಾವು ಕಂಬಾರರಲ್ಲಿ ಕಾಣಬಹುದಾಗಿದೆ. ಜನಪದ ಪುರಾಣ ಮತ್ತು ಕತೆಯನ್ನು ಅವರು ಮತ್ತೆ ಮತ್ತೆ ತೆಕ್ಕೆಗೆ ತೆಗೆದುಕೊಳ್ಳುವ ಕಾರಣವೆಂದರೆ ಸಮಗ್ರತೆಯನ್ನು ಹಿಡಿಯಲು ಅವು ಒದಗಿಬರುವುದರಿಂದ.

ಭಾರತೀಯ ನಾಟಕ ಪರಂಪರೆಗೆ ಪೂರಕವಾದ ರೀತಿಯಲ್ಲಿ ಕಂಬಾರರ ಎಲ್ಲ ನಾಟಕಗಳೂ ಒಂದು ದೃಢವಾದ ನಿರೂಪಣಾ ಅಂಗವನ್ನು ಹೊಂದಿರುತ್ತವೆ; ಇದಕ್ಕೆ ಮಹಾಮಾಯಿ ಹೊರತಲ್ಲ. ಜನಪದ ಸಾಹಿತ್ಯದಲ್ಲಿ ವಿಧಿಯ ಸ್ಥಾನದಲ್ಲಿ ಬರುವ ಶಟಿವಿ-ಆರಂಭದಲ್ಲಿ ಇವಳನ್ನು 'ಮೃತ್ಯುದೇವತೆ' ಎಂದು ವರ್ಣಿಸಲಾಗಿದೆ – ತಬ್ಬಲಿಯಾದ ಸಂಜೀವವನ್ನು ತನ್ನಾಶ್ರಯಕ್ಕೆ ತೆಗೆದುಕೊಂಡು ಅವನಿಗೆ ವೈದ್ಯ ವಿದ್ಯೆಯನ್ನು ಕರುಣಿಸುತ್ತಾಳೆ; ಆದರೆ ಮೊದಲನೆಯ ದೃಶ್ಯದಲ್ಲೇ ಶ್ರುತಪಡುವಂತೆ ದೇವತೆಯು ಒಲಿದವರಿಗೆ ಮಾತ್ರ ಅವನ ವೈದ್ಯ ಅನುಕೂಲಕರವಾಗುವುದು. ಚಿಕಿತ್ಸೆಗಾಗಿ ಅವನನ್ನು ಸಮೀಪಿಸುವ ಮೂವರೆಂದರೆ ವಿದೂಷಕ ಮದನ, ಸಮಾಧಿ ತೋಡುವ ಮಾರ ಮತ್ತು ತನ್ನ ತಾಯಿ ಜೊತೆ ಬರುವ ದನಕಾಯುವವರ ಹುಡುಗ. ಆ ತಾಯಿಯ ದುಃಖವ ಕಂಡು ಅವನ ಹೃದಯ ಕಲಕುತ್ತದೆ. ಆದರೆ ಆಕೆ ಉಳಿದವರಿಬ್ಬರನ್ನು ರಕ್ಷಿಸು ಎಂದು ಸೂಚಿಸುತ್ತಾಳೆ. ಸಂಜೀವನಿಗೆ ತನ್ನ ತಾಯಿಯ ಬಗ್ಗೆ ಅಪಾರವಾದ ಮಮತೆ; ಆದರೆ ನನಗೆ ಸಂಪೂರ್ಣವಾದ ಸ್ವಾತಂತ್ರ್ಯ ಮತ್ತು ಆಯ್ಕೆ ಇಲ್ಲವೆಂದು ಕೊರಗುತ್ತಾನೆ. ಸ್ಥಳೀಯ ರಾಜನ ಮಗಳು ಒಂದು ವಿಚಿತ್ರ ಕಾಯಿಲೆಯಿಂದ ನರಳುತ್ತಿದ್ದು, ಆ ಬೇನೆಯ ಬಗ್ಗೆ ಯಾವ ವೈದ್ಯನೂ ಇದುವರೆಗೆ ಏನೂ ಹೇಳಲಾಗಿಲ್ಲವೆಂಬ ಸಂಗತಿಯನ್ನು ಸಂಜೀವ ಮದನನ ಮೂಲಕ ತಿಳಿಯುತ್ತಾನೆ. ಆಕಸ್ಮಾತ್ತಾಗಿ ರಾಜಕುಮಾರಿಯನ್ನು ಸಂಜೀವ ಭೇಟಿಯಾಗುವ ಸಂದರ್ಭ ಬಂದಾಗ ಆಕೆಯನ್ನು ಪೂರ್ಣ ಆರೋಗ್ಯವಂತಳಾಗಿ ಮಾಡಬೇಕೆಂದು ಸಂಜೀವ ತೀರ್ಮಾನಿಸುತ್ತಾನೆ. ತನ್ನ ವೃದ್ಧ ತಾಯಿಯಿಂದ ಇದಕ್ಕೆ ಸಮ್ಮತಿ ದೊರೆಯುತ್ತದೆ. ಆದಾಗ್ಯೂ ಆಕೆ ಸಾಯಬೇಕೆಂದು ತಾಯಿ ಲೆಕ್ಕ ಹಾಕುತ್ತಾಳೆ. ಇದು ಗೊತ್ತಾಗಿ ಅವರಿಬ್ಬರ ನಡುವೆ ಬಹಿರಂಗವಾಗಿಯೇ ಮಾತುಕತೆ ನಡೆಯುತ್ತದೆ. ಸಂಜೀವನಿಗೆ ಪ್ರೀತಿಪಾತ್ರವಾಗಿದ್ದ ಜಿಂಕೆ ನೇತ್ರಾವತಿಯ ಸಾವನ್ನು ಸಾಧಿಸುವುದರ ಮೂಲಕ ತಾಯಿ ತನ್ನ ಶಕ್ತಿಯನ್ನು ಪ್ರದರ್ಶಿಸುತ್ತಾಳೆ; ತರುವಾಯ ಮದನನ ಹೆಂಡತಿ ಮಂಜರಿಯ ಮೃತ್ಯುವಿಗೆ ಕಾರಣಳಾಗುತ್ತಾಳೆ; ರಾಜಕುಮಾರಿ ಗುಣಮುಖಳಾದ ಸಂಭ್ರಮವನ್ನಾಚರಿಸಲು ಮಂಜರಿ ಶಿವನ ಪಾತ್ರ ಧರಿಸಿ ನಾಟಕದ ಅಭಿನಯದಲ್ಲಿ ತೊಡಗಿದ್ದಾಗಲೇ ಅವಳು ಅಸುನೀಗುವಂತೆಸಗುತ್ತಾಳೆ. ರಾಜಕುಮಾರಿಯ ಪ್ರೇಮಕ್ಕೆ ಮನಸೋಲುವ ಸಂಜೀವ ರಾಜಕುಮಾರಿಯ ಕೊರಳಿಗೆ ಸುತ್ತಿದ ಗಿಡಮೂಲಿಕಾ ಬಳ್ಳಿಯನ್ನು ತೆಗೆದು ತನಗೆ ಕೊಡು ಎಂದು ತಾಯಿ ಹೇಳಿದರೂ ಮಗ ಆ ಮಾತನ್ನು ನೆರವೇರಿಸದೆಯೇ ಧಿಕ್ಕರಿಸುತ್ತಾನೆ; ಅವಳ ಕೋಪ ಉಕ್ಕೇರುತ್ತದೆ. ತಾಯಿಯ ಸೋಲಿನಲ್ಲಿ ನಾಟಕ ಮುಕ್ತಾಯವಾಗುತ್ತದೆ. ಮಗನಿಗೆ ಆಯಸ್ಸನ್ನು ಹೆಚ್ಚಿಗೆ ಕೊಡುತ್ತಾಳೆ, ಅದನ್ನು ಸಂಜೀವ ರಾಜಕುಮಾರಿಗೆ

ವರ್ಗಾಯಿಸುತ್ತಾನೆ – ಇದರಿಂದ ನೊಂದುಕೊಂಡ ತಾಯಿ ಸಾಯುತ್ತಾಳೆ. ಆರೋಗ್ಯವನ್ನು ಮರಳಿ ಪಡೆಯುವಂಥ ರಾಜಕುಮಾರಿ ಸಂಜೀವವನ್ನು ಮದುವೆಯಾಗುತ್ತಾಳೆ.

ಮೃತ್ಯುದೇವತೆಯ ಮೇಲೆ ಮನುಷ್ಯ ವಿಜಯ ಸಾಧಿಸುವ ಕತೆ ಜಗತ್ತಿನಾದ್ಯಂತ ಸಾಹಿತ್ಯದ ವಸ್ತುವಾಗಿದೆ – ಜಯದ ಸಾಧನಗಳು ಬೇರೆ ಬೇರೆಯಾಗಿದ್ದರೂ. ಈ ನಾಟಕದಲ್ಲಿ ಒಂದು ಉಪವಸ್ತುವಾಗಿ ಪ್ರಧಾನವಾಗಿಯೇ ಕಾಣಿಸಿಕೊಳ್ಳುವಂಥ ಮಾರ್ಕಂಡೇಯ ಪುರಾಣದಲ್ಲಿ ಸಾವಿನ ಮೇಲೆ ಗೆಲುವನ್ನು ಭಕ್ತಿಯ ಮೂಲಕ ಸಾಧಿಸಲಾಗುತ್ತದೆ. ಸಾವಿತ್ರಿ ಕತೆಯಲ್ಲಿ ಜ್ಞಾನದ ಮೂಲಕ, ಹರ್ಕ್ಯುಲೆಸ್ ಪುರಾಣದಲ್ಲಿ ಬರೇ ಶಾರೀರಿಕ ಶಕ್ತಿಯಿಂದ. ಆ ವಸ್ತುವಿಗೆ ಬಹಳ ಸಂಕೀರ್ಣವೂ, ನವೀನವೂ ಆದ ತಿರುವನ್ನು ಮಹಾಮಾಯಿ ನಾಟಕ ನೀಡಿದೆ. ಪೂರ್ವ ನಿಗದಿತವಾದ ಸಾವು ಮುಟ್ಟದ ಹಾಗೆ ರಾಜಕುಮಾರಿಯನ್ನು ಕಾಪಾಡುವಂಥದ್ದು ಸಂಜೀವನ ವೈದ್ಯ ಕೌಶಲವಲ್ಲ. ಆದರೆ ಪರಸ್ಪರ ಪ್ರೇಮ (ಕೊನೆಗೆ ರಾಜಕುಮಾರಿಯ ಕೊರಳಿಗೆ ಸುತ್ತಿದ ಬಳ್ಳಿಯನ್ನು ದೇವತೆ ಬಲವಂತವಾಗಿ ತೆಗೆದುಹಾಕುತ್ತಾಳೆ). ಮನುಷ್ಯ ಪ್ರೇಮದ ಜಯವೆಂದು ತೀರ್ಮಾನಿಸುವ ಮೊದಲು ನಾವು ಎಚ್ಚರವಹಿಸುವುದೊಳಿತು. ನಾಟಕದ ಅಂತ್ಯದಲ್ಲಿ ದೇವತೆ ಒಂದು ದೊಡ್ಡ ಗಿಡುಗವಾಗಿ ರೂಪಾಂತರ ಹೊಂದಿ ನೋವು ಮತ್ತು ಕೋಪದಿಂದ ಕಂಪಿಸುತ್ತಾಳೆ; ಇದು ಅವಳ ಪರಾಭವದ ಪ್ರತೀಕವಾಗಿರುವುದು; ಆದರೆ ಅವಳು ತನ್ನ ಮಗನ ಜೀವಾವಧಿಯನ್ನು ದ್ವಿಗುಣಗೊಳಿಸುವುದರ ಜೊತೆಗೆ ಆ ಬದುಕನ್ನು ಅವನಿಗೆ ಇಚ್ಛೆ ಬಂದ ಹಾಗೆ ವಿನಿಯೋಗಿಸುವ ಸ್ವಾತಂತ್ರ್ಯವನ್ನೂ ನೀಡಿದ ಕಾರಣ ಸಂಜೀವ ರಾಜಕುಮಾರಿಯ ಜೀವವನ್ನು ಉಳಿಸಲು ಸಾಧ್ಯವಾಗುತ್ತದೆ. ಆದ ಕಾರಣ ದೇವತೆಯದು ನಿಜವಾದ ಅರ್ಥದಲ್ಲಿ 'ಪರಾಭವ' ಎಂದು ತೀರ್ಮಾನಿಸಲು ಕಷ್ಟವಾಗುತ್ತದೆ. ಅವಳ 'ಈ ಪರಾಭವ'ವೆಂಬುದು ಅವಳ ಸನ್ನಿವೇಶದ ಸಾಮರ್ಥ್ಯದ ಒಂದು ಅಂಗವೇ ಅಲ್ಲವೆ? ಎಂಬ ಪ್ರಶ್ನೆ ಇದ್ದೇ ಇದೆ. ತನ್ನ ಸಂಕಲ್ಪವನ್ನು ಧಿಕ್ಕರಿಸಿದ್ದಕ್ಕಾಗಿ ಸಂಜೀವ ಬೆಲೆ ತೆರಲೇಬೇಕೆಂದು ತಾಯಿ ಹಠ ಹಿಡಿಯುವುದು ನಿಜವಾಗುತ್ತದೆ. ಹೇಗೆಂದರೆ, ಅವನೇನೊ ರಾಜಕುಮಾರಿಯ ಪ್ರಾಣವನ್ನು ಉಳಿಸಿದ; ಆ ಪ್ರಕ್ರಿಯೆಯಲ್ಲಿ ಜನರ ದೃಷ್ಟಿಯಲ್ಲಿ ಅವನೊಬ್ಬ ನೋವನ್ನು ನಿವಾರಿಸುವವನೆಂಬ ಗುರುತು ಮರೆಯಾಗಿಬಿಡುತ್ತದೆ.

ಮನುಷ್ಯ ಮತ್ತು ಮನುಷ್ಯೇತರವೆಂಬ ಎರಡು ಸ್ತರಗಳು ಮತ್ತು ಪರಿಪೇಕ್ಷ್ಯಗಳು ನಾಟಕದಲ್ಲಿದೆ. ಮನುಷ್ಯಾಂಗವು ವೈಚಾರಿಕ ವಿಶ್ಲೇಷಣೆಗೆ ಒಡ್ಡಿಕೊಂಡರೆ, ಮನುಷ್ಯೇತರವಾದದ್ದು ತನ್ನ ನಿಯಮಗಳಿಗೇ ಒಳಪಡುತ್ತಾ ಎಲ್ಲ ಬಗೆಯ ವೈಚಾರಿಕ ಹಾಗೂ ಬೌದ್ಧಿಕ ನಿಯಮಗಳಿಗಿಂತ ಅತೀತವಾಗಿದೆ. ಈ ಎರಡೂ ವ್ಯವಸ್ಥೆಗಳು ಹಲವು ಬಿಂದುಗಳಲ್ಲಿ ಒಂದನ್ನೊಂದು ಸಂಧಿಸುವವಾದರೂ ಪರಸ್ಪರ ಸಾತತ್ಯವನ್ನು ಸಾಧಿಸುವುದಿಲ್ಲ. ಮಹಾಮಾಯಿಯ ಪ್ರಪಂಚದಲ್ಲಿ ಪಾತ್ರಗಳನೇಕ ಇವೆ; ಆದರೆ ಇಲ್ಲಿ ಪ್ರಧಾನ ಭೂಮಿಕೆಯಲ್ಲಿರುವವರು ಸಂಜೀವ ಮತ್ತು ರಾಜಕುಮಾರಿ. ರಾಜ, ಮಂತ್ರಿ ಮತ್ತು ಸೇವಕಿ – ಇವರೆಲ್ಲ ಹೆಚ್ಚೂ ಕಡಿಮೆ ಆ ವಿನ್ಯಾಸದ ಒಂದು ಭಾಗ ಮಾತ್ರ. ಸಂಜೀವ ಒಂದರ್ಥದಲ್ಲಿ ಗಡಿಗೆರೆಯ ಪಾತ್ರ, ಅಂದರೆ ಅವನು ಸಂಪೂರ್ಣವಾಗಿ ಈ ಜಗತ್ತಿಗೆ ಸೇರಿದವನಲ್ಲ. ಮನುಷ್ಯೇತರ ಪ್ರಪಂಚವನ್ನು ಶೆಟಿವಿ ಮತ್ತವಳ ಪರಿವಾರದವರು, ಅಂದರೆ ಗಿರಿಮಲ್ಲಿಗೆ ಮತ್ತು ಇಬ್ಬರು ಸೇಡುಮಾರಿಯರು ಪ್ರತಿನಿಧಿಸುತ್ತಾರೆ. ಅರಮನೆಯ ಮನುಷ್ಯ ವ್ಯವಸ್ಥೆಯ ಸಂಕೇತವಾದರೆ, ನಗರದಿಂದ ಹೊರಗಿರುವ ಬೆಟ್ಟದ ಗುಹೆ ಮನುಷ್ಯೇತರ ಸ್ತರದ ಸಂಕೇತವಾಗಿದೆ. ತಾನೇ ಅಂತಿಮ ಸತ್ಯವೆಂದು ತಾಯಿ ನಿರ್ಧರಿಸುತ್ತಾಳೆ : "ಅಂತಿಮ ಸತ್ಯವೆಂಬುದೇನಾದರೂ ಇದ್ದರೆ ಅದು ನಾನೇ… ಬೇರೊಂದಿಲ್ಲ. ನನ್ನನ್ನ ಯಾವ ಹೆಸರಿನಿಂದಲಾದರೂ ಕರೆಯಿಸಿ, ಶಿವಲಿಂಗ ಅಂತಲಾದರೂ ಕರೆಯಿರಿ. ಬೆಳಕಿಗೆ ಮಿತಿಯಿದೆ, ಆದರೆ ಕತ್ತಲೆಗೆ ಮಿತಿಯಿಲ್ಲ". ಉಳಿದೆಲ್ಲ ದೇವತೆಗಳು ಕೇವಲ ಮನುಷ್ಯ ಭಯ ಹೆತ್ತ ಬೆಂತರುಗಳೆಂದು ಜರೆಯುತ್ತಾಳೆ. ಆದರೆ ದೇವತೆ ಹೇಳಿಕೊಳ್ಳುವ ಸಂಗತಿ ಹಾಗೂ ಆಕೆಯ ದೃಷ್ಟಿಯಲ್ಲಿ ವಿಶ್ವರೂಪ ದರ್ಶನವೆಂದರೆ ಏನು ಎಂದು ತಿಳಿಯುವಾಗ ಅಂತಿಮ ಸತ್ಯವೆಂಬುದು ಶಿವಲಿಂಗ ಸಂಕೇತಿಸುವುದೇ ಆಗಿದೆ. ಆದರೆ ಆ ಸೂಚನೆಯೂ ಸಹ ದ್ವಂದ್ವದಲ್ಲೇ ಸೇರ್ಪಡೆಯಾಗಿದೆ. ನಾಟಕದೊಳಗಿನ ನಾಟಕದಲ್ಲಿ ಶಿವನ ಪಾತ್ರವನ್ನು ಅಭಿನಯಿಸಲು ಮದನನಿಂದ ಪ್ರೇರೇಪಿತಳಾದ ಮಂಜರಿ ಮಾಯಿಯಿಂದ ಹತಳಾಗುತ್ತಾಳೆ. ಪಲಾಯನವಾಗಲು ತರಾತುರಿಯಲ್ಲಿರುವ ಸಂಜೀವ ಮತ್ತು ರಾಜಕುಮಾರಿ ಅಡ್ಡಗಟ್ಟಲ್ಪಟ್ಟು ಅಂತಿಮ ತೀರ್ಪಿಗಾಗಿ ಮಾಯಿಯ ಗುಹೆಗೆ ಸೆಳೆದವರಾಗಿದ್ದಾರೆ. ಮಾರ್ಕಂಡೇಯ ಪುರಾಣವನ್ನು ಬುಡಮೇಲು ಮಾಡುವಂಥ ಯೋಜನೆಯನ್ನು ನಾಟಕ ಹಾಕಿ ಕೊಳ್ಳದಿದ್ದರೂ ಈ ಪುರಾಣವನ್ನು ಉಪಯೋಗಿಸಿರುವ ರೀತಿಯಲ್ಲಿ ವ್ಯಂಗ್ಯವಿದೆ.

ಕರುಣೆ, ಪ್ರೀತಿ, ಸ್ವಾತಂತ್ರ್ಯ, ಸತ್ಯ ಮತ್ತು ಸೃಜನಶೀಲತೆಯಂಥ ಮಾನವೀಯ ಮೌಲ್ಯಗಳು ಈ ನಾಟಕದ ಅಧಿಭೌತಿಕ ದೃಷ್ಟಿಕೋನದ ಕೇಂದ್ರದಲ್ಲಿವೆ ಹಾಗೂ ಈ ಮೌಲ್ಯಗಳನ್ನು ಮನುಷ್ಯ ಹಾಗೂ ಮನುಷ್ಯೇತರವೆಂಬ ಎರಡು ಸ್ತರಗಳಲ್ಲಿ ಕಾಣಲಾಗಿದೆ.

ರಾಜಕುಮಾರಿಯ ದೇಹಾಲಸ್ಯವೆಂಬುದು ಇಡೀ ರಾಜ್ಯಕ್ಕೆ ದುಃಖ ಮತ್ತು ವ್ಯಾಕುಲದ ಸಂಗತಿಯಾಗಿದೆ, ಆದರೆ ಅವಳ ಸಾವಿಗಾಗಿ ಕಾದು ಕುಳಿತಿರುವ ಸೇಡುಮಾರಿ ಕೊಂಚವೂ ವಿಚಲಿತಳಾಗುವುದಿಲ್ಲ.

ಏನಿದು ಆಶ್ಚರ್ಯ!

ಹೊರಗೆ ಬೆಂಕಿ ಹಾಕಿಲ್ಲ – ಛಟ್ಟ ಕಟ್ಟಿಲ್ಲ! ಒಳಗಡೆ ಯಾರೂ ಅಳುತ್ತಿಲ್ಲ! ರಾಜಕುಮಾರಿ ಇನ್ನೂ ಸತ್ತಿಲ್ಲವೆ? ಆಗಲೇ ಇಲ್ಲಿ ಆಳುವ ಜನಸಂದಣಿ ಸೇರಿರಬಹುದು. ಅಳುಬುರುಕ ಕವಿಗಳು ರಚಿಸಿದ ಚರಮ ಗೀತೆಗಳನ್ನು ಕಲಾವಿದ ಹೆಂಗಸರು ಹಾಡುತ್ತಿರಬೇಕು ಅಂದುಕೊಂಡೆ. ಇಲ್ಲಿ ನೋಡಿದರೆ ಏನೂ ಆಗಿಲ್ಲವೆ!

ಸಂಜೀವ ರಾಜಕುಮಾರಿ ಬದುಕಬೇಕೆಂದು ಹಲುಬುವುದು ಹಾಗೆಯೇ ದೇವತೆ ಅವಳು ಅಸುನೀಗಬೇಕೆಂದು ತುದಿಗಾಲಲ್ಲಿ ನಿಂತಿರುವುದು, ವೈದೃಶ್ಯದ ಪರಾಕಾಷ್ಠೆಯಾಗುತ್ತದೆ. ಸಂಜೀವ ಇನ್ನಿಲ್ಲವೆಂಬ ರೀತಿಯಲ್ಲಿ ತನ್ನ ತಾಯಿಗೆ ಮೊರೆಯಿಡುತ್ತಾನೆ.

ರಾಜಕುಮಾರಿಯ ಜೀವ ನಿನ್ನ ಕೈಲಿದೆ. ನನ್ನ ಭವಿಷ್ಯ ಅವಳ ಕೈಲಿದೆ!

ವಿಚಿತ್ರವಲ್ಲವೆ? ಅವಳ ಕಣ್ಣ ಬೆಳಕನ್ನ ನಂದಿಸಬೇಡ ತಾಯಿ!

ಆ ಮೊರೆ ಅವಳ ಮೇಲೆ ಏನೂ ಪರಿಣಾಮವನ್ನುಂಟು ಮಾಡುವುದಿಲ್ಲ; ಕಾರಣ ಅವಳೇ ಹೇಳುವಂತೆ 'ಅವಳು ಕೇವಲ ಜೀವವಿರದ ಕೊರಡು', 'ಹೃದಯವಿಲ್ಲದ ಅಸ್ಥಿಪಂಜರ'. ಮನುಷ್ಯನ ಸಾಧನೆ, ಸತ್ಯದ ಬಗ್ಗೆ ಅವನಿಗಿರುವ ಅರಿವು, ಪ್ರೇಮ ಮತ್ತು ದೇವರ ಬಗ್ಗೆ ಅವನ ನಂಬಿಕೆ, ಅವನ ಪ್ರೇರಣೆ ಮತ್ತು ತುಡಿತ – ಎಲ್ಲವೂ ದೇವತೆಯ ದೃಷ್ಟಿಯಲ್ಲಿ ಕ್ಷುಲ್ಲಕ.

**ಮಹಾಮಾಯಿ**ಯ ನಿಜವಾದ ಮಹತ್ವವಿರುವುದು ಮನುಷ್ಯ ಸ್ಥಿತಿಯನ್ನು ನವೀನ ರೀತಿಯಲ್ಲಿ ಅನ್ವೇಷಿಸಿರುವುದರಲ್ಲಿ – ಅಂದರೆ, ಸ್ವಾತಂತ್ರ್ಯವನ್ನು ನಿರಾಕರಿಸುವ ಬಲಗಳು ನಿಯಂತ್ರಿಸುವ ಜಗತ್ತಿನಲ್ಲಿ ಬದುಕುವುದೆಂದರೆ ಹೇಗಿರುತ್ತದೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ನಾಟಕದ ನಾಯಕನಾದ ಸಂಜೀವ ಒಬ್ಬ ತಬ್ಬಲಿಯಾಗಿ ಬದುಕನ್ನು ಆರಂಭಿಸುತ್ತಾನೆ; ದೇವರಿಲ್ಲದ ಜಗತ್ತಿನಲ್ಲಿ ಆರಂಭವಾಗುವ ಸಾಂಕೇತಿಕ ಬದುಕು ಇದು. ಮೃತ್ಯು ದೇವತೆಯು ಅವನಿಗೆ ಸಂಕಟ ನಿವಾರಣೆಯ ಶಕ್ತಿಯನ್ನು ನೀಡುತ್ತಾಳಾದರೂ ಅವನಿಂದ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತಾಳೆ. ತನ್ನ ಬದುಕಿನಲ್ಲಿ ಇಲ್ಲವಾಗಿರುವುದು ಏನು ಎಂಬುದನ್ನು ಸಂಜೀವ ಅರ್ಥಮಾಡಿಕೊಳ್ಳುವುದು, ಪ್ರೇಮದ ಮಹತ್ವವನ್ನು ಶೋಧಿಸುವುದು ಮತ್ತು ಆಧ್ಯಾತ್ಮಿಕ ಚೈತನ್ಯವನ್ನು ಸಾಕ್ಷಾತ್ಕಾರಿಸಿಕೊಳ್ಳುವುದು – ಇವು ಈ ನಾಟಕದ ನಿಜವಾದ ಬೆಳವಣಿಗೆಯಾಗಿವೆ. ನಾಟಕೀಯ ದೃಷ್ಟಿಕೋನದಿಂದ ಹೇಳುವುದಾದರೆ ಈ ಪ್ರಕ್ರಿಯೆ ಪ್ರಾರಂಭವಾಗುವುದು ಆತ ರಾಜಕುಮಾರಿಯನ್ನು ಭೇಟಿ ಮಾಡಿ ಅನುಕ್ತವಾದ ಕನಸುಗಳನ್ನು ಅವಳೊಡನೆ ಹಂಚಿಕೊಳ್ಳುವಾಗ.

ಮನುಷ್ಯ ತೀರ್ಮಾನ ತೆಗೆದುಕೊಳ್ಳಲೇಬೇಕಾದ ಗಳಿಗೆಗಳು ಬಂದೇ ಬರುತ್ತವೆಂದು ನನಗೆ ಗೊತ್ತಿತ್ತು. ಆದರೆ ತಾಯಿಯನ್ನು ವಿರೋಧಿಸುವ ತೀರ್ಮಾನ ತೆಕ್ಕೊಳ್ಳಬೇಕಾಗಬಹುದೆಂದು ಅಂದುಕೊಂಡಿರಲಿಲ್ಲ.

ನಿನ್ನನ್ನು ಮದುವೆಯಾಗಬೇಕಾದರೆ ನನಗೆ ನನ್ನ ಸ್ವಾತಂತ್ರ್ಯ ದಕ್ಕಬೇಕು. ಸ್ವಾತಂತ್ರ್ಯದ ಬೆಲೆ ಮತ್ತು ಅನಿವಾರ್ಯತೆಗಳನ್ನು ತಿಳಿಸಿಕೊಟ್ಟದ್ದಕ್ಕಾಗಿ ನಿನಗೆ ಕೃತಜ್ಞನಾಗಿದ್ದೇನೆ ರಾಜಕುಮಾರಿ. ತನ್ನ ಸ್ವಾತಂತ್ರ್ಯವನ್ನು ಗುರುತಿಸಿಕೊಳ್ಳದೆ ಮನುಷ್ಯ ತನ್ನ ಸುತ್ತ ಭಯಂಕರ ನರಕ ಸೃಷ್ಟಿ ಮಾಡಿಕೊಂಡಿದ್ದಾನೆಂದು ಅನಿಸುತ್ತದೆ. ಸ್ವಾತಂತ್ರ್ಯ ಎಂದರೆ ಮನುಷ್ಯ ಮನುಷ್ಯನಾಗೋದೇ. ಅದಾಗದ ಹಾಗೆ ತಾಯಿ ನಮ್ಮ ಸುತ್ತ ಸಾವಿನ ಬಲೆ ಹೆಣೆದಿದ್ದಾಳೆ.

ಈ ಬಗೆಯಾದ ಅವನ ಸ್ವಾತಂತ್ರ್ಯಾಪೇಕ್ಷೆಯೇ ತನ್ನ ತಾಯಿಯನ್ನು ಎದುರಿಸುವಂಥ ಧೈರ್ಯವನ್ನು ಅವನಿಗೆ ನೀಡುತ್ತದೆ – ಅದರ ಪರಿಣಾಮದ ಅರಿವು ಇದ್ದಾಗ್ಯೂ. ತನ್ನ ತಾಯಿ ಎಷ್ಟೇ ಹಠ ಹಿಡಿಯುವಾಗಲೂ ಆತ ರಾಜಕುಮಾರಿಯ ಕೊರಳಿಂದ ಮೂಲಿಕಾ ಬಳ್ಳಿಯನ್ನು ತೆಗೆಯಲು ನಿರಾಕರಿಸುತ್ತಾನೆ; ಮನುಷ್ಯ ಬದುಕಿನ ಪರಿಶುದ್ಧತೆಗೆ ಅವನು ತೋರುವ ಬದ್ಧತೆಗೆ ಇದು ಸಾಕ್ಷಿಯಾಗಿದೆ. ಮದನನಿಗೆ ಅವನು ಹೇಳುತ್ತಾನೆ, "ಯಾವ ಮನುಷ್ಯನೇ ಆಗಲಿ ತನಗಿರುವ ಒಂದೇ ಬದುಕನ್ನು ಮಲಿನಗೊಳಿಸಿಕೊಳ್ಳಲಾರ – ಅದೆಷ್ಟೇ ನಿಕೃಷ್ಟವೂ, ಅರ್ಥರಹಿತವೂ ಆಗಿದ್ದರೂ". ಅಮರತ್ವವನ್ನು ಕೊಡುವುದಾಗಿ ಅವನ ತಾಯಿ ಅಂತಿಮವಾಗಿ ಒಡ್ಡುವ ಆಮಿಷವನ್ನು ಅವನು ನಿರಾಕರಿಸುವಾಗ ಅವನ ದೃಢವಾದ ನಂಬಿಕೆ ಢಾಳಾಗಿ ಎದ್ದು ತೋರುತ್ತದೆ. ಕಾರಣವಿಲ್ಲದೇ ಕಂಬಾರರು ತಮ್ಮ ನಾಟಕಕ್ಕೆ ಮೃತ್ಯುದೇವತೆಯ ಹೆಸರನ್ನಿಟ್ಟಿಲ್ಲ. ಬದುಕಿನ ಮೇಲೆ ಸಾವು ಸವಾರಿ ಮಾಡುವುದನ್ನು ಸಂಜೀವ ನಿರಾಕರಿಸುತ್ತಾನೆ, ಆದರೆ ಸಾವೆಂಬುದು ಮನುಷ್ಯ ಸ್ಥಿತಿಯ ತಾರ್ಕಿಕ ಅಂತ್ಯವೆಂಬುದನ್ನು ಅಂಗೀಕರಿಸುತ್ತಾನೆ.

**ಮಹಾಮಾಯಿ**ಯಲ್ಲಿ ಕಂಬಾರರು ನಾಟಕ, ನಿರೂಪಣೆ ಮತ್ತು ಕಾವ್ಯ – ಹೀಗೆ ಮೂರು ಮಾದರಿಗಳನ್ನು ಏಕತ್ರಗೊಳಿಸಿದ್ದಾರೆ. ಸಂವಾದ ಶಿಲ್ಪ ಮತ್ತು ನಾಟಕೀಯ ಸಂಘರ್ಷವನ್ನು ಅದು ಲೀನಗೊಳಿಸಿಕೊಂಡಿದೆ; ಕಥನ ಮತ್ತು ವಿವರಣಾತ್ಮಕ ತಂತ್ರವನ್ನು ಉಪಯೋಗಿಸಿ ಕಾವ್ಯದ ಧ್ವನಾತ್ಮಕ ಸಾಮರ್ಥ್ಯವನ್ನು ಸಾಕ್ಷಾತ್ಕರಿಸಿಕೊಂಡು ಹಲವು ಸ್ತರಗಳಲ್ಲಿ ಏಕಕಾಲದಲ್ಲಿ ಕೆಲಸ ಮಾಡುತ್ತದೆ. ನಾಟಕಕಾರ, ಕವಿ ಹಾಗೂ ಕಾದಂಬರಿಕಾರನನ್ನು ತನ್ನಲ್ಲೇ ಐಕ್ಯಗೊಳಿಸಿಕೊಂಡು ಒಬ್ಬ ಕಲಾವಿದ ಮಾಡಿದ ಅಪರೂಪದ ಸೃಷ್ಟಿಯಾಗಿದೆ ಈ ಮಹಾಮಾಯಿ. ನಾಟಕದ ಧ್ವನಿ ಮತ್ತು ಚಲನೆ ಕೂಡ ಇದೇ ಬಗೆಯಾದ ವೈವಿಧ್ಯತೆಯಿಂದ ಕೂಡಿದೆ. ವಿದೂಷಕನನ್ನು ಒಳಗೊಂಡಿರುವ ದೃಶ್ಯದಲ್ಲಿ ಅಸದೃಶವಾದ ವಿನೋದವಿದ್ದರೆ ನಾಟಕದ ಕೊನೆಯ ದೃಶ್ಯದಲ್ಲಿ ದುರಂತದ ತುಟ್ಟ-ತುದಿಯನ್ನು ಕಾಣುತ್ತೇವೆ. ಬೇರೆ ಬೇರೆ ಮೂಲಗಳಿಂದ ಆಯ್ದ ವಿಸ್ಮಯಕಾರಿಯಾದ ಸಂಕೇತಗಳ ಸರಮಾಲೆಯೆ ನಾಟಕದಲ್ಲಿ ಕಂಡುಬಂದಿದ್ದು ಅದರ ದೃಶ್ಯೀಯ ಹಾಗೂ ಕಾಲ್ಪನಿಕ ಶಕ್ತಿಯನ್ನು ಗಮನಿಸಿದರೆ ಕನ್ನಡ ನಾಟಕಗಳಲ್ಲಿ ಏಕೆ, ಸಮಕಾಲೀನ ಭಾರತೀಯ ನಾಟಕಗಳಲ್ಲಿಯೇ ಇದಕ್ಕೆ ಸರಿಸಮಾನವಾದ ಇನ್ನೊಂದು ಕೃತಿ ಇದೆ ಎಂದು ಅನ್ನಿಸುವುದಿಲ್ಲ.

* * *